eg. No. M. 1550

31—1—1936

IF NOT

delivered

please return to

"KODAGU"
OFFICE,
MERCARA.

KODAGU

ಕೊಡಗು

ಅಚ್ಚುಮೆಚ್ಚಿನ
ಮುದ್ರಣ ಕಲಸಕ್ಕೆ
"ಕೊಡಗು"
ಪ್ರೆಸ್ಸು,
ಮಡಿಕೇರಿ.

ಹೆಚ್ಚಿನ ವಿಷಯಕ್ಕೆ
ಕೂಡಲೆ ವಿಚಾರಿಸಿರಿ.

ಕ್ಷೀಣ ಭೂತದಯಾಯಾಂ ವಿದ್ಯಾ ವೀಜಿ ಪ್ರಯುಕ್ಷತಾ॥ ಐಕ್ಯಮುಕ್ಯೇನ ಜೇತವ್ಯಾಂ ಸುಸ್ಥಿರಾ ರಾಜ್ಯ ಸಂಪದಾ

ಪ್ರತಿ ಶುಕ್ರವಾರ ಪ್ರಕಟಿಸಲ್ಪಡುವದು.

ವಾರ್ಷಿಕ ಚಂದಾ ರೂ. ೩—೮—೦.

ಸಂಪಾದಕ—ಪಂದ್ಯಂಡ ಐ. ಬೆಳ್ಯಪ್ಪ.

ಸಂಪುಟ ೧೫] ಮಡಿಕೇರಿ, ಸನ್ ೧೯೩೬ನೇ ಇಸವಿ ಜನವರಿ ತಾರೀಕು ೩೧ನೇ ಶುಕ್ರವಾರ. [ಸಂಚಿಕೆ ೫೨

Telephon ;
3145

By Appointment
To H. E. The Governor of Madras.

Telegrams:
'PRECIOUS.'



V. SUBRAMANIA IYER.
Jeweller, & Diamond Merchant,
52—10 2 & 3 Kuppumuthu Street Tiruvateswaranpet. POST BOX 423 TRIPLICANE. P. O., MADRAS.
Catalogue & special designs with quotations (free) on enqu ry.

1906ರಲ್ಲಿ ಸ್ಥಾಪಿತವಾದದ್ದು.

ದಿ ಕೆನರಾ ಬ್ಯಾಂಕಿಂಗ್ ಕೊಪರೇಷನ್ ಉಡುಪಿ—ಲಿಮಿಟೆಡ್.

(ಬ್ರಿಟಿಷ್ ಇಂಡಿಯದಲ್ಲಿ ರಜಿಸ್ಟರ್ ಆದದ್ದು.)

ಹೆಡ್ ಆಫೀಸು—ಉಡುಪಿ.

ಶಾಖೆಗಳು,
(1) ಉಡುಪಿ
(2) ಕುಂದಾಪುರ
(3) ಮಂಗಳೂರು—ರಥಬೀದಿ
(4) ಮಂಗಳೂರು—ಬಂದರ್
(5) ಮದರಾಸು
(6) ಶಿವಮೊಗ್ಗಾ
(7) ಮಡಿಕೇರಿ
(8) ವೀರರಾಜೇಂದ್ರಪೇಟೆ

ಬೀಂಕರರು,
(1) ಬೊಂಬಾಯಿ
(2) ಕಲ್ಕತ್ತಾ
(3) ಕರಾಚಿ
(4) ಕೊಚ್ಚಿನ್
(5) ಮೈಸೂರು
(6) ಬೆಂಗಳೂರು ಇತ್ಯಾದಿ ಸ್ಥಳಗಳಲ್ಲಿ

ನಿಮ್ಮ ಸೇವೆಯೇ ನಮ್ಮ ಧ್ಯೇಯ.

ತಾ. 15—1—1936 ರಿಂದ ಚಿನ್ನಾಭರಣಗಳ ಮೇಲಣ ಸಾಲಗಳ ಬಡ್ಡಿಯ ದರವನ್ನು ಅತೀ ಕಡಿಮೆ ದರಕ್ಕೆ ಇಳಿಸಲಾಗಿದೆ.

ನಿರಖು ಠೇವಣಾತಿಗಳನ್ನು ಶೇಕಡ 5ರ ವರೆಗಿನ ಬಡ್ಡಿಯಲ್ಲಿ ಈಗ ಸ್ವೀಕರಿಸಲಾಗುತ್ತದೆ.

ಚಾಲ್ತಿ, ಸೇವಿಂಗ್ಸ್‌ಬ್ಯಾಂಕ್, ಕ್ಯುಮಿಲೇಟಿವ್ ಠೇವಣಾತಿಗಳನ್ನು ಅತೀ ಲಾಭದಾಯಕವಾದ ಬಡ್ಡಿಯಲ್ಲಿ ತೆರೆಯೋಣಾಗುತ್ತವೆ.

ಅಲ್ಲದೆ

ಎಲ್ಲ ತರದ ಬ್ಯಾಂಕಿಂಗ್ ವಹಿವಾಟುಗಳು ನಡಿಸಲ್ಪಡುತ್ತವೆ.

ಹೆಚ್ಚಿನ ಮಾಹಿತಿ ನಮ್ಮ ಯಾವುದೇ ಆಫೀಸಿನಿಂದ ಪಡೆಯಬಹುದು.

52—11

"ಜನರಲ್ ಅಷ್ಯೂರೆನ್ಸ್" ಅಜ್ಮೀರ್.
ಉದಾರವಾದ ಕ್ಷೆಟ್ಟ ಭೂಕಂಪ ಸೌಲಭ್ಯಗಳು.

(1) ಆರು ತಿಂಗಳುಗಳವರೆಗೆ ಪ್ರೀಮಿಯಂ ಇಲ್ಲದೆ ಪಾಲಸಿಗಳು ಜಾರಿಯಲ್ಲಿರುವವು.
(2) ಕ್ಲೇಮ್ಸುಗಳು ಮತ್ತು ಪಾವತಿಯು ಅತಿ ವಿನಯ ಮತ್ತು ಕ್ಷಿಪ್ರದಲ್ಲಾಗುವುದು.
(3) ಸಾಲಗಳಮೇಲಿನ ಬಡ್ಡಿಯು ದರವು 4½% ಗೆ ಇಳಿಸಲ್ಪಟ್ಟಿದೆ.
(4) ಪುನಃ ಜಾರಿಗೆ ತರುವ ಶರತ್ತುಗಳು ಸುಲಭ ರೀತಿಯಲ್ಲಿವೆ.

ಜಾರಿಯಲ್ಲಿರುವ ವಿಮೆಮೊಬಲಗು (ಹೆಚ್ಚು) 265 ಲಕ್ಷ
ಲೇವಾದೇವಿಯಲ್ಲಿರುವಮೊಬಲಗು ಸುಮಾರು 70 ಲಕ್ಷ
ವಾರ್ಷಿಕ ಉತ್ಪತ್ತಿಗಳು (ಹೆಚ್ಚು) ರೂ. 16 ಲಕ್ಷ
ವಿವೂ ಹಕ್ಕುಗಳ ಪಾವತಿ ರೂ. 33 ಲಕ್ಷ

ಬೋನಸ್ಸು ಬೇರೆ ಕಂಪೆನಿಗಳಿಗಿಂತ ಅಧಿಕ
ಜೀವಾವಧಿ ಪಾಲಿಸಿಗಳಿಗೆ ಸಾಲಯೂನರೂ. 25% ಎಂಡೋಮೆಂಟ್ ಪಾಲ್ಸಿಗಳಿಗೆ ಸಾಲಯೂನ ರೂ. 20%

ಪಬ್ಲಿಸ್ಸಿಯ ಪಯಮಗಳು ವಿಶೇಷ ಲಾಭದಾಯಕ
ಇತರ ವಿವರಗಳಿಗೆ ಕೂಡಲೇ ಈ ಕೆಳಗಿನವರಿಗೆ ಬರೆಯಿರಿ:—
ಪಿ. ಡಿ. ಭಾರ್ಗವ, ಎಫ್. ಎಸ್. ಎಸ್. (ಲಂಡನ್),
ಜನರಲ್ ಮೇನೇಜರ್, ದಿ ಜನರಲ್ ಅಷ್ಯೂರೆನ್ಸ್ ಸೊಸೈಟಿ ಲಿಮಿಟೆಡ್, ಅಜ್ಮೀರ್. ಅಥವಾ:—
ಎ. ಎಸ್ ಎಸ್ ಅಯ್ಯಂಗಾರ್,
ಸುಪರಿಂಟೆಂಡೆಂಟ್, ಜನರಲ್ ಅಷ್ಯೂರೆನ್ಸ್, ಬಿಲ್ಡಿಂಗ್, ಚಾಮರಾಜಪೇಟೆ, 3ನೇ ರೋಡ್ಡು.
52—34 ಬೆಂಗಳೂರು ಸಿಟಿ.

ವಿವಿಧ ವಾರ್ತಾವಳಿ.

ಶಾಹೀದಗಂಜ ಬಗ್ಗೆ ಸವಿನಯ ಸತ್ಯಾಗ್ರಹ! ಮುಸಲ್ಮಾನರ ನಿರ್ಧಾರ.

ತಾ. 24ರಲ್ಲಿ ಕೂಡಿದ ಮುಸಲ್ಮಾನರ ಸಾರ್ವಜನಿಕ ಸಭೆಯಲ್ಲಿ ಶಾಹೀದ ಗಂಜ ಸಂಬಂಧದಲ್ಲಿ ಸವಿನಯ ಸತ್ಯಾಗ್ರಹ ಮಾಡುವ ತೀರ್ಮಾನ ಮಾಡಲ್ಪಟ್ಟಿತು. ಮತ್ತು ಕೂಡಲೆ ಅದನ್ನು ಕೃತಿಯಲ್ಲಿ ತರಲಾಯಿತು. 5 ಜನರು ಮೆರವಣಿಗೆಯಿಂದ ಶಾಹೀದಗಂಜ ಕಡೆಗೆ ಹೋಗಿ ಪೊಲೀಸರ ಸೆರೆಯಾಳಾದರು.

—೦೮೦—

ಸಂಣ ಲಂಚಗಳಿಂದ ಗಳಿಸಿದ ಅಪಾರ ಧನ.

ಮಿ. ಟಚ್ಚರ್ಡ್ ಹಜ್ಜಸ್‌ನೆಂಬವನು ಇಂಗ್ಲೆಂಡಿನ ಲಿವರ್‌ಪೂಲಿನ ಒಂದು ಹೊಟೇಲಿನ ಕಾಮಗಾರನು. ಬಂದವರನ್ನು ಸತ್ಕರಿಸುವುದು ಇವನ ಕೆಲಸವಾಗಿತ್ತು. ಅತಿಥಿಗಳು ಇವನಿಗೆ ಸಂಣ ಲಂಚ ಕೊಡುವುದು ರೂಢಿಯಲ್ಲಿತ್ತು. ಈ ಸಣ್ಣ ಲಂಚಗಳಿಂದಲೇ 27,000 ಪೌಂಡು ಐಶ್ವರ್ಯವನ್ನು ಈತನು ಗಳಿಸಿರುವನಂತೆ, ಎಂದರೆ 3½ ಲಕ್ಷ ರೂ. ತನ್ನ ಐಶ್ವರ್ಯವನ್ನು ಒಂದು ಸಾರ್ವಜನಿಕ ಸಂಸ್ಥೆಗೆ ಬಿಟ್ಟುಕೊಟ್ಟಿರುವನು.

—೦೮೦—

ಮಹಾತ್ಮರ ಮೇಲೂ ಸರಕಾರದ ಆರೋಪವೇ.

ಹಿಂದೂಸ್ಥಾನ ಸರಕಾರದ 1933—34ನೇ ಇಸವಿಯ ವರದಿಯಲ್ಲಿ ಮಹಾತ್ಮರ ಹರಿಜನ ಪ್ರವಾಸದ ಉದ್ದೇಶವು ಕೇವಲ ಸಾಮಾಜಿಕ ಸುಧಾರಣೆಗೆ ಸಂಬಂಧಿಸಿದ್ದಿರಲಿಲ್ಲವೆಂದು ಉಲ್ಲೇಖಿಸಲ್ಪಟ್ಟಿದೆ. ಯುನೈಟೆಡ್ ಪ್ರೆಸ್ ಪ್ರತಿನಿಧಿಯು ಈ ಉಲ್ಲೇಖದ ಕಡೆಗೆ ಮಹಾತ್ಮರ ಕಾರ್ಯದರ್ಶಿಗಳಾದ ಮಹಾದೇವಾಯಿಯವರ ಲಕ್ಷ್ಯ ಎಳೆಯಲಾಗಿ ಅವರು ಆರೋಪವು ತಳಹಿಲ್ಲದ್ದಿರುವದೆಂದೂ, ಮಹಾತ್ಮರಿಗೆ ಆರೋಗ್ಯವಾದ ಒಳಿಕ ಆ ವಿಷಯವನ್ನು ಅವರ ಮುಂದೆ ಇಡಲಾಗುವದೆಂದೂ ಹೇಳಿದರು.

—೦೦೮—

೨೦೦ ಶತವರ್ಷದ ಜಮಖಾನ.

ಲಂಡನಿನ ವಿಕ್ಟೋರಿಯಾ ಮತ್ತು ಆಲಬರ್ಟ್ ಮ್ಯೂಸಿಯಮಿಗೆ, 300 ವರ್ಷದ ಹಿಂದಿನ, ಬೃಹತ್ ಕೃಯಬಾಳುವ, ಸುಂದರವಾದ ಒಂದು ಭಾರತೀಯ ಜಮಖಾನು ಬಂದಿರುತ್ತದೆ. ಈ ಜಮಖಾನು ಹಿಂದೂ ದೇಶದಲ್ಲಿ 1628 ರಲ್ಲಿ ತಯಾರಾದುದೆಂದು ತಿಳಿದು ಬರುತ್ತದೆ. ಈಗಲೂ, ಈ ಜಮಖಾನು ಯಾವ ರೀತಿಯಲ್ಲೂ ಹಾಳಾಗಿಲ್ಲವೆಂದೂ ತಿಳಿದುಬರುತ್ತದೆ. ಈ ಜಮಖಾನನಲ್ಲಿರುವ ಚಿತ್ರಗಳನ್ನು ನೋಡಿದರೆ, ಆಗಿನ ಭಾರತೀಯ ಕಲಾ ಜ್ಞಾನವು ಮಹತ್ತರವಾಗಿತ್ತೆಂದೂ ವ್ಯಕ್ತವಾಗುತ್ತದೆ. ಅಂಗ್ಲೇಯರು ಇದರ ಸೌಂದರ್ಯವನ್ನು ನೋಡಿ ಬೆರಗಾಗಿರುವರು.

—೫೦೫—

ಫೋಟೊ ತೆಗೆಯಲು ಬರಲಿಲ್ಲ!

ಝೆಕಾ ಸ್ಲೋವಕಿಯಾದ ಪೊಲೀಸರು ಒಸ್ಟ್ರಾವದಲ್ಲಿ ಒಬ್ಬ ವ್ಯಕ್ತಿಯನ್ನು ಹಿಡಿದರು. ಅವನ ಹೆಸರು ಇವಾನ್ ಸ್ಟೆಗ್. ಆ ಮೇಲೆ ಅವನ ಫೋಟೋ ತೆಗೆದರು. ಅದು ಹೊರಡಲಿಲ್ಲ. ಪುನಹ ತೆಗೆದರು, ಮತ್ತೂ ಹೊರಡಲಿಲ್ಲ. ಆರು ಸಾರಿ ತೆಗೆದರು, ಆಗಲೂ ಹೊರಡಲಿಲ್ಲ. ಪುನಹ ತೆಗೆದರು, ಆದರೂ ಫೋಟೋ ಹೊರಡಲಿಲ್ಲ. ಕಾಗದ ಬೆಳ್ಳಗೆ ಉಳಿಯಿತು; ಏನೂಂದೂ ಆಕಾರ ಹೊರಟಿದ್ದಿಲ್ಲ. ಇದರ ಕಾರಣವೇನೆಂದು ಪೊಲೀಸರು ಕೇಳಿದರು. ನನ್ನ ಬಿಡುಗಡೆ ಮಾಡಿದರೆ ಹೇಳುವೆನೆಂದು ವ್ಯಕ್ತಿಯನ್ನು ಉತ್ತರ ಕೊಟ್ಟನು. ಪೊಲೀಸರು ಅವನನ್ನು ಬಿಡಲಿಲ್ಲ, ಅವನು ಅದರ ಗುಟ್ಟನ್ನು ಹೇಳಲಿಲ್ಲ!

—೦೦೦—

ಹರಿಜನರ ಮತಾಂತರ.

ಆಗ್ರ ಜಿಲ್ಲೆಯ 11 ಗ್ರಾಮಗಳ 300 ಜನ ಹರಿಜನರು ಹಿಂದೂಮತ ಬಿಟ್ಟು ಕ್ರೈಸ್ತಮತಕ್ಕೆ ಸೇರಿರುವರೆಂದು ತಿಳಿದುಬರುತ್ತದೆ. ಇದು ಹೊರತು ಇನ್ನೂ ಸುಮಾರು 8000 ಮಂದಿ ಕ್ರೈಸ್ತಮತಕ್ಕೆ ಸೇರಿರುವರೆಂದೂ ವರ್ತಮಾನವಿದೆ. ಡಾಕ್ಟರ್ ಅಂಬೇಡ್ಕರರ ಅನುಯಾಯಿಗಳಾದ ಸ್ವಾಮಿ ಅಚ್ಚುತಾನಂದರೇ ಮೊದಲಾದವರ ಪ್ರಚಾರವೇ ಇದಕ್ಕೆ ಕಾರಣವಂತೆ.

ತಿನ್ನವೆಲ್ಲಿಯ ಹರಿಜನರ ವಿವಿಧ ಪಂಗಡದವರ ಪರಿಷತ್ತು, ಅಲ್ಲಿನ ಮಿ. ಶೇಕ ಮಹಮ್ಮದರ ಬಂಗ್ಲೆಯಲ್ಲಿ ಸೇರಿ, ಹಿಂದುಗಳು ತಮಗೆ ಇನ್ನೂ ಎಂಡು ತಿಂಗಳ ಸಮಯದಲ್ಲಿ ಸರಿಸಮಾನವಾದ ಹಕ್ಕುಗಳನ್ನು ಕೊಡದಿದ್ದಲ್ಲಿ, ತಾವು ಮುಸ್ಲಿಮ್ ಮತಕ್ಕೆ ಸೇರಬೇಕೆಂಬ ನಿರ್ಧಾರ ಮಾಡುತ್ತಾರೆ.

—೦೮೦—

ಪಂಡಿತ ಜವಾಹರಲಾಲರವರ ಹಿಂದಿರುಗುವಿಕೆ.

ಪಂ. ಜವಾಹರಲಾಲ ನೆಹರು ಇವರು ಶನಿವಾರ ದಿವಸ ಲಂಡನಕ್ಕೆ ಹೋಗಿ ಫೆಬ್ರವರಿ ತಿಂಗಳ ಪ್ರಾರಂಭದ ವರೆಗೆ ಅಲ್ಲಿಯೇ ಉಳಿಯುವರು. ಅಲ್ಲಿಂದ ಶ್ರೀ ಕಮಲಾ ನೆಹರುವರನ್ನು ಕಾಣಲಿಕ್ಕೆ ಲಾಸೇನಕ್ಕೆ ಹೋಗುವರು. ಕಾಂಗ್ರೆಸ್ ಅಧ್ಯಕ್ಷಸ್ಥಾನವನ್ನು ರಾಷ್ಟ್ರವು ಕೊಟ್ಟರೆ ಅವರು ಅದನ್ನು ಸ್ವೀಕರಿಸುವರು. ಶ್ರೀ ಕಮಲಾ ನೆಹರು ಇವರ ಪ್ರಕೃತಿಯ ಸ್ಥಿತಿಯು ಅಡ್ಡಬಾರದಿದ್ದರೆ ಕಾಂಗ್ರೆಸ ಅಧಿವೇಶನಕ್ಕೆ ಬರುವರು. ಶ್ರೀ ಕಮಲಾ ನೆಹರುರವರ ಪ್ರಕೃತಿಯಲ್ಲಿ ಏನೂ ಹೆಚ್ಚು ಕಡಿಮೆ ಇಲ್ಲ.

—೦೦೦—

ಆರು ವರ್ಷಗಳಲ್ಲಿ ಇಂಡಿಯಾಕ್ಕೆ ಸ್ವಾತಂತ್ರ್ಯ.

'ಮೇಡವ್' ಲಯಿಲಾರವರ ಭವಿಷ್ಯ,

ಈಗ ಹಿಂದೂಸ್ಥಾನದಲ್ಲಿರುವ ವಿಯೆನ್ನದ ಮೇಡವ್ ಲೆಯಿಲಾರವರು ಹಿಂದೂಸ್ಥಾನದ ವಿಷಯವಾಗಿ ಭವಿಷ್ಯ ಹೇಳಿದ್ದೇನೆಂದರೆ:—

'ಬರುವ ಲಖನವು ಕಾಂಗ್ರೆಸ್ ಅಧಿವೇಶನದ ಅಧ್ಯಕ್ಷಪದವಿ ಸ್ವೀಕರಿಸಲು ಪಡಿತ ಜವಾಹರಲಾಲರು ಹಿಂದೂಸ್ಥಾನಕ್ಕೆ ಬರುವದಿಲ್ಲ, ಯಾಕೆಂದರೆ ಅವರ ಮೇಲಿನ ನಿಯಂತ್ರಣದ ಅವಧಿಯು ಅಧಿವೇಶನವಾದ 6 ವಾರಗಳ ನಂತರ ಮುಗಿಯುವದು. ಮಹಾತ್ಮಾ ಗಾಂಧಿಯವರ ಧ್ಯೇಯವು ಯಶಸ್ವಿಯಾಗುವದು. ಇನ್ನು 6 ವರ್ಷಗಳಲ್ಲಿ ಹಿಂದೂಸ್ಥಾನಕ್ಕೆ ಸ್ವಾತಂತ್ರ್ಯ ದೊರೆಯುವದು. ಬಾಬು ಸುಭಾಸ ಬೋಸನ ಪ್ರಕೃತಿಯು ನಟ್ಟಗಾಗುವದು.'

—೦೦೦—

ಎರಡನೇ ದುಂಡುಮೇಜು ಪರಿಷತ್ತಿನ ಗುಟ್ಟು.

ಮದ್ರಾಸಿನ ಒಂದು ಸಾಹಿತ್ಯ ಸಂಘದಲ್ಲಿ ಭಾಷಣ ಮಾಡುವಾಗ ಎರಡನೇ ದುಂಡು ಮೇಜು ಪರಿಷತ್ತಿನ ಅಪಯಶಸ್ಸಿಗೆ ಯಾರು ಕಾರಣರೆಂಬದರ ಬಗ್ಗೆ ಡಾ. ಸುಬ್ಬರಾಯನ್ನರು ಈ ಪ್ರಕಾರ ಹೇಳಿದರು.

'ಎರಡನೇ ದುಂಡುಮೇಜಿನ ಪರಿಷತ್ತಿನಲ್ಲಿ ನನಗೆ ಇದಕ್ಕಿಂತ ಜಲೋ ಸೌಧಾಣಿಗೆಗಳು ಸಿಗುವ ಸಂಭವವಿತ್ತು. ಮಹಾತ್ಮ ಗಾಂಧಿ ಮತ್ತು ಜನರಲ್ ಸ್ಮಟ್ಸರ ನಡುವೆ ಮೂರು ಕಂತಕಥೆಗಳು ನಡೆದಿದ್ದವು. ಮಹಾತ್ಮ ಗಾಂಧಿಯವರು ಆ ಸಂಧಾನಕ್ಕೆ ಒಪ್ಪಿಕೊಂಡಿದ್ದರು. ಭಾವೀ ರಾಜ್ಯಘಟನೆಯ ಶ್ರೇಯಸ್ಸೆಲ್ಲ ಮಹಾತ್ಮ ಗಾಂಧಿಯವರಿಗೆ ಸಿಗುತ್ತದೆಂದು ತಿಳಿದು ಕೆಲವು ಹಿಂದೀ ಮುಂದಾಳುಗಳು ಕ್ಷುದ್ರತನದಿಂದ ವಿಘ್ನವನ್ನೊಡ್ಡಿದರು. ಮತ್ತು ಆ ಸಂಧಾನಕ್ಕೆ ತಾವು ಒಪ್ಪಿಕೊಳ್ಳಲಾರೆವೆಂದು ಹೇಳಿದರು.'

'ಇದಕ್ಕೆಲ್ಲ ಅನೇಕ ಆಧಾರಗಳಿವೆ, ನನ್ನ ಹತ್ತರ ಕಾಗದ ಪತ್ರಗಳಿವೆ. ಅವುಗಳ ಮೂಲಕ ನಾನು ಮೇಲಿನ ವಿಧಾನವನ್ನು ಸಿದ್ಧಮಾಡುತ್ತೇನೆಂದು ಡಾ. ಸುಬ್ಬರಾಯನ್ನರು ಹೇಳುತ್ತಾರೆ.

—೦೦೦—

ಎಂಟನೇ ಎಡ್ವರ್ಡರ ಪ್ರಕಟನೆ.

ಇಂಗ್ಲಂಡದ ಹೊಸ ಅರಸರಾದ ಎಂಟನೆಯ ಎಡ್ವರ್ಡರು ಪ್ರಿವ್ಹಿ ಕೌನ್ಸಿಲದಲ್ಲಿ ಮಾಡಿದ ಪ್ರಮಾಣ ವಚನಗಳ ಸಾರಾಂಶವು ಈ ರೀತಿಯಲ್ಲಿದೆ:—'ಜಾರ್ಜ ಸಾರ್ವ ಭೌಮರ ಮರಣದಿಂದ ಇಡೀ ಬ್ರಿಟಿಷ್ ಸಾಮ್ರಾಜ್ಯಕ್ಕೆ ಒಂದು ಅಪಾರ ನಷ್ಟವು ಸಂಭವಿಸಿದೆ. ನನ್ನ ಪ್ರೀತಿಯ ತಂದೆಯು ನನ್ನ ಮೇಲೆ ಸಾರ್ವಭೌಮತೆಯ ಕರ್ತವ್ಯದ ಹೊರೆಯನ್ನು ಹೊರಿಸಿದ್ದಾರೆ. ನನ್ನ ದುಃಖದಲ್ಲಿ ನೀವೂ, ನನ್ನ ಎಲ್ಲಾ ಪ್ರಜೆಗಳೂ ಅಷ್ಟೇಕೆ ಇಡೀ ಜಗತ್ತೇ ಭಾಗಿಯಾಗುವದೆಂದು ನನಗೆ ನಂಬುಗೆ ಇದೆ. ನನ್ನ ಪ್ರೀತಿಪಾತ್ರ ತಾಯಿಯ ದುಃಖಸಾಗರದಲ್ಲಿ ನಾನೂ, ನೀವೂ ಎಲ್ಲರೂ ಭಾಗಿಗಳಾಗಿದ್ದೇವೆ. ನನ್ನ ತಂದೆಯು, ಕಳೆದ 26 ವರ್ಷಗಳ ಹಿಂದೆ ಇದೇ ಸ್ಥಳವನ್ನು ಅಕ್ರಮಿಸಿದಾಗ ನ್ಯಾಯಬದ್ಧ ಸರಕಾರವನ್ನು ಎತ್ತಿ ಹಿಡಿಯುವದು ತಮ್ಮ ಜೀವಿತದ ಧ್ಯೇಯಗಳಲ್ಲಿ ಒಂದೆಂದು ಹೇಳಿದ್ದರು. ಅದ್ದರಿಂದ ನಾನೂ ಅದೇ ಮಾರ್ಗವನ್ನೇ ಅನುಸರಿಸುವೆನು. ಅವರು ತಮ್ಮ ಎಲ್ಲಾ ಪ್ರಜೆಗಳ ಸುಖ ಸಮಾಧಾನಗಳಿಗಾಗಿ ಪ್ರಯತ್ನ ಪಟ್ಟಂತೆ ನಾನಾದರೂ ಪ್ರಯತ್ನ ಪಡುವೆನು. ನನ್ನ ಸಾಮ್ರಾಜ್ಯದಲ್ಲಿಯ ಜನರಲ್ಲಿ ನಾನು ವಿಶ್ವಾಸವನ್ನೂ, ಪ್ರೀತಿಯನ್ನೂ ಇಡುತ್ತೇನೆ; ಮತ್ತು ಪಾರ್ಲಮೆಂಟಿನ ಸದಸ್ಯರು ನನ್ನ ಈ ಕರ್ತವ್ಯವನ್ನು ನೆರವೇರಿಸಲು ಸಹಾಯಮಾಡುವರೆಂದು ನಂಬುತ್ತೇನೆ. ಪರಮಾತ್ಮನೂ ಸಹ ನನಗೆ ಈ ಕಾರ್ಯದಲ್ಲಿ ಸದ್ಬುದ್ಧಿ ಕೊಡಲೆಂದು ಪ್ರಾರ್ಥಿಸುತ್ತೇನೆ.'

—೦೦೦—

ಪಾದ್ರಿಗಳದು ಸೇವೆಯಲ್ಲ, ಸ್ವಪ್ರತಿಷ್ಠೆ!

"ಕೀಳು ಜನರನ್ನು ಉದ್ಧಾರಮಾಡುವುದು ತಮ್ಮ ಕರ್ತವ್ಯವೆಂದೂ, ಅದಕ್ಕಾಗಿಯೇ ಅವರನ್ನು ಮತಾಂತರಗೊಳಿಸುವುದೆಂದೂ ಈ ಸಾಯಿಂಗಳು ಹೇಳುತ್ತಾರೆ. ಈ ಮಾತು ನಿಜವೇ ಆದರೆ, ಮತಾಂತರಗೊಳಿಸದೆ ದೀನಸೇವೆಯನು ಮಾಡುವ ದಿವ್ಯವಾದ ಮಾರ್ಗ ಮತ್ತಾವುದೂ ಇಲ್ಲವೆ? ನ್ಯಾಯವಾದ ಮಾರ್ಗವು ಅಭಾವವೇ?"

ಹೀಗೆ ಪ್ರಶ್ನೆಹಾಕಿಕೊಂಡು ಶ್ರೀ ಮಹದೇವ ದೇಸಾಯಿಯವರು ಕಡೆಗೆ ಈ ಗುಟ್ಟನ್ನು ರಟ್ಟುಮಾಡುತ್ತಾರೆ.

"ಒಂದು ಕೋಮಿಗೆ ಸ್ಥಾನಮಾನಗಳೂ ಸಹಾಯ ಸೌಕರ್ಯಗಳೂ ಇವೆಯೆನ್ನಿ. ಮತ್ತೊಂದು ಕೋಮಿಗೆ ಇರುವುದಿಲ್ಲವೆಂದೂ ಇಟ್ಟುಕೊಳ್ಳೋಣ. ಉತ್ತಮ ಕೋಮಿನವರು ಕೀಳು ಕೋಮಿನವರಿಗೂ, ತಮಗಿರುವ ಸ್ಥಾನಮಾನಗಳನ್ನು ದೂರಕಿಸಿಕೊಡಲು ದುಡಿಯುವುದಸಾಧ್ಯವೇ? ಕೀಳು ಕೋಮಿನವರಿಗೆ ಉಪದೇಶಮಾಡಿ ಉಪಕಾರಿಗಳಾಗಲು ಅಸಾಧ್ಯವೇ? ಮತಾಂತರಗೊಳಿಸಲೇ ಬೇಕೇ?

"ಗುಟ್ಟು ಅದಲ್ಲ: ತಾವೇ ಶ್ರೇಷ್ಠರೆಂಬ ದುರಭಿಮಾನ, ಕಷ್ಟದಲ್ಲಿರುವವರು ತಮಗಿಂತ ಕೀಳೆಂಬ ಸ್ವಪ್ರತಿಷ್ಠೆ, ಇದೇ ಅವರ ಅಂತರಂಗದಲ್ಲಿ ನಡೆಯುತ್ತಿರುವ ವ್ಯಾಪಾರಂಗಳು ಈ ಹೃದಯದಿಂದಲೇ ಅವರು ಸೇವೆಯನ್ನು ಮಾಡುತ್ತಿರುವುದು!"

—೦೦೦—

ಗಾಂಧಿ—ನೊಗಚಿಯವರ ಸಂಭಾಷಣೆ.

ಜಪಾನಿನ ದರ್ಶನವೇತ್ತರೂ, ಕವಿಪುಂಗವರೂ ಆದ ಡಾ. ನೊಗಚಿಯವರು ಮಹಾತ್ಮರ ಸಂದರ್ಶನಾರ್ಥವಾಗಿ ವಾರ್ಧಾನಗರಕ್ಕೆ ಹೋಗಿದ್ದರು. ದೇಹಾಲಸ್ಯದಿಂದ ಮಹಾತ್ಮರು ನಿಶ್ಶಕ್ತರಾಗಿದ್ದರೂ ಡಾ ನೊಗಚಿಯವರೊಡನೆ ಸಂಭಾಷಣೆಯನ್ನು ನಡೆಸಿದರು. ಮಧ್ಯೆ ಮಧ್ಯೆ ಕುಚೇಷ್ಟೆಯನ್ನು ಬೀರಿ ಮಾಡುತ್ತಿದ್ದರು.

ಶ್ರೀಮತಿ ಕಸ್ತೂರಿಬಾಯಿ ಗಾಂಧಿಯವರನ್ನು ಡಾ. ನೊಗಚಿಯವರಿಗೆ ಪರಿಚಯಮಾಡಿ ಕೊಡುತ್ತ, 'ಈಕೆಯ ಸ್ವರೂಪವನ್ನು ಮೋಡಿದರೆ ಜಪಾನಿನ ಹೆಂಗಸಿನಂತೆ ಕಾಣುವುದಿಲ್ಲವೆ?' ಎಂದು ಹಾಸ್ಯಮಾಡಿದರಂತೆ!

ಅದಕ್ಕೆ ಡಾ. ನೊಗಚಿಯವರು, 'ಹೌದು, ನಮ್ಮ ತಾಯಿಯಂತೆ ಆಕೆಯು ಕಾಣುತ್ತಾರೆ' ಎಂದು ಉತ್ತರಕೊಟ್ಟರಂತೆ.

ಮಹಾತ್ಮರನ್ನು ಮಾತನಾಡಿಸಿ ದಣಿಸಬೇಕೆಂದು ಅವರಿಗೆ ಇಷ್ಟವಿರಲಿಲ್ಲ. ಆದರೂ ಮಹಾತ್ಮರು ಅವರನ್ನು ಬಿಡಲಿಲ್ಲ. ಮಾತಿಗೆ ಕೂಡಿಸಿಕೊಂಡರು.

'ನಿಮ್ಮಿಂದ ಯಾವ ಸಂದೇಶವನ್ನೂ ನಾನು ಬೇಡುವುದಿಲ್ಲ. ಯಾಕೆಂದರೆ ನಿಮ್ಮ ಜೀವನವೇ ತೆರೆದಿಟ್ಟ ಪುಸ್ತಕದಂತಿದೆ. ಗುಟ್ಟು ಗೋಪ್ಯದ ಗಂಧವೇ ನಿಮ್ಮಲಿಲ್ಲ.' ಹೀಗಂದು ಡಾ. ನೊಗಚಿಯವರು ಪ್ರಾರಂಭಿಸಿತ್ತ ಮಹಾತ್ಮರನ್ನು ಪ್ರಸಂಶಿಸಿದರು.

'ನಮ್ಮಿಬ್ಬರ ಧ್ಯೇಯಂಗಳಿಗೂ ಮೂಲತಃ ಯಾವ ವ್ಯತ್ಯಾಸವೂ ಇಲ್ಲ, ನಮ್ಮಿಬ್ಬರಿಗೂ ಸರಳತೆ, ತ್ಯಾಗ, ವೈರಾಗ್ಯಗಳೇ ಹಿತ. ಆದರೆ ಮೂರ್ತತಾವು ಪೂಜಾರ್ಹರು.' ಎಂದರವರು

ಮಹಾತ್ಮ ಗಾಂಧಿಯವರು—'ನನಗೆ ಗೊತ್ತಿರುವಂತೆ ಜಪಾನು ದೇಶವು ಪ್ರಪಂಚದಲ್ಲೆಲ್ಲ ಅತ್ಯಂತ ಉದಾರ ದೇಶವೆಂದು ಪರಿಗಣಿಸುತ್ತೇನೆ. ನಮ್ಮ ದೇಶವು ಹೇಗಿದೆ? ಕಡೆಗೆ ಎರಡನೆಯ ಸ್ಥಾನವನ್ನಾದರೂ ಪಡೆಯುತ್ತದೆಯೆಂದು ನಾನು ದೃಢವಾಗಿದ್ದೇನೆ' ಎಂದು ಪ್ರಶ್ನೆ ಹಾಕಿದರು.

ಡಾ. ನೊಗಚಿಯವರು, 'ಇಲ್ಲ, ನಿಮ್ಮ ದೇಶವೇ ಪ್ರಥಮ ಸ್ಥಾನಕ್ಕೆ ಯೋಗ್ಯವಾದುದು' ಎಂದುತ್ತರಕೊಟ್ಟರು.ಜಪಾನು ದೇಶಕ್ಕೆ ಯಾವುದಾದರೂ ಸಂದೇಶವನ್ನು ದಯವಾಲಿಸುವಂತೆ ಪ್ರಾರ್ಥಿಸಿಕೊಂಡರು,

ಮಹಾತ್ಮರು ಕೊಟ್ಟ ಸುದೇಶವಿದು: 'ಕವೀಂದ್ರ ರವೀಂದ್ರನಾಥ ಠಾಗೋರರು ಕೊಟ್ಟ ಸಂದೇಶದಲ್ಲಿಯೇ ನನ್ನದೂ ಅಡಕವಾಗಿದೆ. ನನ್ನಲ್ಲನೇಕರು ಕೊಡಬಹುದಾದ ಸಂದೇಶಗಳನ್ನು ಅವರ ಸಂದೇಶವು ಅಡಕವಾಗಿಟ್ಟುಕೊಂಡಿದೆ.'

—೦೦೦—

107 ವಯಸ್ಸಾದರೂ ಸುಂದರಮುಖಿ.

ಇದು ವರೆಗೆ ನೂರು ವರ್ಷಗಳ ಮೇಲ್ಪಟ್ಟರೂ ಪೂರ್ಣ ಆರೋಗ್ಯವಾಗಿದ್ದ ಗಂಡಸರ ಉದಾಹರಣೆಗಳನ್ನೇ ವಾಚಕರು ಓದಿರುವರು. ಈಗೊಂದು ಬೇರೆ ಚಿತ್ರ. ಮೇರಿ ಎಂಡರ್ಸನ್ ಎಂಬವಳು ಹಲ್ಸಿಂಗ್ಬರ್ಗ್ (ಫಿನ್‌ಲ್ಯಾಂಡ)ದಲ್ಲಿ ವಾಸಿಸುವಳು. ಈಗ ಇವಳಿಗೆ 107 ವರ್ಷ ವಯಸ್ಸು. ಆ ನಗರದಲ್ಲಿಯೇ ಹಿರಿಯವಳು. ತುಂಬಾ ಆರೋಗ್ಯವಾಗಿದ್ದಾಳೆ. ತನ್ನ ಕೆಲಸಗಳನ್ನೆಲ್ಲ ಮಾಡುತ್ತಾಳೆ ಪೇಟೆಗೆ ಹೋಗುವಳು. ಯಾವಾಗಲೂ ಹಸನ್ಮುಖಿ. ಜನರು ಇವಳಿಗೆ 'ಹೂವಿನ ಹುಡುಗಿ' ಎಂದು ಈಗಲೂ ಕರೆಯುತ್ತಾರೆ.

—೦೦೧—

ಇಂದಿನ ಆಚಾರ್ಯರ ಅಂದವಾದ ಯುಕ್ತಿಗಳು.

ಲೇಖಕ:—ಪಂಡಿತ ತಾರಾನಾಥರು.

ಪೂರ್ವಜರ ಪುರಾತನ ಆದರ್ಶಗಳನ್ನೇ ಈಗಿನವರ ಗುಣ ವರ್ತನಗಳೆಂದು ಭಾವಿಸುತ್ತ ಹೋಗುವದು ಎಷ್ಟರ ಮಟ್ಟಿಗೆ ವಿಜವೆಂದು ಬುದ್ಧಿಯುಳ್ಳವರು ಆಲೋಚಿಸಿ ನೋಡಬಹುದು. ಅಲ್ಲಿಯೇ ನಿಲ್ಲದೆ ಯಾವಾಗಲೂ ಹಳೆಯ ಗ್ರಂಥಗಳ ಆಧಾರಗಳನ್ನು ಮೂಕ್ಯ ಕೊಟ್ಟು ಈಗಿನ ಜೀವನದಲ್ಲಿ ಸ್ವತಂತ್ರಾಧಿ ಆ ಗುಣಗಳನ್ನಿಟ್ಟುಕೊಳ್ಳದೆ ಇದ್ದರೂ 'ನಾವು ಇಂಥವರು, ನಮ್ಮ ಧರ್ಮವು ಇಂತಹು'ದೆಂದು ಹೇಳುತ್ತ ಹೋಗುವದು ಒಳಿತಾಗಿ ಕೈಲಾಗದವರ ಕೂಗಾಗಿದೆ. ನಮ್ಮ ದೊಡ್ಡಸ್ಥಿಕೆಯನ್ನು ಹೊಗಳಿದರೂ ಚಿಂತೆಯಿಲ್ಲ, ಬೇರೆಯವರ ನಿಂದೆಯು ಮಾತೋ ಅದನ್ನು ತೋರಿಸಲಿಕ್ಕೆ! 'ಪುಣ್ಯಭೂಮಿಯು ನಮ್ಮದು, ಇತರರೆಲ್ಲ ಭೌತಿಕರು, ಬರೆಯ ವಸ್ತು ಪೂಜಕರು' ಎಂದು ಹೇಳುತ್ತಿರುವದಂತೂ ಅನೇಕರಲ್ಲಿ ರೂಢಿಯೇ ಆಗಿ ಹೋಗಿದೆ. ಆದರೂ ದೇಹವು ಭೌತಿಕವಾದದ್ದು. ಅನ್ನ ಒಟ್ಟೆ ಮನೆಮೂರುಗಳೂ ಭೌತಿಕವೇ. ಅವುಗಳಿಗೆ ಬೇಕಾದ ಸಾಮಗ್ರಿಗಳನ್ನೂ ನಾವು ಮಾಡಿಕೊಳ್ಳುವದು ಭೌತಿಕ, ಬೇರೆಯವರಿಂದ ಕೊಂಡುಕೊಳ್ಳುವದು ಅಧ್ಯಾತ್ಮಿಕವೋ? ವಿಚಿತ್ರವಾದ ಯುಕ್ತಿ! ಇದರಿಂದಲೇ ನಮ್ಮಲ್ಲಿ ಆತ್ಮವಂಚನವು ಹುಟ್ಟಿ, ಭಾವನಾ ರಜನಾಶಕ್ತಿಗಳು ಹಾಳಾಗಿ, ಬಡವರಗೊಡವೆಯು ಇಲ್ಲದಂತಾಗಿ, ಉಚ್ಚ ನೀಚವೆಂಬ ಅನರ್ಥಕ ಭೇದಗಳು ಹುಟ್ಟಿ, ಸಮಾಜದಲ್ಲಿ ಒಕ್ಕಟ್ಟಿಲ್ಲದೆ, ದಾಸ್ಯ ದಾರಿದ್ರ್ಯಗಳಂಟಾಗಿ ಹೆಚ್ಚುತ್ತಿವೆ. ನಮ್ಮ ಘನತೆಗೆ ನಮ್ಮ ಗುಣವರ್ತನಗಳು ಸಾರ್ವತ್ರಿಕವೋ ಅಥವಾ ಹಿರಿಯರ ಗ್ರಂಥಗಳೋ? ನಮ್ಮ ಒಟ್ಟೆ ಬರೆಗಳನ್ನೂ ಮತ್ತು ಸುಖಪಯೋಗಗಳಿಗೆ ಬೇಕಾದ ಸಾಮಾನುಗಳನ್ನೂ ಪಶ್ಚಿಮದಿಂದ ತರಿಸಿ ಉಪಯೋಗಿಸಿಯೂ ಅವರು ಮಾತ್ರ ಬರೆಯ ಭೌತಿಕರು, ಅಸುರರು ಎಂದು ನಿಂದಿಸುವದರಲ್ಲಿಯೇ ನಮ್ಮ ಹೊತ್ತೆಲ್ಲಾ ಹೋಯಿತು. ಅವರ ಹಸ್ತ ಯಂತ್ರಗಳಿಂದಾದ ವಸ್ತುಗಳನ್ನೂ ಮೂರಿ ಹೊಟ್ಟೆ ತುಂಬಿಸುವವರೂ, ವರ್ತಕರಿಸಿಸುವ ದಲಾಲರೂ, ಉಪಯೋಗಿಸಿ ಮೆರೆಯುತ್ತಿರುವವರೂ ಧರ್ಮಾತ್ಮರಾಗುವದು ಹೇಗೆ? ಅದೊಂದು ವಿಚಿತ್ರವಾದ ಯುಕ್ತಿಯೇ ಇದಬೇಕು. ದೇಶದಲ್ಲಾಗತಕ್ಕ ವಸ್ತುಗಳಿಗೆ ಸಹ ತಕ್ಕ ಪ್ರೋತ್ಸಾಹವನ್ನೂ ಕೊಡದೆ ಪರದೇಶದ ವಸ್ತುಗಳನ್ನು ಪಯೋಗಿಸಿ ಆ ದೇಶದವರನ್ನು ನಿಂದಿಸುವರಿಸ್ಪೋ ಮಂದಿ ಪುಣ್ಯಾತ್ಮರಿದ್ದಾರೆ ನಮ್ಮಲ್ಲಿ! ವಿಶೇಷವೇನೂ ಬೇಡ. ಬರಿಯ ಒಟ್ಟೆಯೊಂಗಡ್ಕಾಗಿಯೇ ನಮ್ಮ ದೇಶದಿಂದ 60 ಕೋಟಿ ರೂಪಾಯಿಗಳು ಪರದೇಶಕ್ಕೆ ಹೋಗುತ್ತಿವೆ ಅದರಿಂದ ದಾರಿದ್ರ್ಯ ದುರ್ಭಿಕ್ಷೆಗಳು ನಮ್ಮಲ್ಲಿ ಹೆಚ್ಚಾಗಿವೆ. ಖಾದಿಯನ್ನು ಧರಿಸಿದರೆ ಅದು ನಮ್ಮಲ್ಲಿಯೇ ಹುಟ್ಟುವದಾದುದರಿಂದ ಆ ದುಡ್ಡು ನಮ್ಮಲ್ಲೇ ಉಳಿಯುವದು; ಅದನ್ನು ಮಾಡುವ ನೂಲುಗಾರರಿಗೂ ನೇಯಿಗೆಯವರಿಗೂ ಇಗಿರುವ ಶಾಶ್ವತ ಏಕಾದಶಿಯು ಹೋಗಿ ದಿನಕೊಮ್ಮೆಯಾದರೂ ಕೂಳು ಬೇಳುವದು; ಧನ ಬಲಗಳು ಹೆಚ್ಚುವವು ಎಂದು ಸಾವಿರಾರು ಮಂದಿ ಸಾರಿ ಆಡಿ ಮಾಡಿ ತೋರಿಸಿದರೂ ಕಡೆಗೆ ಅದನ್ನೊಂದನ್ನಾದರೂ ಹಾಕಿಕೊಂಡು ಧರ್ಮಾತ್ಮರಾಗುವವರೆಷ್ಟು ಮಂದಿ? ಇಲ್ಲವಾದರೆ ನಮ್ಮ ಜನಂಗೇ ರೊಟ್ಟಿ ಬಟ್ಟೆಗಳು ಸಿಗುವಂತೆ ಮಾಡುವುದು ಧರ್ಮವಲ್ಲವೆಂದು ಎಲ್ಲಿಯಾದರೂ ಸ್ಮೃತಿವಾಕ್ಯಗಳಿವೆಯೋ? ಗ್ಲಾಸ್‌ಗೋ, ಮೆನ್‌ಚೆಸ್ಟರ್‌ನಲ್ಲಿ ಉಟ್ಟಾದ ನೂಲಿನ ಧೋತ್ರಗಳನ್ನೂ, ಜರ್ಮನಿಯಲ್ಲಿ ಮಾಡಿದ ಶಾಲುಗಳನ್ನೂ ಧರಿಸಿಕೊಂಡು ಬರೇ ಖಾದಿ ಅಚ್ಚು ಬರೆಗಳಿಂದಲೂ, ಜಟ್ಟು ಒಟ್ಟೆಗಳಿಂದಲೂ ಶಾಸ್ತ್ರ ಆಚಾರ್ಯರೆಂದಿನಿಸಿಕೊಳ್ಳುವ ಧರ್ಮಾತ್ಮರು ಖಾದಿ ಧರಿಸಿರುವವರನ್ನು ಅಧರ್ಮಿಗಳೆಂದು ಸಹ ನಿಂದಿಸುವದುಂಟು! ಅಂಥ ಧರ್ಮಾತ್ಮರಿಗೆ ಅನುಕೂಲವಾದ ಸ್ಮೃತಿಗಳು ಸಾಕಷ್ಟು ಸಿಕ್ಕಿದರೂ ಸಿಗಬಹುದು. ಮಾತೆ ಬೂದಿ ಅಚ್ಚುಗಳೆಂದುಬಿಟ್ಟೆ. ಭಸ್ಮ ಮುದ್ರೆ ಎಂದು ಸಂಸ್ಕೃತವನ್ನೇ ಹೇಳಿದರೆ ಜೆನ್ನಾಗಿತ್ತೋ ಏನೋ. ಆದರೆ ಈಗಿನ ಯುವಕರಿಗೆ ಕನ್ನಡದ ಅಭಿಮಾನ ಹೆಚ್ಚು. ಸಂಸ್ಕೃತದ ತಿರಸ್ಕಾರವಿಲ್ಲ; ಆದರೆ ಸಂಸ್ಕೃತದ ಪದಗಳನ್ನೇ ಕುಟ್ಟಿ ತುಂಬಿಸುವವರನ್ನೂ ಅವರು ಪಂಡಿತರೆಂದೂ ಕರೆಯಲಿಕ್ಕೊಪ್ಪುವದಿಲ್ಲ ಅವರಿಗೆ ಬೇಕಾದದ್ದು ವಿಚಾರ. ಇದೂ ಒಂದು ಅಧರ್ಮವೆಯೋ ಏನೋ? ವಿಚಾರದಿಂದ ಕಂಣು ತೆರೆಯ ಎವದಕ್ಕಿಂತಲೂ ಭಕ್ತಿಯಿಂದ ಕಣ್ಣು ಮುಚ್ಚಿಕೊಂಡಿರುವದೇ ಲೇಸು ಎಂಬುದನ್ನು ತೋರಿಸುವದಕ್ಕಾಗಿಯೂ ಸ್ಮೃತಿಗಳು ಸಿಗಬಹುದು. ಅಂತು ಇಂತೂ ಇತರರು ಅದರಲ್ಲಿಯೂ ನವಜೀವನದ ಹುಟ್ಟುಹಿನಿಂದ ಒರೆಯ ಮಾತುಗಳನ್ನು ಬಿಟ್ಟು ಕೆಲಸಕ್ಕೆ ಕೈಹಾಕಿದ ಯುವಕರನ್ನು ಅಧರ್ಮಿಗಳೆಂದು ತೋರಿಸಲಿಕ್ಕೆ ಬೇಕಾದ ಹತ್ತಿಪ್ಪತ್ತು ಸ್ಮೃತಿಗಳನ್ನು ಕಂಠಪಾಠ ಮಾಡಿಕೊಂಡರೆ ಸಾಕು, ಸ್ವನಿರ್ಮಿತ ಪಂಡಿತರಲ್ಲಿ ಪಂಡಿತರು ಎಂದನಿಸಿಕೊಳ್ಳಲಿಕ್ಕೆ! ಖಾದಿಯನ್ನುಟ್ಟುಕೊಂಡರೆ ಕೆಲ್ಸರು! ಯಾಕೆಂದರೆ, ಅದು ಆ ಗಾಂಧಿಯ ಉಪದೇಶ. ಅತನು ಜಾತಿಯಿಂದ ವೈಶ್ಯ; ವಿದ್ಯೆ ಅತಸಿಗಿರುವದು ಇಂಗ್ಲಿಷ್ ವಿದ್ಯೆಯೇ ಹೆಚ್ಚು, ಸಂಸ್ಕೃತ ಶ್ಲೋಕಗಳು ಸಾಕಷ್ಟು ಬರುವದಿಲ್ಲ ಪಂಡಿತನೆನ್ನಿಸಲಿಕ್ಕೆ, ಒಂದು ವೇಳೆ ಒಂದಕ್ಕೂ ಅತನು ವೈಶ್ಯನಾಗಿರುವದರಿಂದ ಪಂಡಿತನಾಗಿರಲಾರನು. ಸೀಮೆಗೆ ಹೋಗಿ ಬಂದವನು; ಕಾಂಕ್ರೆಸ್ಸಿನಲ್ಲಿ ತಿನ್ನವನೆಂದು; ಹೀಗೆಯೆಂದನ್ನು ನುಟ್ಟುವವನು; ಬಾಲ್ಯವಿವಾಹವನ್ನು ನಿಷೇಧಿಸುವವನು. ವಿಧವಾವಿವಾಹವನ್ನು ಉಪದೇಶಿಸುವವನು—ಅಬ್ಬಬ್ಬಾ—ದುರ್ಗಣಗಳು ಒಂದೋ ಎರಡೋ—ಅಂಥಹ ಪಾಪಿಯು ಉಪದೇಶನನ್ನು ಕೇಳಿ ಖಾದಿಯ ಒಟ್ಟೆಯನ್ನು ಹಾಕಿಕೊಳ್ಳುವವರು ಅವಿವೇಕಿಗಳೇ ಅಲ್ಲವೆ ಅಂತೆ! ಅಷ್ಟೇನೋ—ಖಾದಿಯಿಂದ ಹೊಲೆಮೂದಿಗ ಮುಂತಾದ ದಲಿತರ ಸಕಲ ವ್ಯಾಧಿಗಳೂ ಹೋಗುವವು. ಅವರೂ ಇತರರಿಗೆ ಸರಿಸಮಾನರಾಗುವರು ಎಂದು ಗಾಂಧಿಯ ಸಾರಿದ ಮೇಲೆ ಧರ್ಮವು ಮತ್ತೆಲ್ಲಿ ಉಳಿಯಿತು!

ಸರಿ, ಮುಂದೆ ಆ ಒಟ್ಟೆಗಳನ್ನೇ ಜೊಕ್ಕಟವಾಗಿಟ್ಟುಕೊಂಡು ಸುಂದರವಾಗಿ ಹೊಲಿಸಿ ಧರಿಸಿದರೆ ಅದು ಸೌಂದರ್ಯೋಪಾಸನೆಯು! ಮತ್ತು ಅದರಿಂದ ಸಮಾಜವು ಕೆಡುವದು! ವೈರಾಗ್ಯ ಲಕ್ಷಣವು ಅದು ಅಲ್ಲ! ಆದರೆ ಒಂದು ಸಂದೇಹ ಮಾತ್ರ. ಸೌಂದರ್ಯ ತಿರಸ್ಕಾರದಿಂದೇ ವೈರಾಗ್ಯ ಮುಕ್ಕಿ ಮಾರ್ಗಗಳನ್ನು ಇತರರಿಗೆ ಸಾರಿ ಸಾಧಿಸುವ ಶಾಸ್ತ್ರಿಗಳು, ಆಚಾರ್ಯರು, ಪಂಡಿತರು, ಹೊಂಚಿನ ಧೋತ್ರ, ಕಂಚಿನ ಪಾತ್ರೆ, ಮಂಗಳೂರು ಹಂಚಿನ ಮನೆ ಮುಂತಾದ ಸುಂದರ ಭೌತಿಕರ ವಸ್ತುಗಳನ್ನು ಯಾಕೆ ಉಪಯೋಗಿಸಬೇಕು? ಇರಲಿ, ಸೌಂದರ್ಯೋಪಾಸನೆಯ ತಿರಸ್ಕಾರ ಉಳ್ಳವರು ತಾವು ವೈರಾಗ್ಯಬಲದಿಂದ ಕಾಂತಿಹೀನರಾಗಿದ್ದರೂ, ಮುದುಕರಾಗಿದ್ದರೂ, ಕುರೂಪಿಗಳಾಗಿದ್ದರೂ "ನೋಡಲಿಕ್ಕೆ ತಕ್ಕಮಟ್ಟಿಗಿರುವ ಹುಡುಗಿ"ಯನ್ನೇ ಯಾಕೆ ವರಿಸಬೇಕೋ? ಇಲ್ಲಿ ಸಂಸ್ಕೃತಕ್ಕೆ 'ಸುಂದರಿ' ಎಂಬದಕ್ಕೆ ಬದಲಾಗಿ ಕನ್ನಡವಾಕ್ಯ ಉಪಯೋಗಕ್ಕೆ ಬಂತು! ತಾವೂ ಮೊಣಕಾಲ ಪಂಜೆ, ಮಣ್ಣಿನ ಪಾತ್ರೆ, ಹುಲ್ಲು ಮುಚ್ಚಿದ ಮನೆಯೊಳಗಿದ್ದು, ವೇದಗಳ ಕಾಲದ ಋಷಿಗಳೆಂದೆನಿಸಿಕೊಳ್ಳಬಹುದಷ್ಟೆ. ಇಂಗ್ಲಿಷ್ ಕಲಿತು ಹುಡುಗರು ಕೆಟ್ಟರು" ಆದರೆ ಇಂಗ್ಲಿಷಿನಿಂದಲೇ ಮನೆಮೂಡಿಕೊಂಡು ದುಡ್ಡು ಸಂಪಾದಿಸುವ ವಕೀಲರು, ಹುದ್ದೇದಾರರು, ಡಾಕ್ಟರರು ಇವರುಗಳ ಮನೆಯ ಬಾಗಿಲಲ್ಲಿ ಆಶೀರ್ವಾದವನ್ನು ಕೊಡುವ ಶ್ಲೋಕ ಮಂತ್ರಗಳನ್ನು ಹೇಳುತ್ತಾ—'ರಾಮೂ ಕೃಷ್ಣಾ ವಾಸುದೇವಾ' ಎಂದು ಚಿಟಕೆಹೊಡೆಯುತ್ತಾ ಬಾಯಿ ಆಕಳಿಸುತ್ತ ಅವರನ್ನು ಹೊಗಳುವ ಎಷ್ಟೋ ಮಂದಿ ಧರ್ಮಾತ್ಮರನ್ನು ಯಾವ ಪಟ್ಟಣದಲ್ಲಿಯೂ ಕಾಣಬಹುದು. ಇಂತಹ ಧರ್ಮವೂ ಧರ್ಮಾತ್ಮರೂ ಇನ್ನೂ ಬೆಳೆದರೆ ಸತ್ಯಯುಗವೇ ಉದಯಿಸುವದಲ್ಲವೆ ಮತ್ತೆ!! ಮೂರ್ಖರು ಸ್ವರಾಜ್ಯ, ಸ್ವಾತಂತ್ರ್ಯ, ಸಮಾನಾಧಿಕಾರ ಎಂದು ಒದರುತ್ತಿರುತ್ತಾರೆ! ಈ ಧರ್ಮಾತ್ಮರ ಧರ್ಮ ಜೀವಕ್ಕೆ ಸತ್ತರೆ ಮುಂಕ್ತಿ, ಇದ್ದರೆ ಸತ್ಯ ಯುಗ ದರ್ಶನ! ಇಂತಹ ಅಲಭ್ಯ ಲಕ್ಷಣಗಳು ಕೈಸೇರುವಂತಿರುವಾಗ ಈ ಯುವಕರ ಅಧರ್ಮಿಗಳ ಹಾಳು ಗೋಜಿಗೆ ಅರ್ಥವೇನು?

(ಪ್ರೇಮ ವಿದ್ಯಾಪೀಠ ಪತ್ರಿಕೋದ್ಯಮ ಶಾಲೆಯಿಂದ.)

ಆಯುಷ್ಯವನ್ನು ಹೆಚ್ಚಿಸಬಹುದಾದರೂ ಸಾವು ಸಿದ್ಧ.

ಡಾ. ಅಲೆಕ್ಸಿಸ್ ಕಾರೆಲ್‌ರವರು ವಿಶ್ವ ವಿಖ್ಯಾತರಾದ ವೈದ್ಯರು. ನೋಬೆಲ್ ಪಾರಿತೋಷಕವನ್ನೂ ಪಡೆದು ಪ್ರಸಿದ್ಧಿ ಪಡೆದಿದ್ದಾರೆ. ಅವರು 'ಮಾನವನ ಜೀವಮಾನ'ವನ್ನು ಕುರಿತು ಬಹು ಸ್ವಾರಸ್ಯವಾದ ವಿಷಯವನ್ನು ಬರೆದಿದ್ದಾರೆ. ಒಂದೆರಡು ಶತಮಾನಗಳಷ್ಟು ಮನುಷ್ಯನ ಆಯುರ್ದಾಯವನ್ನು ಹೆಚ್ಚಿಸಬಹುದಾದರೂ, ಸಾವನ್ನು ಗೆಲ್ಲುವುದಕ್ಕಾಗುವುದೇ ಇಲ್ಲವೆಂದು ವಿಜ್ಞಾನ ರೀತ್ಯಾ ಸಿದ್ಧಾಂತ ಮಾಡಿಬಿಟ್ಟಿದ್ದಾರೆ. ಅದಕ್ಕೆ ಅವರು ಹೂಡಿರುವ ವಾದವನ್ನು ನೋಡಿ.

'ಸಾವು ಮೂರು ವಿಧದಲ್ಲಿ ಬರುತ್ತದೆ. ಹೃದಯ ಸ್ಪಂಧನವು ಸ್ಥಬ್ಧವಾಗವುದರಿಂದ ಸಾವು ಪ್ರಾಪ್ತವಾಗುತ್ತದೆ. ನರಗಳು ತಮ್ಮ ಕಲಸವನು ನಿಲ್ಲಿಸುವುದರಿಂದಲೂ ಮರಣವು ಸಿದ್ಧ. ಅಥವಾ ರಕ್ತದ ರಚನೆಯಲ್ಲಿ ವ್ಯತ್ಯಾಸವಾದರೂ ಸಾವು ಬಂಟಾಗುತ್ತದೆ.

ಯಾವ ರೀತಿಯಲ್ಲಿ ಘಟಿಸಿದರೂ, ಸಾವಿನಲ್ಲಿ ಎರಡು ಅವಸ್ಥೆಗಳುಂಟು. ಪ್ರಥಮ ಅವಸ್ಥೆಯಲ್ಲಿಯೂ ಮನುಷ್ಯನು ಸತ್ಕಂತೆಯೇ ಲೆಕ್ಕ ಉದಾಹರಣೆಗೆ ಎಲೆಯನ್ನು ಇರಿಸಿಕೊಂಡು ಒಟ್ಟನು ಸಾಯುತ್ತಿತ್ತಾನೆನ್ನಿ. ಇರಿತವಾದೊಡನೆಯೇ ರಕ್ತಚಲನೆಯೂ ಶ್ವಾಸೋಚ್ಛ್ವಾಸವೂ ನಿಂತು ಹೋಗುತ್ತದೆ. ಅಲ್ಲಿಗೆ ಅವನು ಸತ್ಕಂತೆಯೇ ಲೆಕ್ಕ. ಆದರೂ ಅವನು ಸಂಪೂರ್ಣವಾಗಿ ಸತ್ತು ಹೋಗಿಲ್ಲ. ಸರಿಯಾದ ಚಿಕಿತ್ಸೆ ನಡೆಸಿದರೆ ಉಸಿರು ಬರಬಹುದು. ಅವನ ಅಂಗಾಂಗಗಳೂ, ಮಿದುಳೂ ಇನ್ನೂ ಸತ್ತಿರುವದಿಲ್ಲ.

'ಒಂದೆರಡು ಗಳಿಗೆಯೊದನಂತರ ಸಾವಿಗೆ ಎರಡನೇ ಅವಸ್ಥೆಯು ಬರುತ್ತದೆ. ನಂತರ ಪ್ರಾಣ ಉಳಿಸುವುದು ಅಸಾಧ್ಯ. ಏಕೆಂದರೆ ಮೆದುಳೂ, ನವಗ್ರಂಥಿಗಳೆಲ್ಲವೂ ಶಿಥಿಲವಾಗಿ ಹೋಗಿರುತ್ತವೆ. ಆಗ್ಗೆ ಮರಣವು ಸಂಪೂರ್ಣ ಪ್ರಾಪ್ತವಾಗುತ್ತದೆ.

'ಮನುಷ್ಯನು ಯಾವಾಗಲೂ ಸಂಪೂರ್ಣವಾಗಿ ಸಾಯುವುದಿಲ್ಲವೆನ್ನುತ್ತಾರೆ. ದೇಹ ಸತ್ತರೂ ಆತ್ಮಕ್ಕೆ ಚ್ಯುತಿ ಇಲ್ಲವೆಂದು ಹೇಳುತ್ತಾರೆ. ಈ ಮಾತನ್ನು ಅಲ್ಲಗಳೆಯಲಾಗುವುದಿಲ್ಲ. ಸಪ್ರಮಾಣವಾಗಿ ಸತ್ಯವೆಂದು ಸಿದ್ಧಾಂತ ಮಾಡಲಾಗದಿದ್ದರೂ ಶಂದ್ಧಾಂತವಾಗಿ ಸುಳ್ಳೆಂದು ಸಾಧಿಸಲಾಗುವುದಿಲ್ಲ. ಕೆಲವರಿಗೆ ಆವೇಶಬರುವುದೂ, ಭೂತಭವಿಷ್ಯತ್ ಜ್ಞಾನವನ್ನು ಅವರು ತೋರಿಸುವುದೂ ಎಷ್ಟೋ ಉದಾಹರಣೆಗಳನ್ನು ಕೊಡಬಹುದು. ಇದರಿಂದ ಮನುಷ್ಯನ ವ್ಯಕ್ತಿತ್ವದಲ್ಲಿ ಸಾವಿನಿಂದ ತಪ್ಪಿಸಿಕೊಂಡು ಹೋಗುವ ವೈತ್ಯನ್ಯವೊಂದಿರಬಹುದೆಂದು ಹೇಳುವುದರಲ್ಲೇನೂ ತಪ್ಪು ಕಾಣುವುದಿಲ್ಲ.

'ಆದರೆ ನಾವು ಹೆಚ್ಚು ಕಾಲ ಬದುಕಬಹುದೋ? ಬದುಕಬಹುದೆಂದು ನಾನು ಹೇಳುತ್ತೇನೆ. ಸಾವು ಕವಿಯುವ ನಾನಾ ವಿಧಾನಗಳನ್ನು ಸೂಕ್ಷ್ಮವಾಗಿ ಪರಿಶೀಲಿಸಿದರೆ, ಅವುಗಳ ನಿವಾರಣೆಯನ್ನು ಬಹು ಮಟ್ಟಿಗೆ ಮಾಡಿ, ಸಾಯುವ ಕಾಲವನ್ನು ಮುಂದೆ ಹಾಕಬಹುದು.

ದೇಹದಲ್ಲಿರುವಾಗ ಮಜ್ಜಾಗ್ರಂಥಿಗಳು ಮುದಿಯೊಗುವ ಕ್ರಮವನ್ನರಿತು ಅದಕ್ಕೆ ಶಾಸ್ತ್ರೀಯವಾದ ರೀತಿಯಲ್ಲಿ ಪ್ರತಿಕ್ರಿಯೆ ಮೂಡುವುದರಿಂದ ಸಾವನ್ನು ಕಡೆಗಟ್ಟಬಹುದು. ಮನೋ ವ್ಯಾಪಾರವು ಯಾವ ಗತ್ತಿನಲ್ಲಿದ್ದರೆ ವಾರ್ಧಿಕ್ಯ ದೌರ್ಬಲ್ಯಗಳು ಕಾಣಿಸಿಕೊಳ್ಳುವುದಿಲ್ಲ ಎನ್ನುವುದನ್ನು ಕಂಡು ಹಿಡಿಯುವುದೊಂದು ಮಾರ್ಗ. ಆಹಾರ ವಿಹಾರ ಕ್ರಮಗಳನ್ನು ಸರಿಪಡಿಸಿಕೊಳ್ಳುವುದೊಂದು ವಿಧಾನ. ಕಪಿಗಳ ಗ್ರಂಥಿ ವಿಶೇಷವನ್ನು ಮನುಷ್ಯನಿಗೆ ಸೇರಿಸಿ, ಮತ್ತೆ ಯುವಕನನ್ನಾಗಿ ಮಾಡುವುದೊಂದು ಬಗೆ ಕಟ್ಟ ಕಡೆಯದಾಗಿ ಇನ್ನೊಂದು ಉಪಾಯವಿದೆ. ಮನುಷ್ಯನನ್ನು ಉಪಾಯಾಂತರಗಳಿಂದ ಸಂಪೂರ್ಣವಾಗಿ ಒಣಗಿಸಿ ಇಟ್ಟಿದ್ದು, ಅಗತ್ಯಬಿದ್ದಾಗ್ಗೆ ಆತನ ದೇಹಕ್ಕೆ ತೇವವನ್ನು ಕೊಟ್ಟು ಬದುಕಿಸಬಹುದು. ಈ ಪ್ರಯೋಗವನ್ನು ಇಲಿ, ನರಿ ಇತ್ಯಾದಿ ಜಂತುಗಳ ಮೇಲೆ ಮಾಡಿ ನೋಡಿದ್ದಾರೆ. ಅವು ಅನಂತರ ಬದುಕಿಕೊಂಡಿವೆ ಈ ರೀತಿಯಾಗಿ ಆಯುಃಪರಿಮಿತಿಯನ್ನು ಹೆಚ್ಚಿಸಬಹುದು. ಆದರೂ ಎಂದಾದರೊಂದು ದಿನ ಸಾವು ಸಿದ್ಧ. ಅದನ್ನು ಗೆಲ್ಲಲಾಗುವುದಿಲ್ಲ. ಜೀವಿತಕ್ಕೆ ಅದು ಅನಿವಾರ್ಯವಾದ ಗತಿ."

EMPIRE OF INDIA LIFE ASSURANCE CO., LTD.

ESTD. 1897.

TEN YEARS' PROGRESS.

	1925 Rs.	1935 Rs.
Income	45,50,127	73,28,467
New Assurance	78,07,000	1,47,57,880
Total Assets	2,46,08,120	4,50,03,372
Assurance in force	6,95,93,793	11,56,12,828

Form of proposal and other particulars will be sent on Application.

Head office:— Empire of India Life Building, BOMAY. } 52—11 { Branch Office:— 152/3—Commercial Street, BANGALORE.

ಕೊಡಗು

ಜನವರಿ ತಾ ೩೦ನೇ ಶುಕ್ರವಾರ ೧೯೩೬.

ಕಾಫಿ ಪ್ಲಾಂಟೆರುಗಳ ಸ್ಥಿತಿ.

ರೈತರ ಆರ್ಥಿಕ ದುಃಸ್ಥಿತಿಯು ಎಷ್ಟರ ಮಟ್ಟಿಗೆ ವರ್ಣನಾತೀತವಾಗಿದೆಯೆಂದೂ, ಈ ಕಷ್ಟ ಕಾಲದಲ್ಲಿ ಅವರಿಗೆ ಸರ್ಕಾರದವರು ಹೇಗೆ ಸಹಾಯಮಾಡಬೇಕೆಂಬುದನ್ನೂ ಕಳೆದ ವಾರ ಬರೆದಿದ್ದಾಯಿತು ಇನ್ನು ಕೊಡಗಿನ ಕಾಫಿ ಪ್ಲಾಂಟೆರುಗಳ ಸ್ಥಿತಿಯು ಹೇಗಿದೆಯೆಂಬುದನ್ನು ಸ್ವಲ್ಪ ವಿಚಾರಿಸುವ. ಕೊಡಗು ಸರ್ಕಾರದ 1934–35 ನೇ ವರ್ಷದ ಅಡಳಿತ ವರದಿಯಲ್ಲಿ ನಮೂದಿಸಿರುವಂತೆ ಕೊಡಗಿನಲ್ಲಿ 'ಕಾಫಿ ಹಿಡುವಳಿಯ ದರದಲ್ಲಿರುವ ಒಟ್ಟು ವಿಸ್ತೀರ್ಣವು 99,934 ಏಕರುಗಳು. ಇದರಲ್ಲಿ ಕಾಫಿಯ ದರದ ಕಂದಾಯದ 9,356 ಏಕರು ಕಾಫಿ ಸಾಗುವಳಿ ವಿಲೆಗಳೂ, 2,302 ಏಕರು ಕಿತ್ತಳೆ ತೋಟಗಳೂ, 45,790 ಏಕರು ಸಾಳು ಬಿದ್ದ ಕಾಫಿ ತೋಟಗಳೂ, 1,158 ಏಕರು ರಬ್ಬರ್ ತೋಟಗಳೂ ಮತ್ತು 438 ಏಕರು ಕಲ್ತಾರು ತೋಟಗಳೂ ಸೇರಿವೆ. ಕಲ್ತಾರು ತೋಟಗಳು ಲಂಕಾನದಿಂದ ತುಂಬಿ ಹೋಗಿ ಸಾಳು ಬಿದ್ದಿವೆ. ಸರಿಯಾದ ಕಾಫಿ ವ್ಯವಸಾಯದಲ್ಲಿರುವಂಥ ಒಟ್ಟು ಜಾಗವು 40,890 ಏಕರು ಆಗಿದೆ.' ಕಾಫಿ ಕಂದಾಯವು ಏಕರಿಗೆ ಎರಡು ರೂಪಾಯಿ ಆಗಿರುವುದರಿಂದ ಸರ್ಕಾರಕ್ಕೆ ರೂ. 81,780 ಕಾಫಿ ಕಂದಾಯವು ದೊರೆಯುತ್ತದೆ.

ಸರಾಸರಿ ಉತ್ಪತ್ತಿಯನ್ನು ಗಣನೆಗೆ ತೆಗೆದುಕೊಂಡರೆ ಕಾಫಿಯ ಆದಾಯವು ಭತ್ತದ ಆದಾಯವನ್ನು ಎಂಟುತ್ತದೆ. ಆದರೂ ಕಾಫಿ ಕಂದಾಯವು ಭತ್ತದ ಕಂದಾಯಕ್ಕಿಂತ ಕಡಿಮೆಯಾಗಿದೆ. ಕಾಫಿ ಪ್ಲಾಂಟೆರುಗಳಿಗೆ ಈ ರಿಯಾಯಿತಿಯು ಇದ್ದರೂ ಕೂಡ ಅವರ ಸ್ಥಿತಿಯು ಇಂದು ಬಹು ಶೋಚನೀಯವಾಸ್ಥೆಯಲ್ಲಿದೆಯೆಂಬುದರಲ್ಲಿ ಸಂಶಯವಿಲ್ಲ. ಕೆಲವು ವರ್ಷಗಳ ಹಿಂದೆ ಕಾಫಿಯು ಚೆನ್ನಾಗಿ ಬೆಳೆಯುತ್ತಿದ್ದು, ಕೃಯವು ಬಹು ಹೆಚ್ಚಾಗಿದ್ದಾಗ್ಯೆ ಪ್ಲಾಂಟೆರುಗಳು ವಾಡಿಕೆಗಿಂತ ಹೆಚ್ಚು ಖರ್ಚು ಮಾಡಲು ಅಭ್ಯಾಸ ಮಾಡಿದರು; ಈಗ ಅವರಿಗೆ ಅದೊಂದು ಬಿಡಲಾರದ ಪದ್ಧತಿಯೇ ಆಗಿ ಬಿಟ್ಟಿದೆ. ಕಾಫಿಯು ಬೆಲೆಯು ಈಗ ಅರ್ಧಕರ್ಧ ಇಳಿದು ಹೋಗಿರುವುದರಿಂದ ಅವರ ಆದಾಯವು ಬಹು ಕಡಿಮೆಯಾಗಿರುವುದಾದರೂ ಅದರಂತೆ ತಮ್ಮ ಖರ್ಚನ್ನು ಹೊತೆ ಮಾಡಲು ಅವರಿಗೆ ಸಾಧ್ಯವಿಲ್ಲವಾಗಿದೆ. ಆದ ಕಾರಣ ಅವರಲ್ಲಿ ಅನೇಕರು ಸಾಲದ ಬಾಧೆಗೆ ಸಿಕ್ಕಿ ನರಳುತ್ತಿರುವರು.

ಕಾಫಿ ವ್ಯವಸಾಯವು ಭತ್ತದ ವ್ಯವಸಾಯದಂತಲ್ಲ. ಕಾಫಿ ತೋಟದ ಕೆಲಸಗಳನ್ನು ಒಂದೆರಡು ವರ್ಷ ಸರಿಯಾಗಿ ನಡಿಸದೆ ಹೋದರೆ ಆ ತೋಟವು ಬಹು ಬೇಗನೆ ಹಾಳಾಗಿ ಹೋಗುವುದು. ಒಂದು ವೇಳೆ ಅದನ್ನು ಪುನರುದ್ಧಾರ ಮಾಡಬೇಕಾದರೆ ಬಹು ಹೆಚ್ಚು ಖರ್ಚು ಮಾಡಬೇಕಾಗುವುದು. ಅದೂ ಅಲ್ಲದೆ ಕಾಫಿ ಫಸಲು ಎಲ್ಲಾ ವರ್ಷಗಳಲ್ಲಿ ಒಂದೇ ಸಮನಾಗಿ ಬೆಳೆಯುವುದಿಲ್ಲ. ಮೂರರಿಂದ ಐದು ವರ್ಷಗಳಿಗೊಮ್ಮೆಯೇ ಉತ್ತಮವಾದ ಫಸಲು ದೊರೆಯುವದಾಗಿದೆ. ಫಸಲೂ ಕಡಿಮೆಯಾಗಿ, ಬೆಲೆಯೂ ಇಳಿದು ಹೋದ ವರ್ಷಗಳಲ್ಲಿ ವಾಡಿಕೆಯ ಖರ್ಚನ್ನು ನಿವಾರಿಸಲು ಸಾಲ ಮಾಡಲೇ ಬೇಕಾಗುತ್ತೆ. ಹೀಗೆ ಸಾಲ ತೆಗೆಯುವುದು ತೋಟದ ಯಾ ಫಸಲಿನ ಗಿರ್ವಿಯ ಮೇಲಾಗಿದೆ.

ಈ ವೈಪರೀತ್ಯದಲ್ಲಿ ಸುಮಾರು ಅರ್ಧದಷ್ಟು ಕಾಫಿ ತೋಟಗಳು ಯೂರೋಪಿನರ ಸ್ವಾಧೀನವಿವೆ. ಅವರ ಆರ್ಥಿಕ ಸ್ಥಿತಿಯೂ ಹೀನವಾಗಿದೆ. ಆದರೆ ಅವರಿಗೆ ಇಂಗ್ಲೆಂಡಿನ ಬ್ಯಾಂಕುಗಳಿಂದಲೂ, ಸಾಹುಕಾರರುಗಳಿಂದಲೂ ಬಹು ಸುಲಭ ದರದ ಬಡ್ಡಿಯಲ್ಲಿ ಸಾಲ ದೊರೆಯುತ್ತದೆಂದೂ, ಸಾಲ ತೆಗೆದು ಕೊಂಡವರ ಕಾಫಿ ತೋಟದಲ್ಲಿ ತುಂಬಾ ನಷ್ಟವಾದ ಪಕ್ಷದಲ್ಲಿ ಬಡ್ಡಿಯು ಮಾಫಿ ಬಿಡಲ್ಪಡುವ ಸಂಭವಗಳಿವೆಯೆಂದೂ ತಿಳಿಯಬರುತ್ತದೆ. ಆದರೆ ಇಂಡಿಯನ್ ಪ್ಲಾಂಟೆರುಗಳಿಗೆ ಸಾಲ ದೊರೆಯುವುದೇ ಕಷ್ಟವಾಗಿದೆ; ಒಂದು ವೇಳೆ ದೊರೆತರೂ ಅದರ ಬಡ್ಡಿಯ ದರವು ಹೆಚ್ಚಾಗಿರುತ್ತದೆ. ಆದುದರಿಂದ ಈಗಿನ ಆರ್ಥಿಕ ಮುಗ್ಗಟ್ಟಿನ ಸ್ಥಿತಿಯಲ್ಲಿ ಅವರಿಗೆ ತಮ್ಮ ತೋಟಗಳ ಕೆಲಸವನ್ನು ಸರಿಯಾಗಿ ನಡಿಸಲು ಸಾಧ್ಯವಿಲ್ಲವಾಗಿದೆ. ಕಾಫಿಯನ್ನು ಕುಯಿಸಲೂ ಕೂಡ ಹಣವಿಲ್ಲದೆ ಹಲವರು ಕಾಫಿಯನ್ನು ಮುಂಗಡವಾಗಿ ಮಾರ್ಕೆಟ್ಟಿನ ಧಾರಣೆಗಿಂತ ಕಡಿಮೆಯಾಗಿ ಮಾರಿ ವ್ಯಾಪಾರಿಗಳಿಂದ ಅಡವ್ವಿನ್ನು ತೆಗೆದುಕೊಳ್ಳುತ್ತಿದ್ದಾರೆ. ಈ ಸ್ಥಿತಿಯನ್ನು ಮುಂದುವರಿಯಲು ಬಿಟ್ಟರೆ ಕೆಲವು ವರ್ಷಗಳಲ್ಲೇ, ಒಮ್ಮೆ ಬಹು ಲಾಭದಾಯಕವಾಗಿದ್ದ ಕಾಫಿ ವ್ಯವಸಾಯವು ಮೂಲೆಗೆ ಬಿದ್ದು ಹೋಗುವುದೆಂಬ ಭಯವಿದೆ. ಇದರಿಂದ ಸರ್ಕಾರದವರಿಗೆ ಕಂದಾಯದಲ್ಲಿ ದೊಡ್ಡ ನಷ್ಟವೂ ಸಂಭವಿಸುವುದು.

ಕಾಫಿ ಪ್ಲಾಂಟೆರುಗಳ ಸ್ಥಿತಿಯನ್ನು ಉತ್ತಮಗೊಳಿಸಲು ಕಾಫಿಗೆ ಒಳ್ಳೇ ಬೆಲೆ ಸಿಕ್ಕುವಂತೆಯೂ, ಅವರಿಗೆ ಸುಲಭ ಬಡ್ಡಿಯಲ್ಲಿ ಹಣ ದೊರೆಯುವಂತೆಯೂ ಮಾಡಬೇಕಾಗಿದೆ. ಕಾಫಿಗೆ ಶಕ್ತ ಮಾರ್ಕೆಟ್ಟನ್ನು ಕಂಡು ಹಿಡಿಯಲಿಕ್ಕಾಗಿ, ಇಂಡಿಯಾ ಸರ್ಕಾರದವರು ಹಿಂದೂಸ್ಥಾನದಿಂದ ಹೊರಗೆ ಹೋಗುವ ಕಾಫಿಗೆ ಸೆಸ್ಸನ್ನು ಹಾಕಿ, ಅದರಿಂದ ಬರುವ ಆದಾಯದಿಂದ ಕಾಫಿಯ ಉಪಯೋಗವನ್ನು ಪ್ರಚಾರಗೊಳಿಸಲು ಒಂದು ಸೆಸ್ ಕಮಿಟಿಯವರ್ನು ನೇಮಿಸಿರುವರು. ದಕ್ಷಿಣ ಹಿಂದೂಸ್ಥಾನದ ಸಂಯುಕ್ತ ಪ್ಲಾಂಟೆರುಗಳ ಸಂಘವೂ, ಕಾಫಿ ಬೆಳೆಸುವವರ ಸಂಘವೂ ಇದಕ್ಕೆ ಒತ್ತಾಸೆ ಕೊಡುತ್ತಿವೆ. ಈ ಪ್ರಚಾರ ಕೆಲಸದ ಫಲಿತಾಂಶವು ಫಕ್ಕನೆ ದೊರೆಯುವಂಥಾದ್ದಲ್ಲ, ಆದರೆ ಈಗ ತತ್ಕಾಲ ಪ್ಲಾಂಟೆರುಗಳಿಗೆ ಸುಲಭದಲ್ಲಿ ಹಣ ಒದಗಿಸಿಕೊಡುವ ಏರ್ಪಾಡನ್ನು ಕೂಡಲೇ ಮಾಡಬೇಕಾಗಿದೆ. ಇಲ್ಲವಾದರೆ ಅವರು ತಲೆ ಎತ್ತಲಾಂದೆ ಬಹು ಬೇಗನೆ ಕ್ಷೀಣಗತಿಯನ್ನು ಹೊಂದುವರು.

ಕೆಲವು ತಿಂಗಳುಗಳ ಹಿಂದೆ ಪ್ಲಾಂಟೆರುಗಳಿಗೆ ಕಮ್ಮಿಬಡ್ಡಿಯಲ್ಲಿ ಸಾಲ ಕೊಡಲಿಕ್ಕಾಗಿ ಸ್ಥಳೀಯ ಸರ್ಕಾರದವರು ಇಂಡಿಯಾ ಸರ್ಕಾರದಿಂದ ಸುಮಾರು 3 ಲಕ್ಷ ರೂಪಾಯಿ ಸಾಲ ಪಡೆಯಲು ಯತ್ನಿಸುತ್ತಿದ್ದಾರೆಂಬ ವಾರ್ತೆ ಹರಡಿತ್ತು. ಆದರೆ ಅದು ಏನಾಯಿತೆಂದು ಇತ್ತಲಾಗಿ ವರ್ತಮಾನ ಇಲ್ಲದ್ದಾಗಿದೆ. ಕಾರಣವೇನೋ ತಿಳಿಯದು. ಸರ್ಕಾರದವರು ಈ ವಿಷಯದಲ್ಲಿ ಉದಾಸೀನ ಭಾವವನ್ನು ತಾಳದೆ ಕೂಡಲೆ ಮಧ್ಯವರ್ತಿ ಸರ್ಕಾರದಿಂದ ಹಣ ಸಹಾಯ ಪಡೆಯುವುದು ಅತ್ಯಗತ್ಯವಾಗಿದೆ.

ಇದೂ ಅಲ್ಲದೆ, ಸಾಲದ ಬಾಧೆಯಿಂದ ತತ್ಕಾಲ ಪರಿಹಾರ ಕೊಡಬೇಕಾಗಿದೆ. ಬಡ್ಡಿಯನ್ನೆಲ್ಲಾ ಸಲ್ಕೆ ಮಾಡಿದ ಪಕ್ಷದಲ್ಲಿ ಒಂದೆರಡು ವರ್ಷದ ವರೆಗೆ ಅಮಲ್ಜಾರಿ ತೆಗೆಯುವುದನ್ನು ಬಾಕಿ ಮಾಡತಕ್ಕದ್ದು ಮತ್ತು ಒಂದು ವರ್ಷದ ವರೆಗೆ ದಾವ ದಾಖಲು ಮಾಡುವುದನ್ನೂ ನಿಲ್ಲಿಸಿದರೆ ಉತ್ತಮವಾಗುತ್ತಿತ್ತು. ಈ ರಿಯಾಯಿತಿಯು ಭತ್ತ ವ್ಯವಸಾಯ ಗಾರರಿಗೂ ದೊರೆಯುವಂತೆ ಮಾಡುವುದು ಯುಕ್ತವಾಗಿದೆ. ಸರ್ಕಾರದವರು ಈ ರೀತಿಯ ಸಹಾಯವೆನ್ನೆ ಮಾಡದೆ ಹೋದರೆ ಕಾಫಿ ಪ್ಲಾಂಟೆರುಗಳು ತಮ್ಮ ಈಗಿನ ವಿಷಮ ಸ್ಥಿತಿಯಿಂದ ಪಾರಾಗುವುದು ದುರ್ಲಭವೆಂದೇ ಹೇಳಬೇಕಾಗಿದೆ.

ಸ್ವಾತಂತ್ರ್ಯ ದಿನ.

ಧ್ವಜಾರೋಹಣ.

ಕಾಂಗ್ರೆಸು ಸಂಸ್ಥೆಯ ಅಧ್ಯಕ್ಷರ ಸೂಚನೆಯ ಮೇರೆ ಹಿಂದೂ ದೇಶದ ಬೇರೆ ಕಡೆಗಳಂತೆಯೇ ಕೊಡಗಿನಲ್ಲೂ ತಾ. 26–1–36 ನೇ ಆದಿತ್ಯವಾರ ಸ್ವಾತಂತ್ರ್ಯ ದಿನವು ಆಚರಿಸಲ್ಪಟ್ಟಿತು. ಆ ದಿನ ಪ್ರಾತಃಕಾಲದಲ್ಲಿ ಮಡಿಕೇರಿ, ವೀರಾಜಪೇಟೆ, ಪೊನ್ನಂಪೇಟೆ ಮೂರ್ನಾಡು ಮತ್ತು ಹುದಿಕೇರಿ—ಈ ಸ್ಥಳಗಳಲ್ಲಿ ರಾಷ್ಟ್ರೀಯ ಧ್ವಜಾರೋಹಣ ಮಾಡಿ ಕಾಂಗ್ರೆಸಿನ ಪೈಸಿಡೆಂಟರಾದ ಶ್ರೀ ಬಾಬುರಾಜೇಂದ್ರ ಪ್ರಸಾದರವರು ಕಳುಹಿಸಿದ್ದ ಈ ಕೆಳಗಿನ ಶರಾವನ್ನು ಓದಿ ಸರ್ವ ಸಮ್ಮತದಿಂದ ಪಾಸುಮಾಡಲಾಯಿತು.

ಶರಾವು.

'ಇಂದಿನ ಸ್ವಾತಂತ್ರ್ಯ ದಿನದಂಥ ಗಂಭೀರವಾದ ದಿನದಲ್ಲಿ ನಾವು ಸ್ಮರಣೆ ಮಾಡುವದೇನೆಂದರೆ— ಸ್ವಾತಂತ್ರ್ಯವು ನಮ್ಮ ಜನ್ಮಹಕ್ಕಾಗಿರುವದರಿಂದ ಅದನ್ನು ಸಾಧಿಸಲು ನಾವು ಯಾವತ್ತೂ ಸತತ ಶಾಂತ ಮತ್ತು ನ್ಯಾಯವಾದ ರೀತಿಯನ್ನು ಅವಲಂಬಿಸುವೆವು. ನಾವು ಈ ವಿಷಯವಾಗಿ ಆತ್ಮಯಜ್ಞ ಮತ್ತು ಸಂಕಷ್ಟವನ್ನು ಸಹಿಸಲಿಕ್ಕೆ ಸಿದ್ಧರಿರುವೆವಲ್ಲದೆ ನಮ್ಮ ಧ್ಯೇಯವು ಕೈಗೂಡುವ ವರೆಗೆ ಸುಮ್ಮನಿರಲಾರೆವು. ನಮ್ಮ ಈ ಧ್ಯೇಯ ಸಾಫಲ್ಯಕ್ಕೋಸ್ಕರ ಈ ಕೆಳಗಿನ ವಿಧಾಯಕ ಕಾರ್ಯಕ್ರಮಗಳನ್ನು ಕೈಕೊಳ್ಳುವೆವು.

(ಅ) ಭಿನ್ನ ಭಿನ್ನ ಸಮೂಜಗಳಲ್ಲಿ ಅಂತಃಕರಣ ಪೂರ್ವವಾಗಿ ಐಕ್ಯತೆಯ ಕಂದು ಎಲ್ಲ ಜಾತಿ ಮತ ಮತ್ತು ಪಂಥಗಳಲ್ಲಿ ಸಮಾನತೆಯನ್ನು ನಿರ್ಮಾಣ ಮಾಡುವೆವು

(ಆ) ಮಾದಕ ಪದಾರ್ಥಗಳನ್ನು ಅಂದರೆ ನಿಷಾ ವಸ್ತುಗಳನ್ನು ನಿಷೇಧಿಸುವೆವು.

(ಇ) ಕೈಸೂಲು ಮತ್ತು ಇತರ ಗ್ರಾಮೊದ್ಯೋಗಗಳಿಗೆ ಉತ್ತೇಜನ ಕೊಡುವೆವು. ಹಳ್ಳಿಗಳಲ್ಲಿನ ವಸ್ತುಗಳನ್ನೇ ಹೆಚ್ಚಾಗಿ ನಮ್ಮ ಉಪಯೋಗಕ್ಕೆ ತರುವೆವಲ್ಲದೆ ಅವುಗಳಿಗೆ ಪ್ರೋತ್ಸಾಹಿಸುವೆವು.

(ಈ) ಅಸ್ಪೃಶ್ಯತೆಯನ್ನು ಹೋಗಲಾಡಿಸುವೆವು.

(ಉ) ನಮಗೆ ಶಕ್ಯವಿರುವ ಮಟ್ಟಿಗೆ, ಅನ್ನವಿಲ್ಲದೆ ಸಂಕಟಪಡುವ ನಮ್ಮ ಸಹೋದರ ಲಕ್ಷ ಗಟ್ಟಿಲೆ ಜನರನ್ನು ಸಂರಕ್ಷಿಸುವ ಉಪಾಯವನ್ನು ಹೂಡುವೆವು.

(ಊ) ರಾಷ್ಟ್ರದ ಉನ್ನತಿಯ ಬಗ್ಗೆ ಸಕಲ ವಿಧಾಯಕ ಮತ್ತು ಸಂಘಟನಾ ಕಾರ್ಯವನ್ನು ಕೈಕೊಳ್ಳುವೆವು.'

ಸಾರ್ವಜನಿಕ ಸಭೆ.

ಇದೇ ದಿನ ಮಧ್ಯಾಹ್ನ 12½ ಗಂಟೆಗೆ ಗೋಣಿಕೊಪ್ಪಲ ಮುಖ್ಯ ಜಿಲ್ಲೆಗಳಲ್ಲಿ ರಾಷ್ಟ್ರೀಯ ಗೀತೆಗಳನ್ನು ಹಾಡಿ ತಕ್ಕ, ಜಯಘೋಷ ಮಾಡುತ್ತಾ ಮೆರವಣಿಗೆಯನ್ನು ಆಸ್ಪತ್ರೆಯ ಪಕ್ಕದ ಮೈದಾನದಲ್ಲಿ ಸಾರ್ವಜನಿಕ ಸಭೆ ಲಾಯಿತು. ವಂದೇ ಮಾತರಂ ಪದವನ್ನು ಹಾಡಿ ಅಲ್ಲಿ ಟ್ಟಿದ್ದ ಎತ್ತರವಾದ ಸ್ತಂಭದ ಮೇಲೆ ರಾಷ್ಟ್ರೀಯ ಬಾವುಟವನ್ನು ಹಾರಿಸಲಾಯಿತು. ಧ್ವಜದ ಗೀತೆಯನ್ನು ಹಾಡಿದ ಮೇಲೆ ಸ್ಥಳೀಯ ಕಾಂಗ್ರೆಸು ಕಮಿಟಿಯ ಅಧ್ಯಕ್ಷರಾದ ಶ್ರೀ ಕೆ. ಸಿ ಕರುಂಬಯ್ಯನವರು ಮೇಲೆ ಕಾಣಿಸಿರುವ ಸ್ವಾತ್ಯದ ಶಾಸನವನ್ನು ಓದಿದರು. ಎಲ್ಲರ ಸಮ್ಮತದಿಂದ ಅದು ಮಂಜೂರು ಮಾಡಲ್ಪಟ್ಟ ನಂತರ ಸಭೆಯು ಬರಕಾಸ್ತಾಯಿತು.

ಅನಂತರ ಸಾಯಂಕಾಲ ಶ್ರೀ ರಾಮ ಮಂದಿರದಲ್ಲಿ ರಾಷ್ಟ್ರಗೀತಾ ಭಜನೆಯು ನೆಂವೇರಿತು.

ಗೋಣಿಕೊಪ್ಪಲು ಸಾರ್ವಜನಿಕ ಸಭೆ.

ಕೊಡಗು ಜವಿನಾರ್ದರ ಸಂಘದ ಆಶ್ರಯದಲ್ಲಿ ತಾ. 26 ನೇ ಆದಿತ್ಯವಾರ ಮಧ್ಯಾಹ್ನ ಗೋಣಿಕೊಪ್ಪಲಲ್ಲಿ ಒಂದು ಸಾರ್ವಜನಿಕ ಸಭೆ ನಡೆಯಿತು. ಮ. ರಾ. ಕೊಡಂದೆರ ಚಂಗಪ್ಪನವರು ಅಧ್ಯಕ್ಷರಾಗಿದ್ದರು. ಅಧ್ಯಕ್ಷರ ಅನುಮತಿಯಿಂದ ಜವಿನಾರ್ದರ ಸಂಘದ ಪೈಸಿಡೆಂಟರಾದ ಮ. ರಾ. ಪಿ. ಐ. ಬೆಳ್ಯಪ್ಪನವರು ಕೊಡಗಿನಲ್ಲಿ ಪ್ರತ್ಯೇಕ ಭೂಮಿ ಗಿರ್ವಿ ಬ್ಯಾಂಕನ್ನು ಸ್ಥಾಪಿಸುವುದರ ಸಾಧಕ ಬಾಧಕಗಳನ್ನು ಕುರಿತು ಭಾಷಣ ಮಾಡಿದರು. ಜವಿನಾರ್ದರ ಸಂಘದ ಅಧ್ಯಾಪಕರಾದ ಮೆ. ಕೊಳ್ಳಿಮಾಡ ಕರುಂಬಯ್ಯನವರು ಭೂಮಿ ಅಡಮಾನದ ಬ್ಯಾಂಕಿನ ಅನಾವಶ್ಯಕತೆಯನ್ನೂ, ತೊಂದರೆಗಳನ್ನೂ ಕುರಿತು ಮಾತಾಡಿದರು. 'ಈ ವಿಚಾರ ಒಂದು ಕ್ಷದ ಅಭಿಪ್ರಾಯ ನೂತ್ಯ ಕೇಳಿದ್ದಾಯಿತು. ಇನ್ನೊಂದು ಕಡೆಯ ವಾದ ಕೇಳಬೇಕು. ಅಲ್ಲದೆ ಈ ಬ್ಯಾಂಕಿನ ಪ್ರಯೋಜನ, ನಿಬಂಧನೆ ವಗೈರೆಗಳನ್ನು ಪ್ರಕಟಿಸಿ ಜನರ ಅಭಿಪ್ರಾಯ ತೆಗೆದುಕೊಳ್ಳುವಂತೆ ಕಮಿಷನರನ್ನು ಕೇಳುವುದು ಉತ್ತಮವೆಂದು' ಅಧ್ಯಕ್ಷರು ಸೂಚಿಸಿದರು. 'ಈ ವಿಷಯ ಆರ್ಥಿಕ ವಿಚಾರಣಾ ಕಮಿಟಿಯವರ ವರದಿ ಪ್ರಕಟವಾಗಿದೆ; ಸಹಕಾರಿ ಪತ್ರಿಕೆಯಲ್ಲಿ ಚರ್ಚಿಸಲ್ಪಟ್ಟಿದೆ; 3 ವರ್ತಮಾನ ಪತ್ರಿಕೆಗಳಲ್ಲೂ ವಿವರವಾಗಿ ಬರೆಯಲ್ಪಟ್ಟಿದೆ. ಇನ್ನೂ ಕಾದರೆ ದೇಶದವರ ಅಭಿಪ್ರಾಯ ಕೊಡಲು ಬಹು ತಡವಾಗಿ, ನಿಷ್ಪ್ರಯೋಜನವಾಗುವುದು' ಎಂದು ಮುಂತಾಗಿ ಮೆ. ಮುಂಡೆಯಡ ವೊಣಣ್ಣನವರು, ಪಿ. ಬೆಳ್ಯಪ್ಪನವರೇ ಮೊದಲಾದ ಕೆಲವರು ಹೇಳಿ ಮೇಲೆ ಅಧ್ಯಕ್ಷರು ಆದಕ್ಕೆ ಒಪ್ಪಿ, ಈ ಕೆಳಗಿನ ಶರಾವು ಸರ್ವ ಸಮ್ಮತದಿಂದ ಮಂಜೂರಾಯಿತು.

1 'ಕೊಡಗಿನಲ್ಲಿ ಭೂಮಿ ಗಿರ್ವಿ ಬ್ಯಾಂಕನ್ನು ಪ್ರತ್ಯೇಕವಾಗಿ ಸ್ಥಾಪಿಸುವುದರ ಬದಲು ದೀರ್ಘ ಕಂತಿನ ಸಾಲ ಕೊಡುವ ಏರ್ಪಾಡನ್ನು ಸಹಕಾರಿ ಸೆಂಟ್ರಲ್ ಬ್ಯಾಂಕಿನಲ್ಲೇ ಮಾಡುವುದು ಉತ್ತಮವೆಂದು ಈ ಸಭೆಯ ಅಭಿಪ್ರಾಯವಾಗಿದೆ

ನಂತರ ಈ ಕೆಳಗಿನ ಎರಡು ಶರಾವುಗಳು ಚಿಕ್ಕ ಭಾಷಣಗಳಾದ ಮೇಲೆ ವಿರೋಧವೇನೂ ಇಲ್ಲದೆ ಪಾಸು ಮಾಡಲ್ಪಟ್ಟವು.

2. 'ಈ ವರ್ಷದ ಬೆಳೆ ಫಸಲು ಉತ್ತಮವಾಗಿಲ್ಲದ್ದರಿಂದಲೂ, ಭತ್ತದ ಬೆಲೆಯು ಕಡಿಮೆಯಾಗಿರುವುದರಿಂದಲೂ ಕಂದಾಯದ ಮೂರರಲ್ಲಿ ಒಂದು ಭಾಗವನ್ನು ಈ ವರ್ಷ ಮಾಫಿ ಮಾಡಬೇಕೆಂದೂ, ಕಳೆದ ಎರಡು ವರ್ಷಗಳ ಕಂದಾಯದಲ್ಲಿ ತೊಡಗಿಸಿದ ತತ್ಕಾಲಿಕ ರಿಯಾಯಿತಿಯನ್ನು ಖಾಯಂ ಮಾಫಿ ಬಿಡಬೇಕೆಂದೂ ಈ ಸಭೆಯವರ ಕೋರಿಕೆಯಾಗಿದೆ'

3 'ಕೊಡಗಿಗೆ ರಾಜಕೀಯ ಸುಧಾರಣೆಗಳನ್ನೇನೂ ಕೊಡಲು ಏರ್ಪಾಡು ಮಾಡದಿರುವುದು ತುಂಬಾ ಅತೃಪ್ತಿ, ಮತ್ತು ಅಸಮಂಜಸಕರ, ಆದುದರಿಂದ ಪೂರ್ಣ ಜವಾಬ್ದಾರಿ ಸರ್ಕಾರವನ್ನು ಸ್ಥಾಪಿಸಲು ಕೂಡಲೇ ಏರ್ಪಾಡು ಮಾಡತಕ್ಕದ್ದು.'

ವಿಜ್ಞಾಪನೆ.

ಕಂದಾಯ ಮಾಫಿ, ಭೂಮಿ ಗಿರ್ವಿ ಬ್ಯಾಂಕ., ಮತ್ತು ಕೊಡಗಿನ ರಾಜಕೀಯ ಸುಧಾರಣೆ—ಈ ಪ್ರಾಮುಖ್ಯ ವಿಷಯಗಳನ್ನು ಚರ್ಚಿಸಲಿಕ್ಕಾಗಿ ಕೊಡಗು ಜವಿನಾರ್ದರ ಸಂಘದ ಆಶ್ರಯದಲ್ಲಿ ಈ ಕೆಳಗಿನ ಸ್ಥಳಗಳಲ್ಲಿ ಸಾರ್ವಜನಿಕ ಸಭೆಗಳು ನಡಿಸಲ್ಪಡುವವು. ಸರ್ವರೂ ದಯವಿಡಿಸಬೇಕಾಗಿ ಕೋರಲಾಗಿದೆ.

ಸ್ಥಳ.	ತಾರೀಕು.	
ಸುಂಟಿಕೊಪ್ಪ	2–2–'36	ಮಧ್ಯಾಹ್ನ
ಸೋಮವಾರಪೇಟೆ	3–2–'36	,,
ಫ್ರೇಜರ್‌ಪೇಟೆ	4–2–'36	,,
ಹುದಿಕೇರಿ	10–2–'36	,,
ಅಮ್ಮತ್ತಿ	11–2–'36	,,
ವೀರಾಜಪೇಟೆ	12–2–'36	,,

ಬೇರೆ ಸ್ಥಳಗಳ ತಾರೀಕುಗಳು ಬರುವ ವಾರ ಸ್ಪಷ್ಟಪಡುವುವು.

ಜವಿನಾರ್ದರ ಸಂಘ, ಐ ಪಿ. ಕಾಯಿಪ್ಪ.
ತಾ. 30–1–'36, (ಗೌ. ಕಾರ್ಯದರ್ಶಿ)

ನೋಣಿಕೊಪ್ಪಲು ದನಗಳ ಪ್ರದರ್ಶನ.

"Supplement to this issue"

ಕಾರ್ಯ ಕ್ರಮ ಪಟ್ಟಿ.

5-2-1936.
11 ಗಂಟೆಗೆ ಪೂಜೆ ಮತ್ತು ಪ್ರದರ್ಶನದ ಪ್ರಾರಂಭ.
ಮೆ|| ಕೆ. ಬಿ. ಗಣಪತ್ತಿಯಂ.ಎಲ್.ಸಿ. ಯವರಿಂದ ತೆರೆಯಲ್ಪಡುವುದು.

6-2-1936.
11 ಗಂಟೆಗೆ ಹೆಣಿಗೆ ಹೊಲಿಗೆಗಳ ಪ್ರದರ್ಶನ ಮಿಸಸ್. ಬುಲ್ ರವರಿಂದ ತೆರೆಯಲ್ಪಡುವುದು, ಮಿಸೆಸ್. ಪಿ. ಯಂ. ಗಣಪತ್ತಿಯವರು ಅಧ್ಯಕ್ಷಸ್ಥಾನವನ್ನು ವಹಿಸುವರು.
2 ಗಂಟೆಗೆ ಹಂಣು ಹಂಪಲು, ತರಕಾರಿಗಳ ಪ್ರದರ್ಶನವು ಮೆ|| ಐ. ಬುಲ್ ರವರಿಂದ ತೆರೆಯಲ್ಪಡುವುದು. ರಾವ್ ಸಾಹೇಬ್ ಪಿ.ಎ. ಚಂಗಪ್ಪನವರು ಅಧ್ಯಕ್ಷಸ್ಥಾನವನ್ನು ವಹಿಸುವರು.
3 ಗಂಟೆಗೆ ಮೆ|| ಯಂ.ಯಂ. ಪೊನ್ನಪ್ಪನವರಿಂದ "ಸ್ತ್ರೀಯರು ಮತ್ತು ಕೈಗಾರಿಕೆ" ಉಪನ್ಯಾಸ.

7-2-1936.
11 ಗಂಟೆಗೆ ಕೋಳಿಗಳ ಪ್ರದರ್ಶನ.
2 ಗಂಟೆಗೆ ಮೆ|| ಎ ಯಂ. ಮುತ್ತಪ್ಪನವರಿಂದ "ಕೋಳಿಗಳನ್ನು ಸಾಕುವುದು" ಉಪನ್ಯಾಸ ಕೆ. ಚಂಗಪ್ಪ, ಡಿ. ಡೈರೆಕ್ಟರ್ ರವರು ಅಧ್ಯಕ್ಷಸ್ಥಾನವನ್ನು ವಹಿಸುವರು.

8-2-1936.
11-30 ಗಂಟೆಗೆ ದನಗಳ ಪ್ರದರ್ಶನ ಯಂ. ಎಸ್. ಮಂದಣ್ಣ, ಡಿ. ಮೇಜಿಸ್ಟ್ರೇಟ ರವರಿಂದ ತೆರೆಯಲ್ಪಡುತ್ತೆ, ಮೆ|| ಐ. ಬುಲ್ ರವರು ಅಧ್ಯಕ್ಷಸ್ಥಾನ ವಹಿಸುವರು.
ಡಾಕ್ಟರ್. ಸಿ. ಬಿ. ಸೋಮಂಣನವರಿಂದ "ದನಗಳನ್ನು ಸಾಕುವುದು" ಉಪನ್ಯಾಸ.
2 ಗಂಟೆಗೆ ಮೆ|| ಕೆ.ಬಿ. ಪೊನ್ನಪ್ಪನವರಿಂದ "ಕಿತ್ತಳೆ ಗಿಡಕ್ಕೆ ತಗಲುವ ರೋಗ" ಉಪನ್ಯಾಸ
ಮೆ|| ಕೆ. ಚಂಗಪ್ಪರವರು ಅಧ್ಯಕ್ಷಸ್ಥಾನವನ್ನು ವಹಿಸುವರು.

9-2-1936.
10-30 ಗಂಟೆಗೆ ಕ್ಯಾಪ್ಟನ್. ಆರ್. ಡಿ ಮೆಕ್ರೆ, ಐ ಯಂ.ಎಸ್. ಸಿವಿಲ್ ಸರ್ಜನ್ ರವರ ಅಧ್ಯಕ್ಷಸ್ಥಾನ ವಹಿಸುವರು
ಡಾ. ಎ. ಡಬ್ಲ್ಯು. ಕಾಳೈಯ್ಯನವರಿಂದ "ಆರೋಗ್ಯ" ಉಪನ್ಯಾಸ.
ಮೆ|| ಕೆ. ಟಿ. ಪೆಮ್ಮೈಯ್ಯನವರಿಂದ "ಪ್ರದರ್ಶನಗಳಿಂದ ಆಗುವ ಪ್ರಯೋಜನ" ಉಪನ್ಯಾಸ.
3 ಗಂಟೆಗೆ ಜಿ. ಯಸ್. ಬೋಸ್‌ಮೇನ್, ಕೊಡಗು ಕಮಿಷನರ್ ಸಾಹೇಬರವರು ಅಧ್ಯಕ್ಷಸ್ಥಾನವನ್ನು ವಹಿಸುವರು.
ರಿಪೋರ್ಟು ಓದುವುದು, ಇನಾಮು ಹಂಚುವಿಕೆ ಇತ್ಯಾದಿ.

ಮಿಸೆಸ್. ಬೋಸ್ ಮೇನ್ ರವರು ಬಹುಮೂನಗಳನ್ನು ಹಂಚಲು ದಯವಿಟ್ಟು ಸಮ್ಮತಿಸಿರುತ್ತಾರೆ.

ಎಲ್ಲರಿಗೂ ಆಹ್ವಾನವಿದೆ, ಸರ್ವರೂ ದಯಮಾಡಿಸಿ ಪ್ರೋತ್ಸಾಹಿಸಬೇಕಾಗಿ ಕೋರಲಾಗಿದೆ.

ಯಂ. ಯಂ. ನಂಜುಂಡ,
ಪ್ರೆಸಿಡೆಂಟ್,
ದಕ್ಷಿಣ ಕೊಡಗು ದನಗಳ ಪ್ರದರ್ಶನದ ಕಮಿಟಿ.

ಣಿಕೊಪ್ಪಲು,
-1-1936.

GONICOPPAL CATTLE SHOW.

PROGRAMME.

5-2-1936.
11 A.M- Puja and opening of the Exhibition.
Mr. K.B. Ganapathi, M.L.C. to open.
6-2-1936.
11 A.M- Knitting and Handicrafts section.
Mrs. Bull, to open.
Mrs. P.M. Ganapathi, to Preside.
2 P. M- Horticultural section: Mr. I. Bull, to open.
R.S., P.A. Chengappa, to preside.
3 P.M- Lecture by M.M. Ponnappa, B.A.B.L., On "Women and Home Industries".
7-2-1936.
11 A.M- Poultry show.
2 P. M- Lecture by Mr. A.M. Muthappa, on "Fowls"
K. Chengappa Esq. D.D. of Land records and Agri. to Preside.
8-2-1936.
11-30 A.M- Cattle-show. M.S. Mandanna Esq. Dist. Magistrate, Coorg. to open.
Mr. I. Bull, Pollibetta, to preside
Lecture by Dr. C.B. Somanna, "On Cattle"
2 P.M- Lecture by Mr K. B. Ponnappa, On "diseases in Orange plants"
K. Chengappa Esq. to preside.
9-2-1936.
10-30 A.M- Capt. R.D. MacRae, I.M.S. Civil Surgeon, Coorg. to preside.
Dr. A. W. Kalaya, On "Health"
Mr. K. T Pemmaya, On "Benefits of Exhibition"
3 P. M- G. S. Bozman Esq. I.C.S. Commissioner, Coorg- to preside.

Reading of the report. Prize Distribution, etc.
Mrs. Bozman has kindly consented to give away the prizes.

All are Cordially invited to be present on the Occasion.

M. M. NANJUNDA,
President,
South Coorg Cattle Fair Committ

Gonicoppal.
25-1-1936.

Sri Laxmi Vilas Press, Gonicopal.

ಪಳೆದೆ.

ವೊನ್ನಂಪೇಟೆನಾಡು ಹುಡೂರು ಗ್ರಾನುದ ಮೆ. ಹೊ ೀಂಗಳ ಬೋಪಯ್ಯನವರು ಈ ತಾ. 21 ರಲ್ಲಿ ಶಿವಾಧೀನರಾ ೦ದು ತಿಳಿಯುತ್ತೇವೆ.

ಕೊಡಗು ಜವಿೂನರ್ಸ್‌ರರ ಸಂಘದ ಕಾರ್ಯಕಾರಿ ಮುಂ ಶಿಯ ವಿೂಟಿಂಗು ಫೆಬ್ರವರಿ ತಾ. 9ನೇ ಆದಿತ್ಯವಾರ ಗೋ ಿಕೊಪ್ಪಲಲ್ಲಿ ನಡೆಯಲಿಕ್ಕಿದೆ.

ಈ ತಾ. 26ರಲ್ಲಿ ರಾಷ್ಟ್ರೀಯ ಧ್ವಜಾರೋಹಣ ವೆ ೀ ಾದುವುಗಳಿಂದ 'ಗಣ್ರತಂತ್ರ್ಯ ದಿನ'ವೂ ಕೊಡಗಿನ ಕೆಲವು ಾಗಗಳಲ್ಲಿ ಆಚರಿಸಲ್ಪಟ್ಟಿತು.

ಬರುವ ಸ್ಕೂಲ್ ಫೈನಲ್ ಪರೀಕ್ಷೆಗೆ ಕೂರಲು ವೀರಾ ಪೇಟೆ ಹೈಸ್ಕೂಲಿನಿಂದ 32 ವಿದಾರ್ಥಿ ಗಳ ಪೈಕಿ 25 ನುದಿ ರಿಸಲ್ಪಟ್ಟಿರುವರೆಂದು ತಿಳಿ ುತ್ತೇನೆ.

ವೀರರಾಜೇಂದ್ರಪೇಟೆ ಹೈಸ್ಕೂಲಿನ ವಾರ್ಷಿಕೋತ್ಸವವು ಬ್ರುವರಿ ತಾ. 1 ರಲ್ಲಿ ನಡೆಯುವುದು. ಕಮಿಷನರಾದ ಮೆ. ಾಸ್‌ವ್ಯೂನರ್ ಅಧ್ಯಕ್ಷಸ್ಥಾನ ನ್ನು ವಹಿಸುವರು.

ಐದನೇ ಜಾರ್ಜ್ ಪ್ರಭುಗಳ ಸ್ಮರಣಕ್ಕೆ ಸಂತಾಪವನ್ನು ಸೂಚಿಸಲು ಕೊಡಗಿನವರ ಪಬ್ಲಿಕ್ ವಿೂಟಿಂಗೊಂದು ಈ ತಾ 5ರಲ್ಲಿ ಮಡಿಕೇರಿ ಕೌನ್ಸಿಲ್ ಹಾಲ್‌ನಲ್ಲಿ ನಡೆಯಿತು.

ಈ ವಾರ ಮಡಿಕೇರಿ ರಾಜಾಸೀಟಿನ ಬಳಿ ಒಬ್ಬ ಹುಡು ಗಿಗೆ ಪ್ಲೇಗು ಅಂಟಿದೆಯೆಂದೂ, ಕಳೆದ ವಾರ ಫ್ರೇಜರ್‌ಪೇಟೆ ಯಲ್ಲಿ ಒಬ್ಬರಿಗೆ ಹೊಸದಾಗಿ ಪ್ಲೇಗು ತಗಲಿದೆಯೆಂದೂ ತಿಳಿ ುಬರುತ್ತದೆ.

ಕಳೆದ ವಾರ ನಡೆದ ಮಡಿಕೇರಿ ಕಾಸ್ಮೊಪಾಲಿಟ ನ್ ಕ್ಲಬ್ಬಿನ 'ಬ್ರಿಡ್ಜ್' ಟೂರ್ನಮೆಂಟಿನಲ್ಲಿ ಮೆ. ಕಾಯಪಂಡ ನೇ ಮಯ್ಯನವರು ಮತ್ತು ಕೆ. ರಂಗಪೈಯವರು ಜಯಶೀಲರಾ ದರೆಂದು ತಿಳಿಯುತ್ತೇವೆ.

ಈ ತಾ. 21 ರಲ್ಲಿ ನಡೆಯಬೇಕಾಗಿದ್ದ ಮಡಿಕೇರಿ ಮು ನ್ಸಿಪಲ್ ಕಮಿಟಿ ವಿೂಟಿಂಗಿನಲ್ಲಿ ಜಾರ್ಜ್ ಚಕ್ರವರ್ತಿಗಳ ಮ ರಣಕ್ಕೆ ವ್ಯಸನ ಸೂಚಕ ತರಾವನ್ನು ಪಾಸುಮಾಡಿ, ವಿೂಟಿಂಗು ಮುಂದಕ್ಕೆಡಲಾಯಿತು.

ಜಾರ್ಜ್ ಚಕ್ರವರ್ತಿಗಳ ಶವ ದಫನ ಸಂಸ್ಕಾ ವು ಈ ತಾ. 28ರಲ್ಲಿ ಲಂಡನ್ನಿನಲ್ಲಿ ನಡಿಸಲ್ಪಟ್ಟಿತ. ಈ ಸಂಬಂಧ ೪ ದಿನ ಕೊಡಗಿನ ಹಲವು ಕಡೆಗಳಲ್ಲಿ ಮೌನವಣಾಗೆಗಳೂ, ಪ್ರಾರ್ಥನೆಗಳೂ ನಡಿಸಲ್ಪಟ್ಟವು.

ಹೊಸ ರಾಜರಾದ ಎಂಟನೇ ಎಡ್ವರ್ಡರವರು ಸಿಂಹಾಸ ನಕ್ಕೇರಿದ ಜಾಹೀರ್‌ನಾಮೆಯನ್ನು ಕಮಿಷನರವರು ಈ ತಾ. 25 ರ ಸಾಯಂಕಾಲ 5 ಗಂಟೆಗೆ ಮಡಿಕೇರಿ ಅರಮನೆ ಮುಂ ಿ ಸೇರಿದ್ದ ಸಾರ್ವಜನಿಕ ಸಭೆ ಯಲ್ಲಿ ಓದಿ ಹೇಳಿದರು.

ಬೆಂಗಳೂರಿನಲ್ಲಿರುವ 'ಇಂಡಿಯನ್ ಇನ್‌ಸ್ಟಿಟ್ಯೂಟ್ ಆ ಫ್ ಸ ನ್ಸ್' ಎಂಬ ವಿಜ್ಞಾನ ಸಂಶೋಧನಾ ಶಾಲೆಯು ಉ ದ್ದೇಶವು ಎಷ್ಟರ ಮಟ್ಟಿಗೆ ಕೈಗೂಡಿದೆ, ಅದರ ಅಭಿವೃದ್ಧಿಯ ನ್ನು ಸಾಧಿಸುವುದು ಹೇಗೆ ಎಂಬುದನ್ನು ಪರಿಶೀಲಿಸಲು ಇಂಡಿ ಯ ಸರ್ಕಾರದವರು ಒಂದು ಕಮಿಟಿಯನ್ನು ನಿರ್ಮಿಸಿರು ವರು. ಕೊಡಗು ಮತ್ತು ಬೆಂಗಳೂರು ಕಂಟೋನ್ಮೆಂಟಿನ ಶಾಲಾ ಇನ್ಸ್‌ಪೆಕ್ಟರಾದ ವೆ ಎಫ್. ಎಫ್. ಸಿ. ಎಡ್ಮಂಡ್ಸ್ ರವರು ಆ ಕಮಿಟಿ ಯ ಸೆಕ್ರೆಟರಿಯೂಗಿ ನೇಮಿಸಲ್ಪಟ್ಟಿರುವುದಕ್ಕಾ ಗಿ ವರ್ತಮಾನ

ಭಾಗಮಂಡ್ಲದಲ್ಲಿ ಭೂಕಂಪ
ಮನೆ ಸಾಮಾನುಗಳು ಅಲ್ಲಾಡಿದವು!

ಈ ತಾ. 27ನೇ ಸೋಮವಾರ ಭಾಗಮಂಡ್ಲದಲ್ಲಿ ಮೂ ರು ಸಾರಿ ಭೂಮಿ ನಡುಗಿತು. ಪ್ರಥಮವಾಗಿ ಬೆಳಿಗ್ಗೆ 11-30 ಗಂಟೆಗೆ ಒಂದು ಸ್ವಲ್ಪ ಸಮಯ ಮಾತ್ರ. ಎರಡನೇ ಸಾರಿ ಮಧ್ಯಾಹ್ನ 12 ಗಂಟೆಗೆ ಮೊದಲನ್ನಷಕ್ಕಿಂತ ಜೋರಾಗಿ ಉಂಟಾದ ಕಂಪನದಿಂದ ಕಿಟಿಕಿ ಬಾಗಿಲುಗಳು, ಮನೆಯ ಸಾ ಮಾನುಗಳು, ಮಾಡಿನ ಹಂಚು ವಗೈರುಗಳು ಅಲ್ಲಾಡಿದವು ಪುನಹ ರಾತ್ರಿ 8 ಗಂಟೆಗೆ ಭೂಮಿಯು ಸ್ವಲ್ಪ ನಡುಗಿತು. ಕಾ ರಣವು ಪಶ್ಚಿಮದಿಂದ ಈಶಾನ್ಯ ದಿಕ್ಕಿನ ಕಡೆ ಚಲಿಸಿದಂತೆ ತೋರಿ ತು ಎಂದು ತಿಳಿಯಬರುತ್ತದೆ.

ಹಿಂದೂದೇಶ.

ಮಧುರ ಜಿಲ್ಲೆಯ ತಿರುವಲ್ಲೆ ನಲ್ಲೂರಿನಲ್ಲಿ ಕೋಳಿ ಕಾ ಳಗ ನಡಿಸುತ್ತಿದ್ದ 17 ಜನರನ್ನೂ, 25 ಹೂಂಜಗಳನ್ನೂ 'ಗೇ ಮಿಂಗ್ ಆಕ್ಟ್'ನ ಮೇರೆ ಪೊಲೀಸಿನವರು ದಸ್ತಗಿರಿ ಮಾಡಿರು ವರು.

ಮಹಾತ್ಮ ಗಾಂಧಿಯವರ ಆರೋಗ್ಯವು ಅಭಿವೃದ್ಧಿಯ ಗುತ್ತಾ ಇದೆ. ಮಹಾತ್ಮರು 3 ತಿಂಗಳ ಪರ್ಯಂತ ವಿಶ್ರಾಂ ತಿ ತೆಗೆದುಕೊಳ್ಳಬೇಕೆಂದು ಡಾಕ್ಟರ್‌ಗಳು ಹೇಳಿರುವುದರಿಂದ ಅವರು ಲಕ್ನೌ ಕಾಂಗ್ರೆಸಿಗೆ ಹೋಗಲಾರರು ಎಂದು ಬೊಂ ಬಾಯಿ ಪತ್ರಿಕೆಗಳ ವಾರ್ತೆಯು ನಿಜವಲ್ಲವೆಂದು ಸರ್ದಾರ್ ಪ ಟೇಲರವರು ಹೇಳಿರುವರು.

ಲಾಹೋರಿನಲ್ಲಿ ನಡೆಯುತ್ತಿರುವ ಸಿಖ್ಖರ ಕೃಪಾಣ ಸ ತ್ಯಾಗ್ರಹದಲ್ಲಿ ಸ್ತ್ರೀಯರೂ ಭಾಗವಹಿಸಲು ಪ್ರಾರಂಭಿಸಿರುವ ರು. ಈ ತಾ. 27 ರಲ್ಲಿ ಆರು ಮಂದಿ ಮಹಿಳೆಯರ ಕೃಪಾ ಣ ಧರಿಸಿಕೊಂಡು ಲಾಹೋರಿನ ಮುನ್ಸಿಪಾಲಿಟಿಯೊಳಗೆ ಒಂ ದಾಗ್ಯೆ ಅವರು ದಸ್ತಗಿರಿ ಮಾಡಲ್ಪಟ್ಟು, ಅವರಿಗೆ ಕೋರ್ಟು ಏಳುವ ವರೆಗೆ ಸಜೆ ಮಾಡಲಾಯಿತು. ಆ ದಿನ ಈ ಸಮ್ಮಂ ಧ ಒಟ್ಟು 160 ಜನರು ಕೈದು ಮಾಡಲ್ಪಟ್ಟರು.

ವಿದೇಶ.

ಉತ್ತರ ಚೈನಾದಿಂದ 30,000 'ಕಮ್ಯುನಿಸ್ಟ್' ಸೈನ್ಯದ ವರು ಹನಾನ್ ಪ್ರಾಂತ್ಯದಿಂದ ದಕ್ಷಿಣ ಚೈನಾದ ಪಶ್ಚಿಮಕ್ಕೆ ಧಾಳಿ ನಡಿಸುತ್ತಾ ಹೋಗುತ್ತಿರುವರು. ಇವರ ಮುಂದೆ ಚಿ ನೂ ನಿಲ್ಲುವಂತಿಲ್ಲ. ಮೆಗನ್ ಪಟ್ಟಣವನ್ನು ಸ್ವಾಧೀನಪಡಿಸಿ ಕೊಂಡಿರುವರು. ಪ್ರಾಂತೀಕ ಸರ್ಕಾರದವರು ತಮ್ಮ ಸೈನ್ಯ ಗಳನ್ನು ಸಂಗ್ರಹಿಸುತ್ತಿರುವರು.

ಜರ್ಮನಿಯ ಸರ್ವಾಧಿಕಾರಿಯೂದ ಹಿಟ್ಲರನು ಒಂದು ಭಾಷಣದಲ್ಲಿ ಹೀಗೆಂದಿರುವರು—'ನಡೆಯುವುದನ್ನು ಕಲಿಸಿಕೊ ಡಬೇಕೆಂದು ಹಿಂದೀಯರು ಇಂಗ್ಲೆಂಡಿಗೆ ಹೋಗಿ ಬೇಡಿಕೊ ಳ್ಳಲಿಲ್ಲ, ಆದರೆ ಇಂಗ್ಲಿಷರು ಹಿಂದೀಯರಿಗೆ ನಡೆಯುವುದನ್ನು ಕಲಿಸಲು ಇಂಡಿಯಾಕ್ಕೆ ಹೋದರು. ಯಾಕಂದರೆ ಬಿಳೀ ಜ ನಾಂಗವು ಜೀವನದ ತಮ್ಮ ಶೌರ್ಯದ ಭಾವನೆಯಿಂದ ಬೇರೆ ಯವನ್ನು ಆಳಲು ಹುಟ್ಟಿದ್ದಾರೆ. ಒಂದು ಶತಮಾನದ ವರೆ ಗೆ ಗುಲಾಟೆ ಇದ್ದರೂ ನಂತರ ಇಂಗ್ಲಿಷರು ಹಿಂದೀಯರಿಗೆ ನ ಡೆಯಲು ಕಲಿಸಿದರು. ಕಪ್ಪು ಜನರನ್ನು ನಾಗರೀಕರನ್ನಾಗಿ ಮಾಡ ತ್ತೇವೆ; ಅವರಿಗೆ ಸ್ವರಾಜ್ಯ ನಡಿಸಲು ಕಲಿಸಿಕೊಡು ತ್ತೇವೆಂಬ ಉದಾತ್ತಭಾವದ ಧ್ಯೇಯವನ್ನು ಇಟ್ಟುಕೊಂಡರೆ ಕ ಪ್ಪು ಜನರು ಜೀವಿಸುವುದನ್ನು ಅಲ್ಲಿಂದು ಹೋಗುವುದು ನಿಜ.'

ಯುದ್ಧ ವಾರ್ತೆ.

ಜನವರಿ ತಾರೀಕು 23.
ಭೀಕರ ಕಾಳಗ.

ಉತ್ತರಣಾಂಗಣದಲ್ಲಿ ಇಟಲಿಯ ಸೈನ್ಯಕ್ಕಾಗಿ ಅಬಿ ಸೀನಿಯ ಸೈನ್ಯಕ್ಕಾಗಿ ಘೋರ ಯುದ್ಧವಾಗಿ ಸಹಸ್ರಾರು ಮಂದಿ ಇಟಲಿಯವರು ಮೃತಪಟ್ಟರು. ಇಟಲಿಯವರು ಮೆಶಿನ್ ಗನ್ಸ್, ಬೈನೆಟುಗಳಿಂದಲೂ, ವೈಲಿನಿಂದ ಬಾಂಬಿನ ಸುರಿಮಳೆಗಳಿಂದಲೂ ಅಬಿಸೀನಿಯಾ ಸೈನಿಕರನ್ನು ಧ್ವಂಸಗೈ ಯ್ಯಲೆತ್ನಿಸಿದರೂ ಕೂಡ ಕೊನೆಗೆ ತಾವೆ ಧ್ವಂಸಗೈಂಡರು.

ಹದಿಮೂರು ವಿಮಾನಗಳ ಧ್ವಂಸ.

ಯುದ್ಧಾರಂಭವಾಗಿ ಈ ವರೆಗೆ ಒಟ್ಟಾರೆ 13 ಇಟಲಿ ವಿ ಮಾನಗಳನ್ನು ಅಬಿಸೀನಿಯರು ಕೆಳಕ್ಕುರುಳಿಸಿರವರು. ಕಳೆ ದ ವಾರ ಬಾದರಲ್ಲೇ 3 ವಿಮಾನಗಳನ್ನು ಕೆಳಕ್ಕುರುಳಿಸಿರುವ ರು. ಗುಂಡಿನೇಟಿನಿಂದ ಬಲವಾಗಿ ಪೆಟ್ಟು ಬಿದ್ದು ಹೇಗೋ ತಪ್ಪಿಸಿಕೊಂಡು ಹೋದ ವಿಮಾನಗಳ ಸಂಖ್ಯೆ ತಿಳಿದಿರುವುದಿಲ್ಲ.

ಮೂವರೂ ಜೊತೆ ಸೇರಿದರು.

ಅಬಿಸೀನಿಯಾ ಸೇನಾ ನಾಯಕರಾದ ರಾಸ್ ಸುಮೂ ಲ್, ರಾಸ್ ಇಮ್ರು ಮತ್ತು ರಾಸ್ ಡೆಸ್ಟಾಸ್‌ಮೇಡ್ ಅ ವರೆಲ್ಲರು ಈ ಮೂವರು ತಮ್ಮ ತಮ್ಮ ಸೈನ್ಯಗಳೊಡನೆ ಈ ಮಹಾ ಕಾಳಗದಲ್ಲಿ ಭಾಗವಹಿಸಲು ಬಂದಿಗೂಡಿರುವರು. ರಾತ್ರಿ ಹಗಲೆನ್ನದೆ ಕದನವು ನಡೆಯುತ್ತಲೇ ಇವೆ ಇಟಲಿಯ ವರಿಗೇನೇ ನಷ್ಟ ಹೆಚ್ಚು.

ಜನವರಿ ತಾರೀಕು 24.
ಮಳೆಲ್ ಬಳಿಯ ಯುದ್ಧ.

ಎರಡು ದಿನಗಳಿಂದ ಯುದ್ಧವು ಒಂದೇ ಸವನೆ ಜಾರಿ ಯಲ್ಲಿದೆ. ಈ ವರೆಗೆ 1700 ಇಟಲಿಯವರು ಹತರಾಗಿರುವರು. ಅಲ್ಲದೆ ಆಸ್ಟ್ರಿಯಾ ದೇಶದಿಂದ ಇಟಲಿ ಸೈನ್ಯಕ್ಕೆ ಸೇರಿದ 800 ಮಂದಿ ಸೈನಿಕರು ಅಬಿಸೀನಿಯರ ಮರೆ ಹೊಕ್ಕಿರುವಂತೆ

ಅಬಿಸೀನಿಯದಲ್ಲಿ ಸಾರ್ವತ್ರಿಕ ಸೇನಾ ಸಂಗ್ರಹ.

ಯುದ್ಧವು ಏಕಪ್ರಕಾರವಾಗಿ ಅನೇಕೆಡೆಗಳಲ್ಲಿ ಸಾಗು ತ್ತಲಿರುವುದರಿಂದ ಸೇನಾ ಸಂಗ್ರಹವು ತುರಿತದಿಂದ ಸಾಗುತ್ತ ಲಿದೆ. ರಾಜಧಾನಿಯಿಂದ 20,000 ಹೆಚ್ಚಿಗೆ ಸೈನ್ಯವು ರಣ ರಂಗಕ್ಕೆ ಹೊರಟಿತು.

ಮಳೆ.

ಕಳೆದ 24 ತಾಸುಗಳಿಂದ ಅಬಿಸೀನಿಯಾದ ಹಲವು ಕಡೆ ಗಳಲ್ಲಿ ಬಲವಾಗಿ ಮಳೆ ಸುರಿಯುತ್ತಲಿದೆ. ದೈವ ಸಾಹಾಯ.

ಡ್ಯೂಕ್ ಆಫ್ ಹರಾರ್.

ಅಬಿಸೀನಿಯಾ ಚಕ್ರವರ್ತಿಯವರ 13 ವಯಸ್ಸಿನ ಕುಮಾ ರರೇ ಡ್ಯೂಕ್ ಆಫ್ ಹರಾರ್. ಇವರಿಗೆ ಈಗ 10 ಸಾವಿರ ದಳದ ನಾಯಕತ್ವವುಕೊಡಲಾಗಿದೆ. ಬರೇ ಯುವಕ ವರ್ಗ ದಿಂದ ಆರಿಸಲ್ಪಟ್ಟ ಈ ದಳವು ಬಹಳ ಉತ್ತಮ ಸೈನ್ಯವಾಗಿದೆ. ಈ ರಾಜಕುಮಾರರು ಚಕ್ರವರ್ತಿಗಳೊಡನೆ ಡೆಸ್ಸಿಯಲ್ಲಿದ್ದರು, ಆಗ್ಗೆ ಚಕ್ರವರ್ತಿಗಳು ಅವರಿಗೆ ಒಂದು ಮೆಶಿನ್ ಗನ್ನನ್ನು ಬ ಹುಮಾನವಾಗಿ ಕೊಟ್ಟಿರುವರು. ಹಾಗೂ ಈ ನಾಯಕರು ಶೀಘ್ರದಲ್ಲೇ ರಣರಂಗಕ್ಕೆ ತೆರಳುವವರಿರುವರು.

ಜನವರಿ ತಾರೀಕು 26.
ಇಷ್ಟರ ವರೆಗೆ ಆಗದ ಯುದ್ಧ.
ನಾಲ್ಕು ದಿನಗಳಿಂದ ಸಾಗುತ್ತಲಿದೆ.

ಮಳೆಲ್ ಪ್ರಾಂತದ ಒಳಿಯ ಯುದ್ಧವು ಮುಗಿದಿರುವ ದಿಲ್ಲ. ಇಟಲಿಯ ಸೈನ್ಯವು ಅಬಿಸೀನಿಯಾ ಸೈನ್ಯಕ್ಕಿಂತ ಹೆ ಚ್ಚಿದೆ. ಆದರೆ ನಷ್ಟವು ಈ ವರೆಗೆ ಅವರಿಗೇ ಹೆಚ್ಚು. ಅಬಿ ಸೀನಿಯಾ ಸೇನೆಗೆ ಹೆಚ್ಚಿನ ಸೈನ್ಯಗಳು ನಾನಾ ಕಡೆಗಳಿಂದ ಬ ರುತ್ತಲಿವೆ. ಈ ವರೆಗೆ 10 ದೊಡ್ಡ ಪಿರಂಗಿಗಳೂ ಮತ್ತು 100 ಮೆ ಶಿನ್‌ಗನ್ನುಗಳೂ ಅಬಿಸೀನಿಯರ ಕೈವಶವಾಗಿವೆ. ಅಬಿಸೀ ನಿಯರ ಜಯವು ಇಟಲಿಯವರಿಂದಲೇ ಒಪ್ಪಲಾಗಿದೆ.

ಬಾಂಬಿನ ಧಾಳಿ.

ಕೆಲವು ವಾರಗಳಿಂದೀಚೆಗೆ ಇಟಲಿ ವಿಮಾನಗಳಿಂದ ಒಟ್ಟು 12 ಬಾಂಬಿನ ಧಾಳಿಗಳಾಗಿವೆಯೆಂದೂ 500ಕ್ಕೆ ಮೇಲ್ಪಟ್ಟು ಪಟ್ಟಣವಾಸಿಗಳು ಮೃತರಾಗಿರುವರೆಂದೂ ಏನೊಂದೂ ವಿಚಾರ ವಿವೇಕವಿಲ್ಲದೆ ಸಕಲ ಸಂಸ್ಥೆಗಳ ಮೇಲೂ, ನಿರಪರಾಧಿಗಳಾ ದ ಗ್ರಾಮವಾಸಿಗಳ ಮೇಲೂ ಬಾಂಬಿನ ಮಳೆಗರೆಯುತ್ತಲಿರು ವುದೆಂದು ಅಬಿಸೀನಿಯೂದ ಪ್ರಕಟಣೆ

ಜನವರಿ ತಾರೀಕು 28.
ಇಟಲಿಯವರ ಅತ್ಯಾಚಾರ.

ಇಟಲಿಯವರು ತಮ್ಮ ಕೈಯಿಂದ ಬಿಟ್ಟು ಹೋದ ಸ್ಥಳ ಗಳನ್ನು ಹಿಂತಿರುಗಿ ಪಡೆಯಲು ವಿಷಗಾಳಿಯನ್ನು ಮನಬಂದು ತೆ ಉಪಯೋಗಿಸಿ ಗ್ರಾಮವಾಸಿಗಳನ್ನು ಸಹ ನಿರ್ಮೂಲನಗೊ ಡುತ್ತಿರುವರಲ್ಲಿದೆ. ಸಿಕ್ಕಿದವರನ್ನೆಲ್ಲ ಕೊಲ್ಲುತ್ತಿರುವರೆಂದು ತಿಳಿಯಲಾಗಿದೆ

ವಿನೂನ ಧಾಳಿಯೇ ಅವರಿಂದ ಸಾಧ್ಯ.

ಇಟಲಿಯವರಿಗೆ ಅಬಿಸೀನಿಯವರನ್ನು ಭೂಮಿಯಲ್ಲಿ ನಿಂ ರು ಎದುರಿಸಲು ಸಾಧ್ಯವಿಲ್ಲದಾಗಿರುವದರಿಂದಲೇ ಅವರು ಸಿ ಕ್ಕಾಒಟ್ಟೆ ವಿನೂನಗಳಿಂದ ಧಾಳಿಗೈಯ್ಯುತ್ತಿರುವರು ಅದಾ ಗ್ಯೂ ಕೂಡ ಅಬಿಸೀನಿಯರ ಗುಂಡಿನೇಟಿಗೆ ಒಳಪಡುತ್ತಲಿರು ವರು.

ಸೋಮಾಲಿ ಎಲ್ಲೆ ಕಟ್ಟಿನಲ್ಲಿ.

ಸೋಮಾಲಿ ಎಲ್ಲೆಕಟ್ಟಿನಲ್ಲಿ ರಾಸ್ ಡೆಸ್ಟಾರನವರ ಸೈ ನ್ಯಕ್ಕೂ ಇಟಲಿ ಸೈನ್ಯಕ್ಕೂ ಕದನವಾಗುವ ಸಂಭವವಿದೆಯೆಂ ಾ ತಿಳಿದು ಬರುತ್ತದೆ. ಮಳೆಲ್ ಬಳಿಯ ಘೋರ ಯುದ್ಧ ದ ಸುದ್ದಿ ಇನ್ನೂ ತಿಳಿದು ಬಂದಿರುವದಿಲ್ಲ.

ಕೊಡಗಿನಲ್ಲಿ ಜಾರ್ಜ್ ಪ್ರಭುಗಳ ನಿಧನದ ಬಗೆ ಸಂತಾಪ ಸೂಚನೆ.

ಕೊಡಗು ಕವಿ ಷನರವರು ಜಾಹೀರುಪಡಿಸಿದ ಪ್ರಕಾರ ಈ ತಾ. 25 ನೇ ಶನಿವಾರ ಮಡಿಕೇರಿಯಲ್ಲಿ, ಸ್ವರ್ಗವಾಸಿಗ ಳಾದ ಐವನೆ ಜಾರ್ಜ್ ಚಕ್ರವರ್ತಿಗಳ ನಿಧನಕ್ಕಾಗಿ ಸಂತಾಪ ಸೂಚಿಸಲು ಒಂದು ಸಾರ್ವಜನಿಕ ಸಭೆ 5-30 ಕ್ಕೆ ಕೌನ್ಸಿಲ್ ಹಾಲ್‌ನಲ್ಲಿ ಸೇರಿತ್ತು. ಅಲ್ಲಿ ಈ ಕೆಳಗೆ ಕಾಣಿಸಿದ ತರಾವು ಗಳು ವಿರೋಧವಿಲ್ಲದೆ ಪಾಸಾದವು:—

1. 'ತನ್ನ ಪ್ರಜೆಗಳ ಮೇಲಿನ ಸಹಾನುಭೂತಿ ಮತ್ತು ಕಾ ರ್ಯನಿರ್ವಹಣದಿಂದಲೂ ಪ್ರತಿಯೊಬ್ಬನ ಭಕ್ತಿಪ್ರೀತಿಗಳನ್ನು ಸಂಪಾದಿಸಿದ ನಮ್ಮ ಪೂಜ್ಯ ಸಾರ್ವಭೌಮರಾದ ಇಂಡಿಯಾ ಚಕ್ರವರ್ತಿ ಮಹಾಪ್ರಭು ಐದನೆಯ ಜಾರ್ಜ್ ಪ್ರಭುಗಳು ನಿ ಧನರಾದುದಕ್ಕಾಗಿ ಕೊಡಗಿನ ಎಲ್ಲಾ ವರ್ಣಗಳ ಪ್ರತಿನಿಧಿಗ ಳಾದ ನಾವು ನಮ್ಮ ಅಗಾಧವಾದ ವ್ಯಸನವನ್ನು ವ್ಯಕ್ತಪಡಿ ಸುತ್ತೇವೆ.'

2 ಸ್ಥಳೀಯ ಸರಕಾರದ ಮುಖಾಂತರ ಅಲೋಚನಾ ಸಭೆಯೊಳಗಣ ಗವರ್ನರ್ ಜನರಲ್ ಮತ್ತು ವೈಸರಾಯ ರವರಿಗೆ ಈ ಕೆಳಗೆ ಕಂಡು ಬರುವ ತುರೀ ವಾರ್ತೆಯನ್ನು ಕಳುಹಿ ಸುವಂತೆ ಈ ಸಭೆಯು ನಿಶ್ಚಯಿಸಿದೆ.

'ಕೊಡಗು ದೇಶದ ನಿವಾಸಿಗಳು ಮಹಾರಾಜ್ಞೀ ಮೇರಿ ಯವರಿಗೂ, ಇಂಡಿಯಾ ಚಕ್ರವರ್ತಿಯವರಾದ ಮಹಾಪ್ರಭು ಎಂಟನೆಯ ಎಡ್ವರ್ಡ್ ಪ್ರಭುಗಳಿಗೂ ಉಂಟಾಗಿರುವ ವಿಯೋ ಗ ದುಃಖದ ಈ ಸಮಯದಲ್ಲಿ ತಮ್ಮ ಭಕ್ತಿ ಪುರಸ್ಸರವಾದ ಸ ಹಾನುಭೂತಿಯನ್ನು ತೋರಿಸುವರು. ಎಲ್ಲಾ ವರ್ಣದವರೂ ಅವರ ದುಃಖದಲ್ಲಿ ಸಹಭಾಗಿಗಳಾಗಿ ಅವರ ಅಂತರ್ಗತವಾದ ಸಹಾನುಭೂತಿಯಿಂದಲೂ ಮತ್ತು ರಾಜಭಕ್ತಿಯಿಂದಲೂ ನಡೆ ದುಕೊಳ್ಳುವರೆಂದು ಭರವಸೆ ಕೊಡುವರು.'

ಹೊಸ ಚಕ್ರವರ್ತಿಯವರ ಸಿಂಹಾಸನಾ ರೋಹಣದ ಬಗ್ಗೆ ಜಾಹೀರುನಾಮೆ.

ಹೊಸ ಚಕ್ರವರ್ತಿಗಳಾದ ಎಂಟನೇ ಎಡ್ವರ್ಡ್ ಪ್ರಭು ಗ ಳು ಸಿಂಹಾಸನಾರೋಹಣ ಮಾಡುವ ವಿಷಯದ ಜಾಹೀರು ನಾಮೆಯನ್ನು ಕವಿ ಷನರವರು ಮಡಿಕೇರಿ ಅರಮನೆಯ ಮುರಿನ ಲ್ಲಿ ಓದುವರೆಂಬ ಪ್ರಸಿದ್ಧಿ ಪತ್ರಗಳು ಈ ಮೊದಲೇ ಕಮಿಷನ ರವರಿಂದ ಜಾಹೀರುಮಾಡಲ್ಪಟ್ಟಂತೆ ಈ ತಾ. 25 ನೇ ಶನಿವಾ ರ ಸಾಯಂಕಾಲ 5 ಗಂಟೆಗೆ ಮಡಿಕೇರಿ ಅರಮನೆ ಮುಂದುಗ ಡೆ ಈ ಕೆಳಗೆ ಕಾಣಿಸಿದ ಜಾಹೀರುನಾಮೆಯು ಓದಲ್ಪಟ್ಟಿ ತು. ಕೊಡಗಿನ ಅನೇಕೆಡೆಗಳಿಂದ ಹಲವರು ಬಂದು ನೆರೆದಿ ದ್ದರು.

'ಸರ್ವಶಕ್ತನಾದ ಪರಮಾತ್ಮನು ವಂಗಳಾತ್ಮರೂ ತೇ ಜೋವಿಶಾಲರೂ ಆದ ನಮ್ಮ ಹಿಂದಿನ ಸಾರ್ವಭೌಮ ಏವನೆ ಯ ಜಾರ್ಜ್ ಪ್ರಭುಗಳನ್ನು ತನ್ನ ದಿವ್ಯ ಚಿತ್ತದಲ್ಲಿ ಸೇರಿಸಿ ಕೊಂಡುದರಿಂದ ಅವರ ನಿಧನದ ಕಾರಣವಾಗಿ ಗ್ರೇಟ್‌ಬ್ರಿಟ ನ್, ಐರ್‌ಲೆಂಡ್ ಮತ್ತು ಹಿಂದಿನ ಸಾರ್ವಭೌಮರ ಇತರ ಪ್ರಾಂತಗಳ ಸಾಮ್ರಾಜ್ಯ ಮಕುಟವು ಸನ್ಮಾನ್ಯರೂ, ಸಶಕ್ತ ರೂ ಆದ ಪ್ರಭು ಎಡ್ವರ್ಡ್ ಆಲ್ಬರ್ಟ್ ಕ್ರಿಶ್ಚಿಯನ್ ಜಾರ್ಜ್ ಆಂಡ್ರೂ ಪ್ಯಾಟ್ರಿಕ್ ಡೇವಿಡ್ ಇವರಿಗೆ ನ್ಯಾಯವಾಗಿ ಕಾರಣ ತವಾಗಿರುವುದರಿಂದ ಇಂಡಿಯಾದ ಗವರ್ನರ್ ಜನರಲ್‌ರವರೂ ಮತ್ತು ಗವರ್ನರ್ ಜನರಲ್‌ರವರ ಅಲೋಚನಾ ಸಭೆಯ ಸದಸ್ಯ ರೂ ಆದ ನಾವು, ಏಕೋಭಾವದಿಂದಲೂ, ವಾಚಾಮನಸಾ ಒಪ್ಪಿಗೆಯಿಂದಲೂ, ಸನ್ಮಾನ್ಯರೂ ಸಶಕ್ತರೂ ಆದ ಪ್ರಭು ಎ

ವ್ಡ್ ಆಲ್ಬರ್ಟ್ ಕ್ರಿಶ್ಚಿಯನ್ ಜಾರ್ಜ್ ಆಂಡ್ರೂ ಪ್ಯಾಟ್ರಿಕ್ ಡೇವಿಡ್ ಇವರು ಚಿರಸ್ಮರಣೀಯರಾದ ನಮ್ಮ ಹಿಂದಿನ ಸಾರ್ವಭೌಮರು ದಿವಂಗತರಾದುದರಿಂದ ಇಂದು ಭಗವದನುಗ್ರಹದಿಂದ, ಗ್ರೇಟ್ ಬ್ರಿಟನ್ ಮತ್ತು ಐರ್ಲೆಂಡ್ ಮತ್ತು ಅ ವಿಮುದ್ರಾಂಕ ಬ್ರಿಟಿಷ್ ಸಾಮ್ರಾಜ್ಯಗಳ ಮಹಾರಾಜರೂ, ಧರ್ಮ ರಿಂರಕ್ಷಕರೂ, ಇಂಡಿಯಾ ಚಕ್ರವರ್ತಿಗಳೂ ಆದ, ನಮ್ಮ ನ್ಯಾ ಯವಾದ ಮತ್ತು ಏಕವಚಿತ್ರ ಪ್ರಭು ಎಂಟನೆಯ ಎಡ್ವರ್ಡ್ ಮಹಾಪ್ರಭುಗಳು ಆಗಿರುವರೆಂದು ಪ್ರಕಟಿಸಿ ಜಾಹೀರ್‌ಮಾಡಿ ಅವರಲ್ಲಿ ನಮಗೆ ಸಂಪೂರ್ಣ ನಂಬುಗೆ ಇರುವುದೆಂದು ಒಪ್ಪ ಪದಲ್ಲದೆ, ಮನಃಪೂರ್ವಕವಾದ ವಿಧೇಯತೆಯಿಂದಲೂ, ಏನ ರುವಿಶ್ವಾಸಗಳಿಂದಲೂ, ಯಾವನ ಅನುಗ್ರಹದಿಂದ ರಾಜರೂ ಣಾಯಿಯರೂ ರಾಜ್ಯಭಾರ ಮಾಡುವರೋ, ಆ ಭಗವಂತನು, ಮ್ಮ ಅಪೇಕ್ಷಿತರಾದ ಎಂಟನೆಯ ಎಡ್ವರ್ಡ್ ಪ್ರಭುಗಳನ್ನು, ಚಿರ ಕಾಲ ಸುಖಪ್ರದವಾಗಿ ನಮ್ಮನ್ನು ಆಳುವಂತೆ ಅನುಗ್ರಹಿಸಲೆಂ ದು ಪ್ರಾರ್ಥಿಸುವೆವು.'

ಸಾರ್ವಭೌಮರ ಅಂತಿಮ ಕ್ರಿಯೆ.

ಸಾರ್ವಭೌಮ ಏಳನೇ ಜಾರ್ಜ್ ಪ್ರಭುಗಳ ಅಂತ್ಯ ಸಂಸ್ಕಾರವು ತಾ. 28ಕ್ಕೆ ನಿಶ್ಚಿತವಾಗಿತ್ತು. ಆ ದಿನ ಕೊಡ ಗಿನ ಎಲ್ಲೆಡೆಗಳಲ್ಲೂ ಪ್ರಭುಗಳ ಅಂತಿಮ ಕಾರ್ಯದ ವ್ಯಸನ ಸೂಚಕ ಆಚರಣೆಗಳಾದವು. ಮಡಿಕೇರಿಯಲ್ಲಿ ಆ ದಿನ ಎ ಲ್ಲಾ ಅಂಗಡಿಗಳೂ ಬಂದಾಗಿದ್ದವು ಮಧ್ಯಾಹ್ನದ ಮೇಲೆ ಪುರ ವಾಸಿಗಳೂ ಸುತ್ತಮುತ್ತಲಿನ ಅನೇಕ ಗ್ರಾಮಸ್ಥರೂ ಅಲ್ಲಿ ಎದುರಿನಲ್ಲಿ ನೆರೆದರು. ಅಲ್ಲಿ 4 ಗಂಟೆಗೆ ಸೈಂಟ್ ಮಾರ್ಕ್ಸ್ ಚರ್ಚಿನಲ್ಲಿ ಪ್ರಾರ್ಥನೆಯಾಯಿತು. ವೆ. ವಿ. ಸಿ. ಸುಬ್ಬಯ್ಯ ನವರು ಚಕ್ರವರ್ತಿಗಳ ಜೀವನವನ್ನು ಕುರಿತು ಚಿಕ್ಕ ಭಾಷಣ ವನ್ನು ಮಾಡಿದನಂತರ ಪ್ರಭುಗಳ 70 ವಯಸ್ಸಿಗನುಗುಣವಾಗಿ 70 ಗುಂಡುಗಳು ಹಾರಿಸಲ್ಪಟ್ಟಿತು. ಡಿಸ್ಟ್ರಿಕ್ಟ್ ಮೇಜಿಸ್ಟ್ರೇ ಟರ ಮತ್ತು ಪೊಲೀಸ್ ಸುಪರಿಂಟೆಂಡೆಂಟರ ಮುಂದಾಳುತನ ದಲ್ಲಿ ನೆರೆದವರೆಲ್ಲರೂ ಮೌನವಾಗಿ ರಾಜಾಸೀಟಿಗೆ ತೆರಳಿದರು. ದಾರಿಯುದ್ದಕ್ಕೂ ಪುನಹ 70 ಗುಂಡುಗಳು ಹಾರಿಸಲ್ಪಟ್ಟವು. ಅನಂತರ ರಾಜಾಸೀಟಿನಲ್ಲೂ 70 ಗುಂ ಡುಗಳು ಹಾರಿಸಲ್ಪಟ್ಟವು. ಅನಂತರ ಸಾಯಂಕಾಲ 7 ಗಂ ಟೆಗೆ ಓಂಕಾರೇಶ್ವರ ದೇವಸ್ಥಾನದಲ್ಲಿ ಪೂಜೆಯೂ, ಮನೆಗಳಿ ನಲ್ಲಿ ಪ್ರಾರ್ಥನೆಯೂ ನಡೆಸಲ್ಪಟ್ಟವು.

ಈ ಸಂಬಂಧವಾಗಿ ಸೋಮವಾರಪೇಟೆ, ಕುಶಾಲನಗರ, ನಿವಾರಸಂತೆ, ಫ್ರೇಜರ್‌ಪೇಟೆ, ಸುಂಟಿಕೊಪ್ಪ, ಭಾಗಮಂಡಲ, ಕಾರುಗುಂದ, ನಾಪೋಕ್ಲು, ಕಕ್ಕಬೆ, ಕಡಂಗ, ವೀರಾಜಪೇಟೆ, ಅಮ್ಮತ್ತಿ, ಪೊನ್ನಂಪೇಟೆ, ಹುದಿಕೇರಿ ಮತ್ತು ಶ್ರೀಮಂಗಲ ಮುಂತಾದೆಡೆಗಳಲ್ಲಿಯೂ ಈ ಸಂಸ್ಕಾರ ಸಂಬಂಧ ಕಾರ್ಯಕ್ರಮಗಳಾದವು.

ಕೊಡಗು ಡಿಸ್ಟ್ರಿಕ್ಟ್ ಬೋರ್ಡು ಆಫೀಸು,
ಮಡಿಕೇರಿ, ತಾ 30—1—1936

ನೋಟೀಸ್.

ಉತ್ತರ ಕೊಡಗು ತಾಲೂಕು ಶನಿವಾರಸಂತೆ ಹೋಬ ಳಿ ಇಪ್ಪುಗಲೆ ಮತ್ತು ಕೆಲಕೊಡಲಿ ನದಿಗಳಿಗೂ ಮತ್ತು ದ ಕ್ಷಿಣ ಕೊಡಗು ತಾಲೂಕು ನಾಪೋಕ್ಲು ನಾಡು ಬಲಮುರಿ ನದಿಗೂ ಹೊಸದಾದ ಹೆಬ್ಬಲಸು ಮಂದ, 30 ಅಡಿ ಉದ್ದ 3½ ಅಡಿ ಆಗಲದ ದೋಣಿಗಳು ಬೇಕಾಗಿರುತ್ತವೆ.

ಹೊಸದಾದ ದೋಣಿಗಳನ್ನು ತಯಾರಿಸಿ ಕೊಡಲು ಇಚ್ಛಿಸುವ ಕಂಟ್ರಾಕ್ಟ್‌ದಾರರು ಅವರವರ ಟೆಂಡರುಗಳನ್ನು 1936ನೇ ಇಸವಿ ಫೆಬ್ರವರಿ ಮಾಹೆ 15ರ ಒಳಗೆ ಕೊಡಗು ಡಿಸ್ಟ್ರಿಕ್ಟ್ ಬೋರ್ಡು ಪ್ರೆಸಿಡೆಂಟರವರಿಗೆ ದಿವಾಜಿಟ್ಟು 25 ರೂ ಹಣ ಸಮೇತ ಕಳುಹಿಸತಕ್ಕದ್ದು.

ದೋಣಿಗಳನ್ನು ಆಯಾಯ ಸ್ಥಳಗಳಿಗೆ ಬರುವ ಮೇ ತಿಂಗಳು 15ರೊಳಗೆ ತಲಪಿಸಲು ಕಂಟ್ರಾಕ್ಟ್ ಪಡಕೊಂಡವನು ಬದ್ಧನಾಗಿರಬೇಕು.

ಹೆಚ್ಚಿನ ವಿಷಯಗಳನ್ನು ಡಿಸ್ಟ್ರಿಕ್ಟ್ ಬೋರ್ಡು ಆಫೀಸಿನಿಂದ ತಿಳಿದುಕೊಳ್ಳುವುದು.

ಪಿ. ಎಂ. ಚಂಗಪ್ಪ,
(ಪ್ರೆಸಿಡೆಂಟ್.)

ನೋಟೀಸು.

ಅನ್‌ರೀಡಿಮ್ಡ್ ಜಾಗಗಳಲ್ಲಿರುವ ಗಂಧದ ಮರಗಳಿಗೆ ಟೋನಸು ಕೊಡುವುದನ್ನು ಕುರಿತು ಸರ್ಕಾರದವರು ಮಾಡಿ ರುವ ಕರಡು ನಿಬಂಧನೆಗಳ ವಿಷಯ ಕಮಿಶನರವರಲ್ಲಿಗೆ ಒಂದು ರಿಪ್ರೆಸೆಂಟೇಶನ್ ಕಳುಹಿಸುವುದನ್ನು ಆಲೋಚಿಸುವುದಕ್ಕಾಗಿ ಕೊಡಗು ಜಮೀನ್ದಾರರ ಸಂಘದ ಕಾರ್ಯಕಾರಿ ಮಂಡಳಿಯ ವಿಶೇಷ ಮೀಟಿಂಗು ತಾರೀಕು 9—2—36ನೇ ಆದಿತ್ಯವಾರ ಗೋಣಿಕೊಪ್ಪಲಲ್ಲಿ ಮಧ್ಯಾಹ್ನ 1 ಗಂಟೆಗೆ ನಡೆಯವುದು. ಕಾರ್ಯಕಾರಿ ಮೆಂಬರುಗಳೆಲ್ಲರೂ ತಪ್ಪದೆ ದಯವಾಡಿಸಬೇಕಾಗಿ ಕೋರಿಕೆ.

ಜಮೀನ್ದಾರರ ಸಂಘ,
ತಾ, 30—1—36,

ಐ. ಸಿ. ಕಾರ್ಯಪ್ಪ
(ಗೌ. ಕಾರ್ಯದರ್ಶಿ.)

ಸನ್ 1882ನೇ ಇಸವಿ ಇಂಡಿಯನ್ ಟ್ರಸ್ಟ್ ಆಕ್ಟಿಗೆ ಒಳಪಟ್ಟು ಸರಕಾರದ ಭರವಸೆಯುಳ್ಳ

ದಿ ಬೋಂಬೆ ಲೈಫ್ ಎಶ್ಯೂರೆನ್ಸ್ ಕಂಪೆನಿ ಲಿಮಿಟೆಡ್.

ಅಧ್ಯಕ್ಷರು—ಮಾನನೀಯ ಸರ್ ಲಲ್ಲುಭಾಯಿ ಸಾಮಲದಾಸ್,
ಕೆ. ಟಿ. ಸಿ. ಐ. ಇ., ಜೆ. ಪಿ. ಯವರು.

ಕೊಚ್ಚಿಕಾರ್ ಬ್ರುದರ್ಸ್ ಮದ್ರಾಸು ಬ್ರಾಂಚ್ ಸೆಕ್ರೆಟರಿಗಳು.

ಕಳೆದ ಲಾಭ ಹಂಚುವಿಕೆಯಲ್ಲಿ ರೂ. 18ರಿಂದ 23ರ ವರೆಗೆ ಬೋನಸು ಡಿಕ್ಲೇರಾಗಿರುತ್ತೆ.

ಹಿಂದಿಯಿಂದ ಸ್ಥಾಪಿಸಲ್ಪಟ್ಟು ಹಿಂದೂದೇಶವನಂಗಾಗಿ ಜೀವವಿಮೆಗೆ ಸಮ್ಮಂಧಪಟ್ಟಿರುವ ಅತ್ಯುತ್ತಮ ತರದ ಲಕ್ಷಣಗಳಿಂದ ಕೂಡಿ ಕಮ್ಮಿ ಪ್ರೀಮಿಯದ ದರದಲ್ಲಿ ಪಾಲಿಸಿ ಕೊಡುವ ಕಂಪೆನಿ ತಮ್ಮದೆಂದು ಮನಪೂರ್ವಕ ನಂಬಿರಿ.

ಪತಿ ವತ್ನಿಯರು ಮತ್ತು ವ್ಯಾಪಾರಸ್ಥರು ವಗೈರೆಯುಗೆ ವೀಕೇಭವಿಸಿ (ಜಾಯಿಂಟ್ ಲೈಫ್)
ಪಾಲಿಸಿ ಕಮ್ಮಿ ಪ್ರೀಮಿಯಮ್ ದರದಲ್ಲು ಕೊಡುವ ಈ ಕಂಪೆನಿಯು ಹೆಸರುಗೊಂಡಿದೆ.

ಪಾಲಿಸಿದಾರರು ಅಕಾಲಾತ್ಮಕವಾಗಿ ಅಂಗಹೀನರಾದರೆ ಅಂಥವರಿಗೆ ಪಾಲಿಸಿಯ ಮೊಬಲಗನ್ನು ಮುಂದಳ
ಪ್ರೀಮಿಯಮ್ ವಸೂಲಾತಿ ಇಲ್ಲದೆ ಪೆಕ್ಕನ್ ರೀತಿಯಲ್ಲು ಉದಾರತ್ವದಿಂದ ಕೊಡಲು
ಈ ಕಂಪೆನಿಯು ಎದುರು ನಿಂತಿದೆ ಎಂದು ನೆನಪಿರಲಿ.

ಮುಕುವರ್ಜಿಯಿಂದ ಕೆಲಸ ಮಾಡಲು ಇಚ್ಛಿಸುವ ಗಂಡಸರು ಮತ್ತು ಹೆಂಗಸರಿಗೆ
ಉತ್ತಮ ತರಹದ ಕಮಿಶನ್ ವಗೈರೆಯುಂದ ಏಜೆನ್ಸಿ ಕೊಡಲಾಗುತ್ತೆ.

ಹೆಚ್ಚಿನ ಮಾಹಿತಿಗೆ—ಬಿ. ಎಸ್. ಐಯ್ಯಪ್ಪ,
ಕೊಡಗು ಚೀಫ್ ಏಜೆಂಟ್,
ಮಹದೇವಪೇಟೆ, ಮಡಿಕೇರಿ.

26—8

"ನೀನು ನಿನ್ನ ವಸ್ತ್ರಗಳ ವಿಷಯದಲ್ಲಿ ಹೆಚ್ಚು ಜಾಗರೂಕಳಾಗಿರುವಿ."

"ಹೌದು, ಆದ್ದರಿಂದಲೇ ನಾನು ಅವನ್ನು 501 ಸಾಬೂನಿನಿಂದ ಒಗೆಯುವುದು."

TOMCO

ಟಾಮ್‌ಕೋ ಮೂರಾಟದ ಮಳಿಗೆ,
೧, ಸೆಂಟ್ರಲ್ ಸ್ಟ್ರೀಟ್, ಬೆಂಗಳೂರು ದಂಡು.

501 Soap

ವೆಚ್ಚ ಕಡಿಮೆ.
ವಸ್ತ್ರ ಬಾಳಿಕೆ.
ಶ್ರಮ ಅತೀ ಕಡಮೆ!

ತಯಾರಿಸುವವರು—ತಾತಾ ಆಯಿಲ್ ಮಿಲ್, ಕಂಪೆನಿ, ಲಿಮಿಟೆಡ್, ಬೊಂಬಾಯಿ, ಮತ್ತು ತಾತಾಪುರ.

52—36. ಕೊಡಗಿನ ಡಿಸ್ಟ್ರಿಬ್ಯೂಟರ್—ಬಿ. ಎಸ್ ಸುಬ್ಬಣ್ಣ, ಸಂತೆಪೇಟೆ, ಮೈಸೂರು.

ನೂತನ! ಮನೋಲ್ಲಾಸಕರ!! ಕುಚಿಕರ!!! ಆದರ್ಶ ವಿಶ್ರಾಂತಿಗೃಹ!!!!

ಬೊಂಬಾಯಿ ರೆಸ್ಟೋರೆಂಟ್

ಇದೇ ತಾ. 19—12—1935ರಲ್ಲಿ ಮಡಿಕೇರಿ ಚೌಕದಲ್ಲಿರುವ
ಹೊಸ ಕಟ್ಟಡದಲ್ಲಿ ತೆರೆಯಲ್ಪಟ್ಟಿದೆ.

ಆರೋಗ್ಯಕರವೂ ಆಧುನಿಕವೂ ಆದ ಉಪಹಾರ ಗೃಹವೊಂದನ್ನು ನೀರೀಕ್ಷಿಸುವ ಮಹನೀಯರುಗಳ
ಸೌಕರ್ಯಕ್ಕಾಗಿ ತೆರೆಯಲಾಗುವುದು.

ಶುದ್ಧವೂ, ಪುಷ್ಟಿಕರವೂ, ಆರೋಗ್ಯಕರವೂ ಆದ ತಿಂಡಿತಿನಸುಗಳನ್ನೂ
ಕಾಫಿ—ಚಹಾ—ಕೊಕ್ಕೋ—ಶರ್ಬತ್ತು ಇತ್ಯಾದಿ ಪಾನೀಯಗಳನ್ನೂ—
ಕೇವಲ ಹಲವು ವರ್ಷಗಳ ಅನುಭವಿಕರಿಂದ ತಯಾರಿಸಲ್ಪಡುವುದು.

ಗಿರಾಕಿಗಳ ಸೌಕರ್ಯವನ್ನು ಲಕ್ಷಿಸಿ, ಆಸನಗಳ—ವಿಶಾಲ ಕೊಠಡಿಗಳ—ಕಾರ್ಯೋತ್ಸಾಹೀ
ವಿನೀತ ಸೇವಕರ ಏರ್ಪಾಡು ಇದೆ.

ಆಯಕ್ಕೆ ತಕ್ಕ ವ್ಯಯವೂಡುವವರು, ವ್ಯಯಕ್ಕೆ ತಕ್ಕ ಆಯವನ್ನು ಹೊಂದಬೇಕಾದ ಅತ್ಯಾಧುನಿಕ
ಈ ವಿಶ್ರಾಂತಿಗೃಹದಲ್ಲಿ—

ನೀವು ಅಪೇಕ್ಷಿಸಿದ—ನೀವು ವೀಕ್ಷಿಸಿದ—ನೀವು ಹೊಂದಲೇಬೇಕಾದ—
ಸಕಲ ಅನುಕೂಲತೆಗಳನ್ನು ಕಂಡು, ಪೂರ್ಣ ತೃಪ್ತಿಹೊಂದಿರಿ.

ಮಧುವೆ ಮತ್ತು ಉಪನಯನ ಸಮಾರಂಭಗಳಲ್ಲಿಯೂ ಮತ್ತು "ಟೀ"ಪಾರ್ಟಿ—
"ಎಟ್-ಹೋಮ್"ಗಳಲ್ಲಿಯೂ ನಮ್ಮನ್ನು ಮರೆಯಬೇಡಿ.

52—7 ಪ್ರೊಪ್ರೈಟರ್:—ನಾರಾಯಣ ರಾವ್, ಗಾಯತೊಂಡೆ.

ಆದಿ ಶ್ರೀ ಕಾವೇರಿ ಬಸ್ ಸರ್ವಿಸ್ ಲಿಮಿಟೆಡ್, ಮಡಿಕೇರಿ.

ಮೇಲ್ಕಂಡ ಕಂಪೆನಿಯಿಂದ ಶೇರು ಹೊಂದಿಕೊಂಡ ಮಹನೀಯರುಗಳು.

ಮ. ರಾ. ಚೋವಂಚಿರ ಬಿದ್ದಯ್ಯನವರು	225	ಶೇರು
,, ಪಳಂಗಂಡ ಚಂಗಪ್ಪನವರು	30	,,
,, ಮೂಣಾ ಹುಸೆನ್ ಸಾಹೇಬರವರು	50	,,
,, ಸಿ. ಹಮಿದ್ ಸಾಹೇಬರವರು	50	,,
,, ಡಾ. ಕೊಂಗೆಟ್ಟಿರ ಮಂದಣ್ಣನವರು	2	,,
,, ಡಾ. ಚೇರಂಡ ಸೋಮಯ್ಯನವರು	21	,,
,, ತೀತಿರ ಮುತ್ತಣ್ಣನವರು	30	,,
,, ಕಟ್ಟಿರ ಕುಟ್ಟಪ್ಪನವರು	30	,,
,, ಚೇರಂದಂಡ ಪೂಣಚ್ಚನವರು	50	,,
,, ಪಂದ್ಯಂಡ ಬೆಳ್ಯಪ್ಪನವರು	2	,,
,, ಒಲ್ಲಚಂಡ ಬೆಳ್ಯಪ್ಪನವರು	2	,,
,, ಕೀತಿಯಂಡ ಜಿ. ಕುಟ್ಟಪ್ಪನವರು	5	,,
,, ಅಪ್ಪಾರಂಡ ಬಿ. ಮೊದಪ್ಪನವರು (ರಿಟಯರ್ಡ್ ಇಂಜಿನಿಯರ್)	10	,,
,, ಪಟ್ಟಮಾಡ ಯಸ್ ಐಯ್ಯಣ್ಣನವರು	50	,,
,, ಒಲ್ಲಂಡ ಬಿ ಪೂವಯ್ಯನವರು	1	,,
,, ಐಚೆಟ್ಟಿರ ಸಿ. ಬೋಪಯ್ಯನವರು	2	,,
,, ಮುಕ್ಕಾಟಿರ ಯಂ. ಬೋಪಯ್ಯನವರು	5	,,
,, ಕಾಬೆಯಂಡ ಎ ಅಚ್ಚಣ್ಣನವರು	2	,,
ಮಿಸೆಸ್ ತೆಲಸಂಡ ಎಂ. ಸಬ್ಬಯ್ಯನವರು	10	,,
ಮ. ರಾ. ಒಲ್ಲಚಂಡ ಕೆ. ಅಪ್ಪಯ್ಯನವರು	3	,,

8—1

ಮದ್ಯಪಾನದಿಂದ ಆಗುವ ಅನರ್ಥಗಳು.

ಮಿಸ್ ಕೊಪೆಲ್ಯಾಂಡ್‌ರವರು ಮೊನ್ನೆ ತಾನೇ ತಿರುವಾಂಡರಂನಲ್ಲಿರುವ ವೈ. ಯಂ ಸಿ. ಎ. ಮಂದಿರದಲ್ಲಿ ಮದ್ಯವಿಸರ್ಜನೆಯನ್ನ ಕುರಿತು ಒಂದು ಭಾಷಣವನ್ನು ಮಾಡಿದರು. ಇವರು ಅಲ್ಲಿಗುವ ಕ್ರೈಸ್ತ ಮಹಿಳೆಯರ ಮಧ್ಯದಲ್ಲಿ ಒಂದು ಮದ್ಯವಿಸರ್ಜನಾ ಸಂಘವನ್ನು ಏರ್ಪಡಿಸಿರುತ್ತಾರೆ. ಇಂಡಿಯಾದಲ್ಲಿ ಮದ್ಯಪಾನವು ಎಷ್ಟರ ಮಟ್ಟಿಗೆ ಪ್ರಬಲವಾಗಿದೆಯೆಂಬುದನ್ನು ತಿಳಿದು ಅವಶ್ಯವೆಂದು ಕಂಡು ಬಂದರೆ ಒಂದು ಮದ್ಯವಿಸರ್ಜನೆಯ ಸಂಘವನ್ನು ಏರ್ಪಡಿಸಬೇಕೆಂಬ ಉದ್ದೇಶದಿಂದಲೇ ಸ್ಕಾಟ್‌ಲ್ಯಾಂಡಿನಿಂದ ಮಿಷನೆರಿಯಾಗಿ ಇಲ್ಲಿಗೆ ಬಂದಿದ್ದಾರೆ ಈ ಸಭೆಯಲ್ಲಿ ಅಧ್ಯಕ್ಷರಾಗಿದ್ದ ಮೆ ಗೋವಿಂದನ್‌ರವರು ಮದ್ಯಪಾನವು ಇಲ್ಲಿನ ಹರಿಜನರಲ್ಲಿ ಬಹಳ ಪ್ರಬಲವಾಗಿದೆಯೆಂದು ತಿಳಿಸಿದರು. ಮಿಸ್ ಕೊಪೆಲ್ಯಾಂಡ್‌ಯವರು ಭಾಷಣ ಮಾಡುತ್ತಾ ಹೇಳಿದ್ದುದೇನೆಂದರೆ—

'ಈ ದೇಶದಲ್ಲಿ ಮದ್ಯಪಾನದ ದುರಭ್ಯಾಸವು ಕೀಳುಜಾತಿಯ ಜನಗಳಲ್ಲಿ ಬಹಳ ರೂಢಿಯಾಗಿದೆ. ವಿವಿಧ ಮದ್ಯಪಾನಗಳ ಸೇವನೆಯು ಇಲ್ಲಿನ ವಿದ್ಯಾವಂತರಲ್ಲಿ ಪ್ರಬಲವಾಗುತ್ತಾ ಬರುತ್ತಿದೆ ಎಂಬುದು ನಾನು ಇಲ್ಲಿಗೆ ಬಂದ ಮೇಲೆ ನನಗೆ ತಿಳಿದು ಬಂದಿದೆ ಪೂರ್ವಕಾಲದಲ್ಲಿ ಇಂಡಿಯಾದಲ್ಲಿದ್ದ ಯೂರೋಪಿಯನರು ಬಹಳವಾಗಿ ಕುಡಿಯುತ್ತಿದ್ದರಂತೆ. ಈಗ ಅವರಲ್ಲಿ ಈ ದುರಭ್ಯಾಸವು ಅಷ್ಟು ಪ್ರಬಲವಾಗಿಲ್ಲ. ಹೀಗಿದ್ದರೂ ವಿದೇಶದ ಮದ್ಯಪಾನಗಳು ಬಹಳವಾಗಿ ಈ ದೇಶಕ್ಕೆ ಆಮದಾಗಿ ಈಗಲೂ ಬರುತ್ತಾ ಇರುತ್ತವೆ. ಈ ದೇಶದಲ್ಲಿ ಒಂದು ವರ್ಷದಲ್ಲಿ ನೂರು ಕೋಟಿ ರೂಪಾಯಿ ಮದ್ಯಪಾನಗಳಿಗಾಗಿ ವ್ಯಯವಾಗುತ್ತಾ ಇದೆ. ಇಲ್ಲಿನ ವಿದ್ಯಾಭ್ಯಾಸಕ್ಕಾಗಿ ವಿನಿಯೋಗವಾಗುವ ಹಣವಾದರೋ ಮೂವತ್ತು ಕೋಟಿ ರೂಪಾಯಿ ಮಾತ್ರವೇ!

ಮದ್ಯಪಾನಗಳ ಸೇವನೆಯಿಂದ ದೇಹಕ್ಕೆ ಉಂಟಾಗುವ ಅನರ್ಥಗಳು ಎಷ್ಟೆಂಬುದು ಈ ದೇಶದಲ್ಲಿ ಅನೇಕ ಜನಗಳಿಗೆ ತಿಳಿದಿರುವುದಿಲ್ಲ. ಅಮಲೇರಿಸತಕ್ಕ ಪದಾರ್ಥಗಳೆಲ್ಲಾ ದೇಹಕ್ಕೆ ಹಾನಿಯನ್ನುಂಟುಮಾಡುವ ಒಂದು ಒಗೆಯ ವಿಷವು ಇರುತ್ತದೆ. ಹೆಂಡವು ದೇಹಕ್ಕೆ ಆರೋಗ್ಯಕರವಾದುದೆಂದು ಕೆಲವು ಜನಗಳು ಅಭಿಪ್ರಾಯಪಡುತ್ತಾರೆ. ಆದರೆ ಅದು ವಾಸ್ತವವಲ್ಲ. ಈ ವಿಷಯದಲ್ಲಿ ಜನಗಳಿಗೆ ತಿಳಿವಳಿಕೆಯನ್ನು ಕೊಡುತ್ತಾ ಬರುವುದು ಅವಶ್ಯ. ಮದ್ಯಪಾನದಿಂದುಂಟಾಗುವ ಅನರ್ಥಗಳನ್ನು ಕುರಿತು ಪುಸ್ತಕಗಳನ್ನು ಬರೆದು ಪಾಠಶಾಲೆಗಳಲ್ಲಿ ಓದುವ ಮಕ್ಕಳಿಗೆ ಕಲಿಸುವುದು ಒಳ್ಳೆಯದು. ಇಂಡಿಯಾದ ಹೀನಸ್ಥಿತಿಯನ್ನೂ, ಒಡತನವನ್ನೂ ತೊಲಗಿಸಿಬಿಡಬೇಕಾದರೆ ಈ ದುರಭ್ಯಾಸವನ್ನು ಈ ದೇಶದಿಂದ ಮೂಲೋತ್ಪಾಟನ ಮಾಡಬೇಕು.

ಪತ್ರವ್ಯವಹಾರ.

[ಪತ್ರಿಕಾದಾರರು ಪಡುವ ಅಭಿಪ್ರಾಯಗಳಿಗೆ ಪತ್ರಿಕಾಕರ್ತರು ಜವಾಬ್ದಾರರಲ್ಲ. ಸಂ]

ವಿದ್ಯಾ ಇಲಾಖೆಯವರ ವರ್ಗಾವರ್ಗಿ.

ಅಯ್ಯಾ,

ಕೊಡಗಿನ ಗಜೆಟೆಡ್ ಉದ್ಯೋಗಸ್ಥರನ್ನು ಮತ್ತೊಂದೊಡ್ಡ ಉದ್ಯೋಗಸ್ಥರನ್ನು ವರ್ಗಾಯಿಸಬೇಕೆಂಬುದನ್ನು ಮೊದಲು ಕೆಲವರು ವಿರೋಧಿಸಿದರೂ ಈಗ ಅದಕ್ಕೆ ಸರ್ಕಾರದೂ ಕೂಡ ಆಕ್ಷೇಪಣೆ ಇರುವುದಿಲ್ಲ. ಆದರೆ ಕಾರ್ಯತಃ ಹೇಗೆ ಮಾಡಬೇಕೆಂಬುದೇ ತೊಂದರೆಯಾಗಿದೆ. ಆದುದರಿಂದ ಅದರಿಂದಾಗುವ ಪ್ರಯೋಜನ ಎಲ್ಲರಿಗೂ ತಿಳಿದೇ ಇದೆ.

ಈ ತತ್ವವನ್ನು ವಿದ್ಯಾ ಇಲಾಖೆಗೂ ವಿಸ್ತರಿಸಬೇಕಂಬುವುದೇ ಈ ಲೇಖನದ ಅಭಿಪ್ರಾಯ. ಎಳೆಯ ಪಾಠ್ಯಾದನರು ಹೈಸ್ಕೂಲಿನ ಹೆಡ್ ಮಾಸ್ಟರಾಗಿಯೋ, ಡಿಪ್ಟಿ ಇನ್ಸ್‌ಪೆಕ್ಟರಾಗಿಯೋ ಇದ್ದು ಅವರು ರಿಟಯರಾಗುವ ವರೆಗೂ ಅಲ್ಲೇ ಇರಬೇಕು. ಅವರಿಗೆ ಕೆಲವು ಉಪಾಧ್ಯಾಯರ ಮೇಲೆ ಪ್ರೇಮ ಯೂ ಕೋಪ ಇರುವುದು ಮನುಷ್ಯ ಸ್ವಭಾವ. ಎಂದರೆ ಕೆಲವು ಉಪಾಧ್ಯಾಯರು ಏನು ಮಾಡಿದರೂ ಸರಿಯೆ; ಇನ್ನು ಕೆಲವರು ಏನು ಮಾಡಿದರೂ ತಪ್ಪೇ. ಎಂಬ ಸಂದರ್ಭ ಒದಗಬಹುದು. ಆಗ್ಯೆ ಕೆಲವರು ಬಿಟ್ಟು ಹೋಗಬೇಕಾಗುವ ಸಂದರ್ಭವೂ ಬರುತ್ತದೆ. ಇದು ಸಂಭವನೀಯವೂ ಇದೆ.

ಈಗ ಕೊಡಗಿನ ಎರಡು ಹೈಸ್ಕೂಲುಗಳ ಹೆ. ಮಾಸ್ಟರವರೂ ಡಿ. ಇನ್ಸ್‌ಪೆಕ್ಟರವರೂ ಒಂದೇ ಗ್ರೇಡಿನವರಾಗಿರುವುದರಿಂದ ಎಲ್ಲಿದ್ದರೂ ಇವರಿಗೆ ಸಿಕ್ಕುವ ಸಂಬಳ ಸಿಕ್ಕಿಯೇ ತೀರಬೇಕು. ಹೀಗಿರುವುದರಿಂದ ಬೇರೆ ಇಲಾಖೆಗಳ ದೊಡ್ಡ ಉದ್ಯೋಗಸ್ಥರ ವರ್ಗೀಕರಣದ ತೊಂದರೆ ಇಲ್ಲಿಲ್ಲ. ಅವರನ್ನು ಐದು ವರ್ಷಕ್ಕೊಮ್ಮೆಯಾದರೂ ಖಂಡಿತ ವರ್ಗಾಯಿಸಲೇ ಬೇಕು.

ಹೀಗೆ ವರ್ಗಾಯಿಸಿದರೆ ಅವರಿಗೂ ಒಳ್ಳೆಯದಿದೆ. ಒಬ್ಬರು ಇನ್ನೊಬ್ಬರಿಗಿಂತ ಹೆಚ್ಚು ಕೆಲಸ ಮಾಡಬಹುದು. ಒಬ್ಬರು ಯಾವಾಗಲೂ ತಿರುಗಿಕೊಂಡೇ ಇದ್ದು ಸಾಮ್ಯವಿಲ್ಲದ ತೊಂದರೆ ಪಡಬಹುದು ಇನ್ನೊಬ್ಬರು ಇದ್ದಲ್ಲೇ ಇದ್ದು ಅವರ ಮನಸ್ಸಿಗೆ ಬೇಸರಿಕೆಯೂ, ಶರೀರಕ್ಕೆ ಆಲಸ್ಯವೂ ಆಗಬಹುದು. ಅಲ್ಲದೆ ಒಬ್ಬರು ಒಂದು ತಪ್ಪನ್ನು ಮಾಡಿದರೆ ಏನೋ ಕಾರಣದಿಂದ ಅವರಿಗೆ ಶಿಕ್ಷೆ ವಿಧಿಸಲು ಸಾಧ್ಯವಿಲ್ಲದಿರಬಹುದು. ಒಬ್ಬರು ಇನ್ಸ್‌ಪೆಕ್ಟರ ಹತ್ತಿರ ಗಡಿ ಹೋಗಲು ಅವಕಾಶವುಳ್ಳವರೂ, ಇನ್ನೊಬ್ಬರು ಇಂಥಾ ಅವಕಾಶ ಇಲ್ಲದವರೂ ಆಗಿರಬಹುದು. ಅಲ್ಲದೆ ವರ್ಗಾಯಿಸಿದರೆ ಒಬ್ಬರು ಇನ್ನೊಬ್ಬರಿಗಿಂತಲೂ ಒಳ್ಳೇ ಕೆಲಸ ಮಾಡಲು ಪ್ರಯತ್ನಿಸುವರು. ಅಲ್ಲದೆ ದೇಹಕ್ಕೂ ಮನಸ್ಸಿಗೂ ಕೆಲಸದ ಬದಲಾವಣೆಯಿಂದಲೂ, ಅನುಭವದಿಂದಲೂ ಹೆಚ್ಚಿನ ಪ್ರಯೋಜನವಾಗಬಹುದು. ಉಪಾಧ್ಯಾಯರು ಆಗ್ಗೆ ಸರಿಯೂದ ಮಾರ್ಗವನ್ನೇ ಹಿಡಿಯಲು ಪ್ರಯತ್ನಿಸುವರಲ್ಲದೆ ಅವರನ್ನು ಇವರನ್ನು ಮೆಚ್ಚಿಸಲು ಮಾತ್ರ ಪ್ರಯತ್ನಿಸಲಿಕ್ಕಿಲ್ಲ. ಒಬ್ಬರನ್ನು ಮೆಚ್ಚಿಸಿ ಇನ್ನೊಬ್ಬರನ್ನು ದೂರ ಮಾಡಿದರೆ ತೊಂದರೆ ಬರಬಹುದೆಂಬ ಭೀತಿ ಅವರಿಗೆ ಇರುತ್ತದೆ. ಹಾಗಾದರೆ ತಾನು ಮಾಡಿದ್ದೇ ಸರಿ ಎಂದು ದೃಢಪಡಿಸಲು ಈ ಮೂವರೂ ಪ್ರಯತ್ನಪಡದೆ ಒಬ್ಬರ ಕಷ್ಟ ಇನ್ನೊಬ್ಬರು ತಿಳಿದು ಕೊಡಗಿನ ವಿದ್ಯಾ ಇಲಾಖೆಯಲ್ಲಿ ಈಗಿರುವ ಹೆಚ್ಚಿನ ಕೊಳೆ ಹೋಗಿ ಮುಂದಕ್ಕೆ ಅಭಿವೃದ್ಧಿಯೂಗುವುದರಲ್ಲಿ ಸಂಶಯವಿಲ್ಲ.

ಒಬ್ಬ ಪ್ರಸಿದ್ಧ ಕವಿಯು ಹೇಳಿದಂತೆ 'ಯಾವುದೇ ಆಗಲಿ ಎಷ್ಟೇ ಒಳ್ಳೆಯದಾದರೂ ಇದ್ದಂತೆಯೇ ಇದ್ದರೆ ಬೇಸರ ಹುಟ್ಟುತ್ತದೆ.' ಆದುದರಿಂದ ಈ ವಿಷಯವನ್ನು ಇನ್ಸ್‌ಪೆಕ್ಟರೂ, ಕವಿಷನರೂ, ಚೀಫ್ ಕವಿಶನರೂ ಗಮನಿಸಬೇಕಾಗಿ ಕೋರುವ.

'ದೇಶಸ್ಥ,'

ಸಬ್ಬಂದಿ ಖೋತೆಯೋ, ಬಡಾವಣೆಯೋ?

ಅಯ್ಯಾ,

ಆರೋಗ್ಯ ಇಲಾಖೆ ಎಂಬುವುದೊಂದು ಹೊಸ ಇಲಾಖೆಯು ವ್ಯವಸ್ಥೆಯು ಕೊಡಗು ಸಿವಿಲ್ ಸರ್ಜನ್ ದೊರೆಗಳ ಮೂಲಕ ಏರ್ಪಡಿಸಬೇಕೆಂತ ಹೊರಟಿದೆ ಎಂದು ಹಾರಾಡುತ್ತಿದೆ ಒಂದು ಗಾಳಿ ವರ್ತಮಾನ. ಒಂಭತ್ತರಲ್ಲಿ ಮೂವರು ವ್ಯಾಕ್ಸಿನೇಟರುಗಳನ್ನು ಕಿತ್ತೊಗೆದು ಅರ್ಧ ಡಜನ್ ಮಾಡಿ, ಮುನ್ಸಿಪಲ್ ಓವರ್‌ಸಿಯನರಿಗೆ ಸ್ಯಾನಿಟರಿ ಇನ್ಸ್‌ಪೆಕ್ಟರೆಂದು ಹೆಸರಿಟ್ಟು ಅವರ ತಾಬೆಯಲ್ಲಿ ಎಂಡು ಮುನ್ಸಿಪಾಲಿಟಿಗಳಿಗೆ ಒಬ್ಬೊಬ್ಬ ವ್ಯಾಕ್ಸಿನೇಟರನ್ನೂ ಕೆಲವು ಗ್ಯಾಮಗಳೊಂದಿಗೆ ಬಿಟ್ಟು, ಉಳಿ

THE POPULAR INSURANCE COMPANY, LTD.,

Head Office;— Mangalore, (S. India).

THE MANAGING DIRECTOR of the Company will be camping at the Traveller's Bungalow, Mercara, from the 3rd to 6th February, where intending applicants for Agencies throughout Coorg Province can interview him. Liberal terms offered to suitable men.

ಪ್ರಸಿದ್ಧ ಔಷಧಗಳು.

ಮಲೇರಿಯಾಕ್ಕೆ ಒಂದೇ ಸಿದ್ಧೌಷಧ.

ಶುದ್ಧವಾದ ಹಿಂದೂಸ್ಥಾನದ ಮೂಲಿಕೆಗಳಿಂದ ತಯಾರಾದದ್ದು.
ಕ್ವಿನಿನನ್ನು ಯಾವ ರೂಪದಲ್ಲಿ ಸೇರಿಸಿಲ್ಲ.

"ನವರತ್ನ ಅಲ್ಮಾರಿಯಾ"

ಹಿಂದೂದೇಶದ ಔಷಧಗಳ ವಿಚಾರದಲ್ಲಿ ಶ್ರೇಷ್ಠತೆಯನ್ನು ಪಡೆದ ಡಾ. ಕೆ. ಯಂ. ನಾಡ್ಕರ್ಣಿ ಮತ್ತು ಡಾ. ಕೆ. ಸಿ. ಬೋಸ್‌ರವರ ಗ್ರಂಥಗಳಿಗನುಗುಣವಾಗಿ ಅತೀ ಪರಿಣಾಮಕಾರಕ ಔಷಧಗಳ ಸಂಯೋಜನೆಯಿಂದ ತಯಾರಿಸಲ್ಪಟ್ಟ ಈ ಔಷಧವು ಹೆಚ್ಚು ಫಲಕಾರಿಯಾಗಿರುವದು.

ಇದರಲ್ಲಿರುವ ಔಷಧಗಳು.

1. Andrographis Paniculate
2. Cocculas Cordifolius
3. Berriberies Aristata
4. Vernonis Cinerarea
5. Evolvulas Alsinoides
6. Dashmoola
7. Aconitum Heterophylum
8. Alstonia Scholaris

ಮಲೇರಿಯಾಕ್ಕೆ ಅತ್ಯುತ್ತಮ ಔಷಧಿ. ಕ್ವಿನಿನನ್ನು ಯಾವ ವಿಧದಲ್ಲೂ ಸೇರಿಸದೆ ಯಾವ ಬಾಬಿನಲ್ಲೂ ಹಾನಿಕರವಾಗದ ಸಂಜೀವಿನಿ. ಇದನ್ನು ಎಷ್ಟು ಸೇವಿಸಿದರೂ ಕ್ವಿನೀನ್ ಸೇವನೆಯಿಂದ ಉಂಟಾಗಬಹುದಾದ ಮಹಾ ಹಾನಿಗಳ ಭಯವೇ ಇಲ್ಲ. ಒಮ್ಮೆ ಪರೀಕ್ಷಿಸಿದಲ್ಲಿ ಮತ್ತೆ ಬಿಡಲಾರಿರಿ.

ತಯಾರಿಸುವವರು:—ದಿ ನವರತ್ನ ಫಾರ್ಮಸಿ,
ಪೋ. ಬಾ. ನಂಬರು 68, ಕೊಚಿನ್.

ಸ್ಟೋಕಿಸ್ಟ್—ಎ ಎಸ್. ಮೂಚಯ್ಯ, ಬಟ್ಟೆ ವ್ಯಾಪಾರಿ, ಸಂಟಿಕೊಪ್ಪ. 52—37

ಏಜೆಂಟ್—ವಿ. ಬಿ ಕಾಮತ್, ಮಹದೇವಪೇಟೆ, ಮಡಿಕೇರಿ.

ನವರತ್ನ ಫಾರ್ಮಸಿ,

ದ ನಾಲ್ವರಲ್ಲಿ ಉತ್ತರ ಮತ್ತು ದಕ್ಷಿಣ ಕೊಡಗು ತಾಲೂಕಿಗೆ ಇಬ್ಬಿಬ್ಬರಂತೆ ಸಾಗಿಸಿ ದೇಶಕ್ಕೆಲ್ಲಾ ಈಗ ಒಬ್ಬೊಬ್ಬರೇ ಆಗಿರುವ ಸ್ಯಾನಿಟರಿ ಮತ್ತು ವ್ಯಾಕ್ಸಿನ್ ಇನ್ಸ್‌ಪೆಕ್ಟರುಗಳನ್ನು ಇನ್ನು ಮುಂದೆ ಸ್ಯಾನಿಟರಿ ಇನ್‌ಸ್ಪೆಕ್ಟರುಗಳನ್ನಾಗಿಯೇ ಮಾಡಿ, ಒಬ್ಬ ಅಸಿಸ್ಟೆಂಟ್ ಮತ್ತು ಒಬ್ಬ ಡಿಸ್ಪೆನ್ಸರಿ ಹೆಲ್ಪ್ ಆಫೀಸರುಗಳ ತಾಬೆಯಲ್ಲಿ (ಅಂದರೆ, ಒಬ್ಬ ವ್ಯಾಕ್ಸಿನೇಟರಿಗೆ ಮೂವರು ಸುಪರ್‌ವೈಸಿಂಗ್ ಆಫೀಸರುಗಳು.) ವ್ಯಾಕ್ಸಿನೇಟರುಗಳಿಗೆ ಅಸಿಸ್ಟೆಂಟ್ ಸ್ಯಾನಿಟರಿ ಇನ್ಸ್‌ಪೆಕ್ಟರಿಂಬ ಉದ್ದುದ್ದದ ಗಂಭೀರವಾದ ಹೆಸರನ್ನಿಟ್ಟು-ಸಂಬಳದ ವಿಚಾರ ಒಂದು ಬಿಟ್ಟು, ಪುಕಾರವಿಲ್ಲದೆ, ಈಗ ಇರುವ ಕೆಲಸದೊಂಜಿಗೆ-ಮಲೇರಿಯಾ, ಪ್ಲೇಗ್, ವಾಂತಿಭೇದಿ ಮತ್ತು ಗ್ರಾಮ ಸೌಕರ್ಯದ ಇತರ ಕೆಲಸಗಳನ್ನೂ ಕೊಟ್ಟು, ಸ್ಯಾನಿಟರಿ ಪರೀಕ್ಷೆಯಾಗದಿದ್ದರೂ ಮದ್ರಾಸಿನಲ್ಲಿ ಆರುವಾರಗಳ ವ್ಯಾಕ್ಸಿನೇಟರು ತರಬೇತಿಯಾಗಿ ಈಗ ವ್ಯಾಕ್ಸಿನ್ ಇನ್‌ಸ್ಪೆಕ್ಟರಾಗಿರುವವರಿಗೆ ಸ್ಯಾನಿಟರಿ ಇನ್‌ಸ್ಪೆಕ್ಟರ್ ಕೆಲಸಕೊಟ್ಟು, ಆ ಬಗ್ಗೆ ಅವರಿಗೆ ಸಂಬಳ ಬಡ್ತಿ ಮಾಡಿಸಿ ಸುಲಭವಾಗಿ ಆರೋಗ್ಯಇಲಾಖೆಯ ಕೆಲಸ ನಡಿಸಲೊಂದು ರಚನಾತ್ಮಕವು ಆಗಲೇ ಅಲ್ಲೆಲ್ಲಾ ಓಡಾಡುತ್ತಿದೆಯಂತೆ.

ಮೂವತ್ತಾರು ಶ್ಯಾನುಭೋಗರುಗಳು ಮಾಡುವ ಸ್ಥಳಗಳಲ್ಲಿ ಮನೆ ಮನೆಗಳಿಗೂ ತಿರುಗಬೇಕಾದ ಈ ಒಂಬತ್ತೇ ವ್ಯಾಕ್ಸಿನೇಟರುಗಳನ್ನಿಡುವ ಬದಲು ಮೂವರನ್ನು ಹೆಚ್ಚಿಸಿ ಹನ್ನೆರಡನ್ನಾಗಿ ಮಾಡಿ ನಿಯುದ್ಯೋಗದಲ್ಲಿ ನರಳಿ ಕೊಳೆಯುತ್ತಿರುವವರಲ್ಲಿ ಮೂವರು ತರುಣರಿಗಾದರೂ ಜೀವನೋಪಾಯಕ್ಕೆ ಜಾಗಮಾಡಿ ಕೊಡುವುದನ್ನು ಮರತು, ಮೂವರನ್ನು ವಜಮಾಡಿಸಿ ಒಬ್ಬನಿಗೆ ಸಂಬಳ ಏರಿಸಬೇಕೆನ್ನುವ ಆ ರಚನಾತ್ಮಕವು ಧರ್ಮವೇ?

ಸ್ವಲ್ಪ ಹೆಚ್ಚು ಸಂಬಳ ಏರಿಸಿಕೊಡಿರೆಂದು ಅಂಗಲಾಚಿ ಬೇಡಿದರೂ, ಗರೀಬ ನವುಕರರಿಂದ ಕತ್ತೆಯು ಹೊರುವಂತೆ ಹೆಚ್ಚು ಕೆಲಸ ಮಾಡಿಸಿಕೊಳ್ಳುವರಲ್ಲದೆ—ಅವರಿಗೆ ಸಂಬಳ ಹೆಚ್ಚಿಸಲು ಸರ್ಕಾರಕ್ಕೆ ಆಗ ಹಣದ ಅಭಾವವೆಂದು ಆ ವಿಚಾರವನ್ನೇ ಎತ್ತುವವರಿಲ್ಲ. ಆದರೆ ಕೆಲವು ದಿನಗಳ ಹಿಂದೆ ಇಬ್ಬರಿಗೂ ಪುಕಾರು ಇಲ್ಲದಂತೆ ಮಾಡಲಿಕ್ಕಾಗಿ ಸಮ್ಮಂಧವಿಲ್ಲದೆಯೇ ಒಬ್ಬರ ಸಂಬಳ ಹೆಚ್ಚಿಸಲಿಕ್ಕೂ, ರಿಟ್ರೆಂಚ್‌ಮೆಂಟ್ ತತ್ವಕ್ಕನುಸರಿಸಿ ತೆಗೆದು ಹಾಕಿದ್ದ ವೊ. ಸರ್ಕಲ್ ಇನ್ಸ್‌ಪೆಕ್ಟರನ್ನು ಪುನಹ ನಿರ್ಮಾಣ ಮಾಡಲಿಕ್ಕೂ, ಸರ್ಕಾರದ ಆರ್ಥಿಕ ದುಸ್ಥಿತಿಯನ್ನು ಸರಿಪಡಿಸಲಿಕ್ಕಾಗಿ ಸಬ್‌ಜಡ್ಜ್ ಕೋರ್ಟು ಒಂದೇ ಸಾಕೆಂದು ಒಮ್ಮೆ ತೆಗೆದ ಹಾಕಿದ್ದ ಮಡಿಕೇರಿ ಮುನ್ಸೀಫ್ ಮತ್ತು ಅವರ ಕೋರ್ಟು ವಗೈರೆ ಸಿಬ್ಬಂದಿಗಳೆಲ್ಲವನ್ನೂ ಸ್ಥಾಪಿಸಲಿಕ್ಕೂ ಸರ್ಕಾರಕ್ಕೆ ಹಣದ ಅಭಾವವಿರುವುದಿಲ್ಲ.

ಏನೇ ಇರಲಿ—ದೊಡ್ಡ ಎರಿಯದಲ್ಲಿ ಕೆಲವೇ ವೇಕ್ಸಿನೇಟರುಗಳು ಕೆಲಸ ಮಾಡುತ್ತಿರುವುದನ್ನು ಗಣನೆಗೆ ತೆಗೆದುಕೊಂಡು ಮೂವರನ್ನು ಹೆಚ್ಚಿಸಿ, ನಿರುದ್ಯೋಗಿಗಳಿಗೆ ಸ್ವಲ್ಪವಾದರೂ ಜೀವನದ ದಾರಿ ತೋರಿಸಿ, ಅವರಿಗೆಲ್ಲಾ ಶ್ಯಾನುಭೋಗರ ಸಂಬಳದಷ್ಟಕ್ಕಾದರೂ ಏರಿಸಿ, ಮದರಾಸಿನ ನೀಲಗಿರಿ ಮೊದಲಾದ ಮಲೆ ಸೀಮೆಗಳಲ್ಲಿ ಕೊಡುತ್ತಿರುವಷ್ಟು ಭತ್ಯವನ್ನಾದರೂ ಕೊಡಿಸಿ ಕೊಡಲು ಅವರ ಮೇಲಧಿಕಾರಿಗಳು ನಿಜವಾಗಿಯೂ ನಂಬುತ್ತೇನೆ. ಮೂತ್ರವಲ್ಲ, ಹಿಂದು ಮುಂದು ನೋಡದೆ ಮೂವರ ಜೀವನ ಚಕ್ರಕ್ಕೆ ಕೊಡಲಿ ಹಾಕಿ ಕೆಡಹುದು ಧರ್ಮವಲ್ಲ. ಅದು ಯಾರಿಗೂ ಶಾಂತಿಯನ್ನೀಯಲಾರದು. ಹೀಗೆ ಅವಶ್ಯವಿರುವುದನ್ನು ಸ್ಥಾಪಿಸುವುದಕ್ಕೂ, ಅನಾವಶ್ಯವಾದುದನ್ನು ಕಿತ್ತು ಹಾಕಲಿಕ್ಕೂ ಹೋರಾಡಿ ಸಲಹೆ ಕೊಡಲು ನಮ್ಮ ಕವುನ್ಸಿಲ್ ಮೆಂಬರುಗಳಾರಿಗೂ ಮನಸು ಬಾರದಿರುವುದಕ್ಕೆ ಎಷ್ಟು ವ್ಯಸನಪಟ್ಟರೂ ಸಾಲದು.

'ದೇಶವಾಸಿ.'

ಸೆಂಟ್ರಲ್ ಬ್ಯಾಂಕು ವಿಂಟಿಂಗು.

ಕೊಡಗು ಸೆಂಟ್ರಲ್ ಸಹಕಾರಿ ಬ್ಯಾಂಕಿನ ಡೈರೆಕ್ಟರುಗಳ ವಿಂಟಿಂಗು ಈ ತಾ. 25—1—1936 ರಲ್ಲು ಬೆಳಿಗ್ಗೆ 11 ಗಂಟೆಗೆ ಬ್ಯಾಂಕಿನ ಆಫೀಸಿನಲ್ಲಿ ನಡೆಯಿತು.

ಈ ಕೆಳಗಿನ ಡೈರೆಕ್ಟರುಗಳು ಹಾಜರಿದ್ದರು.

ಮೆ. ಗಳಾದ (1) ಐಂಡ್ಯಂಡ ಐ. ಬೆಳ್ಯಪ್ಪನವರು (ಪ್ರೆಸಿಡೆಂಟರು) (2) ಮನೆಯಪಂಡ ಯಂ. ಬೆಳ್ಯಪ್ಪನವರು (ಗೌರವ ಕಾರ್ಯದರ್ಶಿ) (3) ರಾ. ಸಾ. ಪಾಂಡಂಡ ಚಂಗಪ್ಪನವರು (4) ಐಚೆಟ್ಟಿರ ಸುಬ್ಬಯ್ಯನವರು (5) ಒಲ್ಲಚಂಡ ಬೆಳ್ಯಪ್ಪನವರು (6) ಕೀತಿಯಂಡ ಬೆಳ್ಳಿಯಪ್ಪನವರು, (7) ಕೊಳ್ಳಿಮಾಡ ಕರುಂಬೈಯ್ಯನವರು (8) ಪಿ. ಜಿ. ಮುದ್ದಮ್ಮೈಯ್ಯನವರು (9) ಏನಂಡ ಕಾರ್ಯಪ್ಪನವರು (10) ಜಮ್ಮಡ ಮೂದಪ್ಪನವರು (11) ನಡಿಕೇರಿಯಂಡ ಸೋಮಯ್ಯನವರು. (12) ಪಾಲೇಕಂಡ ತಮ್ಮೈಯ್ಯನವರು (13) ಕಂಬೀರಂಡ ಬೆಳ್ಯಪ್ಪನವರು ಮತ್ತು (14) ಉದಿಯೂಂಡ ಮೂಚೈಯ್ಯನವರು.

ಡೈರೆಕ್ಟರು ಮೆ. ಬಡುವಂಡ ಗಣಪತಿಯವರು ಗೈರು ಹಾಜರಾಗಿದ್ದರು.

ಕೋಆಪರೇಟಿವ್ ಸಂಘಗಳ ರಿಜಿಸ್ಟ್ರಾರವರೂ ಮತ್ತು ಸಾನಾಕ್ಕೆಡಿಟ್ ಸೀನಿಯರ್ ಇನ್ಸ್‌ಪೆಕ್ಟರೂ ಸಹ ಹಾಜರಿದ್ದರು.

1. ಇಂಡಿಯಾ ಚಕ್ರವರ್ತಿಯೂದ ಐದನೇ ಜಾರ್ಜರವರು ಪರಲೋಕವನ್ನೈದಿದಕ್ಕಾಗಿ ಡೈರೆಕ್ಟರುಗಳ ವ್ಯಸನ ಸೂಚನೆಯನ್ನೂ, ರಾಜಪದವಿಯನ್ನೇರಿದಂಥ ಅವರ ಪುತ್ರ ಎಂಟನೇ ಎಡ್ವರ್ಡ್ ಚಕ್ರವರ್ತಿಯವರಿಗೆ ದೇವರು ಆಯುರಾರೋಗ್ಯ ಸಂಪತ್ತನ್ನು ಕೊಟ್ಟು ಕಾಪಾಡಲೆಂಬ ಡೈರೆಕ್ಟರುಗಳ ಅಭಿಲಾಷೆಯನ್ನೂ ಕೊಡಗಿನ ಚೀಫ್ ಕಮಿಷನರವರಿಗೆ ತಂತೀ ಮೂಲಕ ತಿಳಿಸುವಂತೆ ಸೆಕ್ರೆಟರಿ ಮೆ. ಯಂ. ಯಂ. ಬೆಳ್ಯಪ್ಪನವರು ತಂದ ಸೂಚನೆಯು ಸರ್ವಸಮ್ಮತದಿಂದ ಮಂಜೂರಾಯಿತು.

2. ಬ್ಯಾಂಕಿಗೆ ಹೊಸದಾಗಿ ಜುನಾಯಿಸಲ್ಪಟ್ಟ ಡೈರೆಕ್ಟರುಗಳಿಗೆ ಸ್ವಾಗತವನ್ನೀಯುವಂತೆಯೂ, ಕೆಲಸದಿಂದ ನಿವೃತ್ತರಾದ ಹಳೇ ಡೈರೆಕ್ಟರುಗಳು ಮಾಡಿದ ಒಳ್ಳೆ ಕೆಲಸ ಕಾರ್ಯಗಳನ್ನು ರಿಕಾರ್ಡು ಮಾಡುವಂತೆಯೂ ಬ್ಯಾಂಕಿನ ಪ್ರೆಸಿಡೆಂಟರು ಮೆ ಪಂದ್ಯಂಡ ಐ. ಬೆಳ್ಯಪ್ಪನವರು ಸೂಚಿಸಿದ ಮೇಲೆ ಸರ್ವಸಮ್ಮತದಿಂದ ಅಂಗೀಕರಿಸಲಾಯಿತು.

3. ಕಳೆದ ವಿಂಟಿಂಗಿನ ಪ್ರೊಸೀಡಿಂಗ್ಸನ್ನು ಓದಿ ಮುಂಜೂರ್ಮಾಡಲಾಯಿತು.

4 ಡಿಸೆಂಬರ್ ತಿಂಗಳ ಜಮಾ ಮತ್ತು ಖರ್ಚಿನ ಲೆಕ್ಕವನ್ನು ಓದಿ ಮಂಜೂರ್ಮಾಡಲಾಯಿತು.

ಹಿಂದಳ ತಿಂಗಳ ಸಿಲ್ಕು	ರೂ	23873	15 1
ಸದರಿ ತಿಂಗಳಲ್ಲು ವಸೂಲಾತಿ		12535	8 0
ಜುಮ್ಲ		36409	7 1
ಸದರಿ ತಿಂಗಳಲ್ಲು ಖರ್ಚು		2597	6 0
ಬಾಕಿ ಸಿಲ್ಕು ರೂ		33812	1 1

5. ಈ ಕೆಳಗಿನ ಸೊಸೈಟಿಗಳಿಗೆ ಸಾಲಗಳು ಮಂಜೂರಾದವು. (1) ಹಾಲುಗುಂದ ಸೊಸೈಟಿಗೆ ರೂ. 300 (2) ಅಮ್ಮತ್ತಿ ಸಹಕಾರ ಸ್ಟೋರಿಗೆ ರೂ. 400 (3) ಅಮ್ಮತ್ತಿ ಕ್ರಾಪ್, ಲೋನ್, ಸೇಲ್ ಮತ್ತು ಸಪ್ಲೈ ಸೊಸೈಟಿಗೆ ರೂ. 2000 (4) ಅಮ್ಮತ್ತಿ ಟೌನ್ ಸಂಘಕ್ಕೆ ರೂ. 1000 (5) ಕಿಗ್ಗಟ್ಟು ನಾಡು ಸಹಕಾರ ಸ್ಟೋರಿಗೆ ರೂ. 1000 (6) ಮಡಿಕೇರಿನಾಡು ಸ್ಟೋರಿಗೆ ರೂ. 2500 (7) ವಿರಾಜಪೇಟೆ ಟೌನ್ ಸೊಸೈಟಿಗೆ ರೂ. 10,000 (8) ಮೂರ್ನಾಡು ಸಹಕಾರ ಸ್ಟೋರಿಗೆ ರೂ. 1500 (9) ವಿರಾಜಪೇಟೆ ಕ್ರಾಪ್, ಲೋನ್ ಮತ್ತು ಸಪ್ಲೈ ಸೊಸೈಟಿಗೆ ರೂ. 3000 (10) ಮಂಜ್ಲಾರ ಯಂಗ್ ಮೆನ್ಸ್ ಸೊಸೈಟಿಗೆ ರೂ. 500 (11) ಮಡಿಕೇರಿ ಮಹಿದೇವಪೇಟೆ ಸೊಸೈಟಿಗೆ ರೂ. 1000 (12) ಕೋಆಪರೇಟಿವ್ ಡಿಪಾರ್ಟ್‌ಮೆಂಟಲ್ ಸೊಸೈಟಿಗೆ ರೂ. 500 (13) ಕಲಿಯಂಡ ಕುಟುಂಬ ಸೊಸೈಟಿಗೆ ರೂ 1000 ಮತ್ತು (14) ಸಿವುತ್ ಕುಗ್ರ್ ಸಹಕಾರ ಸ್ಟೋರಿಗೆ ರೂ. 2000.

6 ಈ ಕೆಳಗಿನ ಸೊಸೈಟಿಗಳ ಸಾಲದ ಅರ್ಜಿಗಳನ್ನು ಬರುವ ವಿಂಟಿಂಗಿನಲ್ಲಿ ತೀರ್ಮಾನಿಸುವಂತೆ ಇಡಲಾಯಿತು

( ) ಕಣಿವೆ ನಲ್ಲೂರು ಸೊಸೈಟಿಗೆ (2) ಕೋಪಟ್ಟಿ ಸೊಸೈಟಿಗೆ (3) ಮಕ್ಕಂದೂರು ಸೊಸೈಟಿಗೆ ಮತ್ತು (4) ಕಾಲೂರು ಸೊಸೈಟಿಗೆ.

7. ಬ್ಯಾಂಕಿನ 1935—1936 ನೇ ಸಂವತ್ಸರಕ್ಕೆ ಗವರ್ನರವ ಸೆಕ್ರೆಟರಿಯವರನ್ನು ಜುನಾಯಿಸುವ ವಿಷಯ ಆಲೋಚಿಸಲಾಗಿ ಮೆ. ಮನೆಯಪಂಡ ಯ.ಂ. ಬೆಳ್ಯಪ್ಪನವರ ಮತ್ತು ಮೆ. ಒಲ್ಲಚಂಡ ಬೆಳ್ಯಪ್ಪನವರ ಹೆಸರುಗಳನ್ನು ಸೂಚಿಸಲಾಯಿತು.

ಅವರಿಬ್ಬರ ಹೆಸರುಗಳನ್ನು ಓಟಿಗೆ ಹಾಕಲಾಗಿ ಮೆ. ಮನೆಯಪಂಡ ಬೆಳ್ಯಪ್ಪನವರಿಗೆ 9 ಓಟುಗಳೂ, ಒಲ್ಲಚಂಡ ಬೆಳ್ಯಪ್ಪನವರಿಗೆ 5 ಓಟುಗಳೂ ಸಿಕ್ಕಿದ ಕಾರಣ ಮೆ. ಮನೆಯಪಂಡ ಯಂ. ಬೆಳ್ಯಪ್ಪನವರನ್ನು ಬ್ಯಾಂಕಿನ ಗವರ್ನರವ ಸೆಕ್ರೆಟರಿಯಾಗಿ ಆರಿಸಲಾಯಿತು.

8 ರಾ ಸಾ. ಪಾಂಡಂಡ ಚಂಗಪ್ಪನವರನ್ನು 1935—36 ನೇ ಸಂವತ್ಸರದ ಬ್ಯಾಂಕಿನ ಖಜಾನ್ಚಿಯರಾಗಿ ಸರ್ವಸಮ್ಮತದಿಂದ ಆರಿಸಲಾಯಿತು

9. ಈ ಕೆಳಗಿನ ಡೈರೆಕ್ಟರುಗಳನ್ನು ಸುಪರ್‌ವಿಜನ್ ಬೋರ್ಡಿನ ಡೈರೆಕ್ಟರುಗಳಾಗಿ ಜುನಾಯಿಸಲಾಯಿತು.

ಮೆ. ಗಳಾದ (1) ಪಿ. ಐ. ಬೆಳ್ಯಪ್ಪನವರು (ಪ್ರೆಸಿಡೆಂಟರು), (2) ಯಂ. ಯಂ. ಬೆಳ್ಯಪ್ಪನವರು (ಗೌರವ ಕಾರ್ಯದರ್ಶಿ), (3) ಐ. ಪಿ ಕಾರ್ಯಪ್ಪನವರು, (4) ಸಿ. ಜಿ. ಮುದ್ದಮ್ಮಯ್ಯನವರು, (5) ಯು. ಯಂ. ಮೂಜಯ್ಯನವರು, (6) ರಾ ಸಾ. ಪಿ. ಎ ಚಂಗಪ್ಪನವರು. (7) ಕೆ. ಸಿ. ಕರುಂಬಯ್ಯನವರು.

10. ಈ ಕೆಳಗಿನ ಮಹನೀಯರುಗಳನ್ನು ಸವ್ರತ್ ಇಂಡಿಯಾ ಇನ್ಶೂರೆನ್ಸ್ ಸೊಸೈಟಿಯ ಕೊಡಗು ಲೋಕಲ್ ಬೋರ್ಡಿಗೆ ಡೈರೆಕ್ಟರುಗಳಾಗಿ ಜುನಾಯಿಸಲಾಯಿತು.

ಮೆ. ಗಳಾದ (1) ಐ. ಸಿ. ಸುಬ್ಬಯ್ಯನವರು, (2) ಯಂ. ಯಂ. ಬೆಳ್ಯಪ್ಪನವರು (ಕನ್‌ವೀನರ್), (3) ಟಿ. ಬಿ. ಮೇದಪ್ಪನವರು ಯಂ. ಬಿ. ಬಿ. ಯಸ್.

11. ಈ ಕೆಳಗಿನ ಡೈರೆಕ್ಟರುಗಳನ್ನು ಡೆಟ್ ಕನ್ಸಿಲಿಯೇಶನ್ ಬೋರ್ಡಿನ ಡೈರೆಕ್ಟರುಗಳಾಗಿ ಜುನಾಯಿಸಲಾಯಿತು.

ಮೆ ಗಳಾದ (1) ಐ. ಪಿ. ಕಾರ್ಯಪ್ಪನವರು, (2) ಯನ್. ಬಿ ಸೋಮಯ್ಯನವರು, (3) ಜ ಎ. ಯಂ. ಮೂಜಯ್ಯನವರು, (4) ಬಿ ಎ. ಬೆಳ್ಯಪ್ಪನವರು, (5) ಜಮ್ಮಡ ಮೂದಪ್ಪನವರು, (6) ಪಿ. ಐ. ಬೆಳ್ಯಪ್ಪನವರು (ಪ್ರೆಸಿಡೆಂಟ್), (7) ಯಂ. ಯಂ. ಬೆಳ್ಯಪ್ಪನವರು (ಸೆಕ್ರೆಟರಿ).

12. ಬ್ಯಾಂಕಿನ ಮೆಂಬರುಗಳಾಗಲು ಮಿಸೆಸ್ ಸಿ. ಐಯ್ಯಂಣನವರು, ಅಕ್ಕೂರು ಸಂಘ ಮತ್ತು ಮುಸ್ಲೀಂ ಯಂಗ್ ಮೆನ್ಸ್ ಸಂಘದವರು ಅರ್ಜಿ ಬರಕೊಂಡ ಮೇರೆ ಈ ವರುಗಳನ್ನು ಮೆಂಬರುಗಳಾಗಿ ಸೇರಿಸಿಕೊಳ್ಳುವಂತೆ ತೀರ್ಮಾನಿಸಲಾಯಿತು.

14 ಬ್ಯಾಂಕಿನ ಕಾಮನ್‌ಗುಡ್ ಫಂಡಿನಿಂದ ಉಚಿತಾರ್ಥವಾಗಿ ಧನಸಹಾಯ ಮಾಡಬೇಕೆಂದು ದಕ್ಷಿಣಕೊಡಗು ದನಗಳ ಪ್ರದರ್ಶನದ ಕಮಿಟಿಯ ಪ್ರೆಸಿಡೆಂಟರು ಪತ್ರ ಬರಕೊಂಡ ಮೇರೆ ರೂ. 10/— ಮಂಜೂರು ಮಾಡಬಹುದೆಂದು ತೀರ್ಮಾನಿಸಲಾಯಿತು.

15. ಒಬ್ಬ ಮಹನೀಯರು ತನ್ನ ಡಿಪಾಜಿಟ್ಟು ಹಣದ ಪೈಕಿ ಸ್ವಲ್ಪ ಹಣವನ್ನು ವಾಪಸು ಕೊಡಬೇಕೆಂದು ಪತ್ರ ಬರಕೊಂಡ ಮೇರೆ ಬಡ್ಡಿ ಇಲ್ಲದೆ ಆ ಹಣವನ್ನು ವಾಪಸು ಕೊಡಬಹುದೆಂದು ತೀರ್ಮಾನಿಸಲಾಯಿತು.

16. ಮೆ. ಗಳಾದ ಚೊಟ್ಟೆಕಾಳಪಂಡ ದೇವಯ್ಯನವರು, ಕುಂಡಚ್ಚಿರ ಮಂದಂಣನವರು ಮತ್ತು ಇನ್ನಿತರರು ತಮ್ಮ ಮನೆಗಳು ಬಿದ್ದು ನಷ್ಟವಾದ ಕಾರಣ ಬ್ಯಾಂಕಿನ ಕಾಮನ್‌ಗುಡ್ ಫಂಡಿನಿಂದ ದ್ರವ್ಯ ಸಹಾಯ ಮಾಡಬೇಕೆಂದು ಬರಕೊಂಡ ಅರ್ಜಿಗಳನ್ನು ಯೂನಿಯನ್ನಿನವರ ಆಲೋಚನೆಗೆ ಕಳುಸುವಂತೆ ತೀರ್ಮಾನಿಸಲಾಯಿತು.

17. ಬ್ಯಾಂಕಿನ ಹೆಡ್ ಕ್ಲಾರ್ಕರು ಸೆಕ್ಯುರಿಟಿ ಕಟ್ಟುವ ವಿಷಯದಲ್ಲಿ ಬರಕೊಂಡ ಅರ್ಜಿ ಮೇರೆ ಅವರ ಕೋರಿಕೆಯನ್ನು ನೆರವೇರಿಸಲಾಯಿತು.

18. 'ಜನ್ಮಭೂಮಿ' ಪತ್ರಿಕೆಯ ತಾ. 15—1—'36ರ ಅಗ್ರ ಲೇಖನದಲ್ಲಿ ಬ್ಯಾಂಕಿನ ವಿಷಯ ಕೆಲವು ತಪ್ಪು ಅಭಿಪ್ರಾಯಗಳನ್ನೂ, ಆರೋಪಣೆಯನ್ನೂ ಪ್ರಕಟಿಸಿದ್ದಕ್ಕಾಗಿ ಅದನ್ನು ತಿದ್ದಿ ಬರುವ ಪತ್ರಿಕೆಯಲ್ಲು ಪ್ರಕಟಿಸುವಂತೆ ಅದರ ಸಂಪಾದಕರಾದ ಮೆ. ಒಲ್ಲಚಂಡ ಬೆಳ್ಯಪ್ಪನವರನ್ನು ಕೇಳಿಕೊಳ್ಳುವಂತೆ ತೀರ್ಮಾನಿಸಲಾಯಿತು.

19. ಬ್ಯಾಂಕಿನ ಡೈರೆಕ್ಟರುಗಳು ವಿಂಟಿಂಗಿಗೆ ಹಾಜರಾಗಬೇಕಾಗಿ ಒಬ್ಬರಿಗೆ ಚಾರ್ಜು ವರ್ತಮಾನ ಮುಂದೆ ಹೊಂದಿಕೊಳ್ಳತಕ್ಕದ್ದೆಂತಲೂ, ಅವರು ತಾ. 1—1—'35ರಿಂದ ತಾ. 1—1—'36ರ ವರೆಗೆ ಹೊಂದಿಕೊಂಡ ಸೆಟ್ಟಿಂಗ್ ಫೀಸ್ ಮತ್ತು ಡೈಲಿ ಎಲೋವೆನ್ಸ್‌ನ್ನು ವಾಪಸು ಮಾಡಬೇಕೆಂತಲೂ ಮೆ. ಪಿ. ಬಿ. ತಮ್ಮಯ್ಯನವರು ತಂದ ತರಾವು ಬಹುಮತದಿಂದ ಪಾಸಾಯಿತು.

20 ಡೈರೆಕ್ಟರುಗಳು ಹತ್ತಿರದ ಮಾರ್ಗವಾಗಿ ಬಸ್ಸಿನಲ್ಲಿ ಪ್ರಯಾಣ ಮಾಡಿ ಅದಕ್ಕೆ ತಗಲುವ ಅಂದರೆ ಮೈಲಿಗೆ ಒಂದಾಣೆಯಂತೆ ಒಸ್ಸು ಚಾರ್ಜನ್ನು ಕೊಡಬಹುದೆಂದು ಮೆ. ಪಿ ಜಿ ಮುದ್ದಮ್ಮಯ್ಯನವರು ತಂದ ತರಾವು ಸರ್ವ ಸಮ್ಮತದಿಂದ ಪಾಸಾಯಿತು.

21. ಇನ್ನು ಮುಂದೆ ಡೈರೆಕ್ಟರುಗಳ ಬೋರ್ಡಿನ ವಿಂಟಿಂಗನ್ನು ಮಧ್ಯಾಹ್ನದ ನಂತರ 3 ಗಂಟೆಗೆ ಬರಕಾಸ್ತು ಮಾಡಬೇಕೆಂದು ಮೆ. ಕೆ. ಕೆ. ಬೆಳ್ಯಪ್ಪನವರು ತಂದ ತರಾವನ್ನು ಅವರು ವಾಪಸು ತೆಗೆದುಕೊಂಡದ್ದರಿಂದ ಹೆಚ್ಚಿಗೆ ಚರ್ಚಿಸಲಿಲ್ಲ.

ಬ್ಯಾಂಕಿನ ಗೌರವ ಸೆಕ್ರೆಟರಿ ಮೆ. ಯಂ ಯಂ. ಬೆಳ್ಯಪ್ಪನವರು ತಾ. 16—2—'36ರಲ್ಲು ಜರಗುವ ಮರಿನಾಡು ಸಹಕಾರಿ ಜನರಲ್ ವಿಂಟಿಂಗಿಗೆ ಹೋಗಲು ಅನುಮತಿ ಕೊಡಲಾಯಿತು.

ಮಡಿಕೇರಿ, ಪಿ. ಐ. ಬೆಳ್ಯಪ್ಪ,
ತಾ. 25—1—1936. (ಅಧ್ಯಕ್ಷರು.)

ನೋಟೀಸು.

ಈ ಕೆಳಗಿನ ಮಹನೀಯರು "ಕೊಡಗು" ಪತ್ರಿಕೆಯ ಚಂದಾ ಹಣವನ್ನು ವಸೂಲ್ಮಾಡಲು ಒಪ್ಪಿಕೊಂಡದ್ದರಿಂದ, ಅವರನ್ನು ಏಜೆಂಟರುಗಳಾಗಿ ನೇಮಿಸಿ ಅವರಿಗೆ ನಮ್ಮ ರಶೀತಿ ಪುಸ್ತಕಗಳು ಕೊಡಲಾಗಿವೆ. ಕೆಳಗಿನ ಸಬ್ ಏಜೆಂಟರುಗಳಿಗೆ ಏಜೆಂಟ್‌ರವರ ಜವಾಬ್ದಾರಿಕೆ ಮೇಲೆ ರಶೀತಿ ಪುಸ್ತಕಗಳು ಕೊಡಲಾಗಿವೆ. ದಯವಿಟ್ಟು ಚಂದಾದಾರರೆಲ್ಲರೂ ಅವರಿಗೆ ಅನುಕೂಲವಿರುವ ಸ್ಥಳದಲ್ಲಿ ತಮ್ಮ ಚಂದಾವನ್ನು ಪಾವತಿ ಮಾಡಿ ರಶೀತಿ ಪಡೆಯಬೇಕಾಗಿ ಕೋರಿಕೆ.

ಸಬ್ ಏಜೆಂಟರುಗಳು.

ವಿರಾಜಪೇಟೆ—ಮೆ. ಮಂಡೇಪಂಡ ಸೋಮೆಯ್ಯನವರು,
ಅಮ್ಮತ್ತಿ—ಸಿದ್ದಾಪುರ—ಮೆ. ಚಂಡ ಮೂದಪ್ಪನವರು,
ಪೊನ್ನಂಪೇಟೆನಾಡು—ಮೆ. ಪಿ. ಜಿ. ಮುದ್ದಮ್ಮೆಯ್ಯನವರು
ಹುದಿಕೇರಿ & ತಿತಿಮತ್ತಿ—ಮೆ. ಜಿ. ಮೂದಮ್ಮೆಯ್ಯನವರು
ಸುಂಟಿಕೊಪ್ಪ—ಮೆ. ಅಪ್ಪಚಟ್ಟೋಳಂಡ ಮೂಚೈಯ್ಯನವರು,
ಸೋಮವಾರಪೇಟೆ—ಮೆ. ಕೆ. ಮೊಗಪ್ಪನವರು
ನಾಪೋಕ್ಲು—ಮೆ. ಬೆಳ್ಳಿಯಪಂಡ ಯಂ, ಪೂಣಚ್ಚನವರು,
(ನಾಪೋಕ್ಲು ಸ್ಟೋರ್ಸ್)

ಸೂಚನೆ:—ಪ್ರಿಂಟು ಆದ ರಶೀತಿ ಹೊಂದಿಕೊಳ್ಳದೆ ಯಾರೂ ಚಂದಾ ಕೊಡಬಾರದಾಗಿ ಈ ಮೂಲಕ ತಿಳಿಸಲಾಗಿದೆ.

ಮೇನೇಜರ್.
"ಕೊಡಗು" ಲಿಮಿಟೆಡ್,
ಮಡಿಕೇರಿ.

ಡಾಕ್ಟರ್ ಮೋತ್ಯುಸ್ ಎಬ್ರಹಾಮ್.
ದಂತ ವೈದ್ಯರು.
ಗಿ. ತಾಂಜಲಿ ಬಂಗ್ಲೆ.
(ಪೋಸ್ಟಾಫೀಸು ಎದುರುಗಡೆ.)

ಸಕಲ ಹಲ್ಲು ನೋವುಗಳನ್ನು ಶೀಘ್ರವಾಗಿ ಗುಣಪಡಿಸುವರ
ು, ಸುಂದರವಾದ ಕೃತ್ರಿಮ ಹಲ್ಲುಗಳನ್ನು ಮನ ಒಪ್ಪುವಂತೆ ಕ
ವರು. ಒಮ್ಮೆ ಪರೀಕ್ಷಿಸಿದಲ್ಲು ತಿಳಿಯುವುದು. [52—15]

೪೦ ವರ್ಷಗಳಿಂದ ಅನುಭವಪಟು ಪ್ರಖ್ಯಾತಿ
ಹೊಂದಿದ

ಕರ್ಕಂಪೌಡರ್ ೧೨೮

ಜ್ವರದ ಗುಳಿಗೆಗಳು.

ಜಳಿಜ್ವರ, ಚಾತುರ್ಥೆ ಜ್ವರ, ದಿನಬಿಟ್ಟು ಬರುವ ಜ್ವರ, ಮಲೇರಿಯಾ ಜ್ವರ ಇತ್ಯಾದಿ ಜ್ವರಗಳ ಮೇಲೆ ರಾಮ ಬಾಣದಂತೆ ಇವೆ. ಬಾಟ್ಲಿಗೆ ರೂ. ೧. ಟಪಾ. ಖ. ಪ. ಆಣೆ. ಜರೂರು ತರಿಸಿಕೊಳ್ಳಿ.

ಗಣೇಶ ರಾಮಚಂದ್ರ ಕಕ್ಕೆ,
(25—17) ಮುತ್ತು ಕಂಪೆನಿ,
ಗಿರಗಾಂವ, ಮುಂಬಯಿ.

SHIROMANI NARAYANACHARYA
Choukhamba Benares City.

THIS MAN OUR CUSTOMER

ಶಾಸ್ತ್ರಿಗಳೇ, ಪೂರ್ವಿಕರು ಆರೋಗ್ಯರೇ ಅಥವ ಈಗಿನವರೇ? ರಾಮಣ್ಣಯ್ಯನವರೇ, ಪೂರ್ವಿಕರ ಆರೋಗ್ಯವೇ ನಿಜವಾದ ಆರೋಗ್ಯ. ಅದಕ್ಕೆ ಕಾರಣವೇನು? ಅವರು ರುದ್ರಾಕ್ಷಿಯನ್ನು ಬಿಡದೆ ಯಾವಾಗಲೂ ಧಾರಣೆಮಾಡುತ್ತ ಇದ್ದರು. ಅದರಿಂದ ಏನು ಫಲ? ಅದನ್ನು ಧರಿಸಿದರೆ ಜೀರ್ಣಶಕ್ತಿ, ಬುದ್ಧಿಶಕ್ತಿ, ವಿದ್ಯಾಭಿವೃದ್ಧಿ, ವೀರ್ಯವೃದ್ಧಿ ಸಂಪತ್ತು, ಕೀರ್ತಿ ಇವುಗಳೆಲ್ಲಾ ಆಗುವ ಹಾಗಾದರೆ ನಮಗೆ ಅಂತಹ ರುದ್ರಾಕ್ಷಿ ಎಲ್ಲಿ ದೊರೆಯುವುದು? ಅದು ಲೋಕಪ್ರಸಿದ್ಧಿ ಕೊಂದಿದೆ ನಮ್ಮ ಕಾಶೀ ಚೌಖಂಬಾ ಶಿರೋಮಣೀ ನಾರಾಯಣಾಚಾರ್ಯರಲ್ಲಿಯೇ ಯೋಗ್ಯವಾದ ಕ್ರಯಕ್ಕೆ ಉತ್ತಮ ತರದ ರುದ್ರಾಕ್ಷೀ ಸಿಕ್ಕುವುದು.

ಸಣ್ಣ ಆಡ್ಡೆ ಪ್ರಮಾಣದ ಕಂಠಿಸರ 1ಕ್ಕೆ ಆಣೆ 1 ರಿಂದ ರೂ. 25ರ ವರೆಗೆ. 108 ರುದ್ರಾಕ್ಷಿಗಳುಳ್ಳ ಸರ 1ಕ್ಕೆ ಆಣೆ 3ರಿಂದ ರೂ. 25ರ ವರೆಗೆ. ಗೌರೀಶಂಕರ ರುದ್ರಾಕ್ಷಿ 1ಕ್ಕೆ ರೂ. 3ರಿಂದ ರೂ. 50ರ ವರೆಗೆ. ಮತ್ತು 3—4—5—6—7—8 ಮುಖಗಳ ಕಾಳು 1ಕ್ಕೆ ಆಣೆ 4 ರಿಂದ ರೂ. 10; ಮತ್ತು 9—10—11 ಮುಖಗಳುಳ್ಳ ಕಾಳು 1ಕ್ಕೆ ರೂ. 1ರಿಂದ 30ರ ವರೆಗೆ. 12—13—14 ಮುಖದ ಕಾಳು 1ಕ್ಕೆ ರೂ 4ರಿಂದ 100ರ ವರೆಗೆ. ಸಣ್ಣ ರುದ್ರಾಕ್ಷೀ ಅವರೆ ಕಾಳಿಗಿಂತ ಸಣ್ಣದಾಗುತ್ತ ಕ್ರಯ ಜಾಸ್ತಿ. ದೊಡ್ಡ ರುದ್ರಾಕ್ಷೀ ಕಡಲೆಕಾಯಿಗಿಂತ ದೊಡ್ಡದಾಗುತ್ತ ಕ್ರಯ ಜಾಸ್ತಿ ಆಗುವುದು. (ನಿಮಗೆ ಕೆಟಲಾಗಿಗೆ ಬರೆದರೆ ಇನಾಮಾಗಿ ಕಳುಹಿಸುತ್ತೇವೆ. 1 ಆಣೆ ಸ್ಟಾಂಪು ಕಳುಹಿಸಿದರೆ 3 ಇನಾಮುಗಳು—1 ವಿಶ್ವೇಶ್ವರ ಪಟ, 1 ಕಾಶೀ ನಕ್ಷೆ, 1 ಕಾಶಿ ಪಿತ್ತಂಬರ ಕೆಟಲಾಗಿನೊಡನೆ 3 ಇನಾಮುಗಳು.)

ಶಿರೋಮಣಿ ನಾರಾಯಣಾಚಾರ್ಯ,
52—22 ಚೌಖಾಬಾ ಬೆನಾರಿಸ್, (ಕಾಶೀ)

ಮೂರಾಟಕ್ಕೆ ಸಿದ್ಧವಾಗಿವೆ.

ಸಹಕಾರ ಸಂಘಗಳ ಮತ್ತು ದವಸ ಭಂಡಾರಗಳ ಪ್ರತಿಯೊಬ್ಬ ಮೆಂಬರನಲ್ಲಿಯೂ ಇರಬೇಕಾದ ಅಮಿತ ಜವಾಬ್ದಾರಿ ಪರಸ್ಪರ ಸಹಾಯಕ ಸಂಘದ ಮತ್ತು ದವಸ ಭಂಡಾರದ ಉಪನಿಬಂಧನೆಗಳೂ, ಪಾಸ್ ಬುಕ್ಕುಗಳೂ, ಎಲ್ಲಾ ಸಹಕಾರಿ ಸಂಘಗಳ ಮತ್ತು ದವಸ ಭಂಡಾರಗಳ ಕೆಲಸಗಳನ್ನು ಕ್ರಮವಾಗಿ ನಡಿಸಲು ಅತ್ಯವಶ್ಯವಾಗಿರುವ, ರೂಲ್ಸಿಗನುಸಾರವಾಗಿ ತಯಾರಿಸಲ್ಪಟ್ಟಿರುವ ದಾವಾ ಫಾರಮುಗಳೂ, ಖರಾರು ಫಾರಮುಗಳೂ, ಜಪ್ತಿ ಮಂಜೂರಾತಿ ಫಾರಮುಗಳೂ, ಕುಟುಂಬಸ್ಥರ ಒಪ್ಪಿಗೆ ಫಾರಮುಗಳೂ, ಜಾಮೀನು ಖರಾರು ಫಾರಮುಗಳೂ, ಸೆಕ್ಯೂರ್ ಕೀಪರ್ ಖರಾರು ಫಾರಮುಗಳೂ ಓವಜರ್ ಪುಸ್ತಕಗಳೂ, ರಶೀತಿ ಪುಸ್ತಕಗಳೂ, ಜಮಾ ಖರ್ಚಿನ ರಿಜಸ್ಟರ್ ಪುಸ್ತಕಗಳೂ, ಮತ್ತು ಚೆಕ್ ಪುಸ್ತಕಗಳೂ ನಮ್ಮ ಕಡಿಮೆ ಕ್ರಯದಲ್ಲಿ ದೊರೆಯುತ್ತವೆ. ಮುದ್ದು ಬಂಲಕ್ಕೆ ಬಗದವರು ಆರ್ಡರು ಕೊಟ್ಟಲ್ಲಿ ವಿ. ಪಿ. ಮೂಲಕ ಕಳುಹಿಸಲಾಗುವುದು.

ಮೇನೇಜರ್
"ಕೊಡಗು" ಲಿಮಿಟೆಡ್,
ಮಡಿಕೇರಿ.

ಗುಂಡು ಹೊಡೆಯುವ ಕ್ರಮಗಳು.
ಉಪಯುಕ್ತ ಸೂಚನೆಗಳು.

ಜಿಜ್ಞಾಸುಗಳಿಗೆ:—
ನಮ್ಮ ಕೋವಿ ಮತ್ತು ತೋಟಾಗಳು ಶಿಕ್ಷಕ (Our arms and ammunition GUIDE 3) ಇದರಲ್ಲಿ ಗುಂಡು ಹೊಡೆಯುವ ಸೂತನ ವಿಧಾನಗಳ ವಿಷಯ ಅತೀ ಉಪಯುಕ್ತ ಸೂಚನೆಗಳಿವೆ.



Goolamhusain Allibhoy & Sons, Ltd.,
26—17 210, Abdulrehman Street, BOMBAY 3.

ಧಾತುಪುಷ್ಪಿ ಲೇಹ

ಸ್ವರ್ಣ ಕಲ್ಪದ ಸೌಲಾಮಿಶ್ರಿ ಮಿಶ್ರಿತ.

ಇದು ಒಲಹೀನತೆಗೆ ಅಮೃತವಾದ ಶಕ್ತಿವರ್ಧಕ ರಸಾಯನ. ಸ್ವಪ್ನಾವಸ್ಥೆ ಶರೀರದ ಉಷ್ಣತೆ, ಧಾತು ಸೂತ್ರದೌಡನೆ ಹೊರ ಹೋಗುವಿಕೆ, ಸೊಂಟ ನೋವು, ಕೈಕಾಲು ಬಚ್ಚುವುದು, ಮಲಬದ್ಧತೆ, ಒಳಜ್ವರ, ಆಶಕ್ತತೆ, ಇವುಗಳನ್ನೆಲ್ಲಾ ಹೋಗಲಾಡಿಸಿ ಹಸಿವನ್ನೂ, ಜೀರ್ಣ ಶಕ್ತಿಯನ್ನೂ ಹೆಚ್ಚಿಸುವುದು ಅದಲ್ಲದೆ ನರಗಳ ದೌರ್ಬಲ್ಯವನ್ನು ಹೋಗಲಾಡಿಸಿ ವೀರ್ಯ ವೃದ್ಧಿಯ, ಸಂಭೋಗ ಶಕ್ತಿಯನ್ನು ಮತ್ತು ಜ್ಞಾಪಕ ಶಕ್ತಿಯನ್ನು ವೃದ್ಧಿ ಮಾಡುವುದು. ಶರೀರಕ್ಕೆ ಆರೋಗ್ಯವನ್ನೂ, ದಿವ್ಯ ಶಕ್ತಿಯನ್ನೂ, ಕಾಂತಿಯನ್ನೂ, ಉಂಟುಮಾಡುವುದು.
ಡಬ್ಬಿ 1ರ ರೂ. 2—8—0. 3ಕ್ಕೆ ರೂ. 7—0—0

ಮಲೇರಿಯಾ ನಿವಾರಿಣಿ.

ಮಲಬದ್ಧತೆ, ಜಳಿಜ್ವರ, ದಿನಬಿಟ್ಟು ಬರುವ ಜ್ವರ, ಚಾತುರ್ಥಿಕ ಜ್ವರ, ಗೆಡ್ಡ ಬಂದ ಜ್ವರ, ಪುರಾಣ ಜ್ವರ, ವಾಯಿದೆ ಜ್ವರ, ಯಿನುಪ್ಲುಯೆಂಜಾ, ನಿಮೋನಿಯಾ ಜ್ವರ, ಕಫ ಜ್ವರ, ಪಳಜ್ವರ, ಇವುಗಳನ್ನೆಲ್ಲಾ ಹೋಗಲಾಡಿಸಿ ಶಕ್ತಿಯನ್ನುಂಟುಮಾಡುವದು.
ಬಾಟ್ಲಿ 1ರ ರೂ. 1—8—0. ಸಣ್ಣ ಬಾಟ್ಲಿಗೆ 0—13—0.

ಅಶೋಕಾರಿಷ್ಟ ಮತ್ತು ಮೂತ್ರ

ಇದು ಸ್ತ್ರೀಯರಿಗೆ ಉತ್ತಮವಾದ ಟಾನಿಕ್. ಹುತುಶೂಲೆ, ಕ್ರಮತಪ್ಪಿ ಮುಟ್ಟಾಗುವಿಕೆ, ಅತಿರೇಕ ಅಥವಾ ಅತ್ಯಲ್ಪ ಸ್ರಾವ, ಮುಟ್ಟು ಸಂಪೂರ್ಣವಾಗಿ ನಿಲ್ಲುವುದು, ಬಿಳುಪು ಹೋಗುವುದು, ಬಂಜೆತನ ನಡುವಿನ ನೋವು, ರಕ್ತಹೀನತೆ, ಒಳಜ್ವರ, ತಲೆನೋವು, ಮಲಬದ್ಧತೆ, ಕೈಕಾಲು ಬಚ್ಚುವದು, ಅಕಾಲದಲ್ಲಿ ಗರ್ಭಪತನವಾಗುವಿಕೆ ಮತ್ತು ಸ್ತ್ರೀಯರಿಗೆ ಸಂಬಂಧಪಟ್ಟ ಇತರ ಎಲ್ಲಾ ದೋಷಗಳನ್ನು ಹೋಗಲಾಡಿಸಿ ಸೌಂದರ್ಯವನ್ನೂ ತೇಜಸ್ಸನ್ನೂ ಉಂಟುಮಾಡುತ್ತದೆ. ಬಾಟ್ಲಿ 1ರ ರೂ. 2—4—0

ರಕ್ತಶೋಧಕ.

ದೇಹದೊಳಗಿನ ರಕ್ತವು ಕೆಟ್ಟುಹೋದ ಪರಿಣಾಮದಿಂದ ಉಂಟಾಗುವ ಕುರು, ಕಜ್ಜಿ: ಮೈತುರಿಸುವಿಕೆ, ಕಲೆ, ವ್ರಣ, ಫರಂಗಿ ಸಂದು ಸಂಧಿ ನೋವು, ಮೇಹ, ವಾತ ಇವುಗಳ ಮೇಲೆ ದಿವ್ಯ ಔಷಧಿ.
ಬಾಟ್ಲಿ 1ರ ರೂ. 1—2—0, 3 ಬಾಟ್ಲಿಗಳಿಗೆ 3—4—0.

ಕೆಟಲಾಗಿಗೆ ಬರೆರಿ. ಕಾಯಿಲೆ ಸಂಗತಿ ಬರದಲ್ಲಿ ರೋಗಕ್ಕೆ ತಕ್ಕದಾದ ಔಷಧಿ ಚೀನಾಯಿಕ ರವಾನಿಸಬಹುದು.

ಎಂ. ಗಣಪಯ್ಯ ಎಂಡ್ ಸನ್ಸ್, ಆಯುರ್ವೇದಿಕ್ ಫಿಜಿಶಿಯೆನ್ಸ್. ರಥಬೀದಿ, ಮಂಗಳೂರು.
(1) ಎ. ಬಿ. ಕಾಮತ್, ಮಹದೇವಪೇಟೆ, ನುಡಿಕೇರಿ (ಕೊಡಗು).
(52—29) (2) ಎ. ಎಸ್. ಮಾಚಯ್ಯ, ಬಟ್ಟೆ ವ್ಯಾಪಾರಿ, ಸುಂಟಿಕೊಪ್ಪ.

GOVERNMENT SOAP FACTORY,
Bangalore.

ವಿಶ್ವಾಸಾರ್ಹತೆ.

ಅತ್ಯುತ್ತಮವಾದ ಟಾಯಿಲೆಟ್ ಸಾಬೂನಿನಲ್ಲಿ ಯಾವ ಯಾವ ಗುಣಗಳು ಅವಶ್ಯಕವೆಂದು ನೀವು ತಿಳಿದಿರುತ್ತೀರೋ ಆ ಗುಣಗಳೆಲ್ಲ
ಮೈಸೂರು ಸ್ಯಾಂಡಲ್ ಸಾಬೂನಿನಲ್ಲಿವೆ.

—ನಾವು ನಿಮಗೆ ಭರವಸೆಯನ್ನೀಯುತ್ತೇವೆ
ಎಲ್ಲಾ ಕಡೆಯಲ್ಲಿಯೂ ದೊರೆಯುತ್ತವೆ.
ಗವರ್ನಮೆಂಟ್ ಸೋಪ್ ಫ್ಯಾಕ್ಟರಿ.
52—48 ಬೆಂಗಳೂರು.

ಪ್ರಕಟಣೆ.

ಕೊಡಗು ಸೆಂಟ್ರಲ್ ಸಹಕಾರಿ ಬ್ಯಾಂಕ್, ಲಿಮಿಟೆಡ್, ಕೋ-ಆಪರೇಟಿವ್ ಸೊಸೈಟೀಸ್ ಆಕ್ಟ್ ಪ್ರಕಾರ ರಿಜಿಸ್ಟರಾಗಿದೆ.

(ಸ್ಥಾಪಿತವಾದದ್ದು 1922ರಲ್ಲಿ)

	ರೂ.
ಶೇರ್ ಬಂಡವಾಳ	50,000— 0—0
ವಸೂಲಾದ ಶೇರ್ ಮೊಬಲಗು	36,990— 0—0
ಜಮೂಬಂದ ಠೇವಣಾತಿ	2,58,909—6—10
ವಸೂಲಾದ ಕ್ಷೇಮನಿಧಿ	1,03,541— 4—0

ಈ ಬ್ಯಾಂಕಿನಿಂದ ಕೊಡಗು ದೇಶದ ಸಹಕಾರಿ ಸಂಘಗಳಿಗೇನೇ ಹೆಚ್ಚಾಗಿ ಸಾಲಕೊಡತಕ್ಕದ್ದು.

ಒಂದು ವರ್ಷ ವಾಯಿದೆ ಅಥವ ಹೆಚ್ಚಿನ ವಾಯಿದೆಯ ಠೇವಣಾತಿಗಳಿಗೆ ಶೇಕಡ ಸಾಲಿಯಾನ ರೂ 4-8-0ರ ದರದಲ್ಲಿಯೂ ಒಂದು ವರ್ಷದ ಠೇವಣಾತಿಗಳಿಗೆ ಶೇಕಡ ಸಾಲಿಯಾನ 4ರ ದರದಲ್ಲಿಯೂ ಬಡ್ಡಿ ದೊರೆಯುತ್ತೆ.

ವರ್ಷಕ್ಕೊಂದಾವರ್ತಿ ಕೊಆಪರೇಟಿವ್ ರಿಜಿಸ್ಟ್ರಾರವರು ಲೆಕ್ಕ ಆಡಿಟುಮಾಯಿಸಿಕೆ ಮಾಡುತ್ತಾರೆ.

ಪ್ರೆಸಿಡೆಂಟರು,	ಮ್ಯಾನೇಜರ್
ಪಂದ್ಯಂಡ ಐ. ಬೆಳ್ಯಪ್ಪನವರು.	ರಾ. ಸಾ. ಪಾಂಡಂಡ ಚಂಗಪ್ಪನವರು,

ಸೆಕ್ರೆಟರಿ

ಮನೆಯಪ್ಪಂಡ ಬೆಳ್ಯಪ್ಪನವರು.

ತಾರೀಖು 1—11—1935.

ಭಾರತದ ಮುಂದಿನ ಜನಾಂಗದ ಆರೋಗ್ಯ ಮತ್ತು ಕ್ಷೇಮ ವರ್ಧನೆಯು ಇಂದಿನ ಅನೇಕ ರಾಜಕೀಯ ಮತ್ತು ಸಾಮಾಜಿಕ ಮುಂದಾಳುಗಳ ದೃಷ್ಟಿಯಲ್ಲಿರುವ ಒಂದು ದೊಡ್ಡ ಸಮಸ್ಯೆಯಾಗಿರುತ್ತದೆ. ತಮ್ಮ ಮಕ್ಕಳ ದೇಹವು ಪುಷ್ಟಿಯೊಗಿಯೂ ಸುದೃಢವಾಗಿಯೂ ಇರಲಿಕ್ಕೆ ಬೇಕಾದ ಒಂದು ಅಪೂರ್ವವಾದ ಸಂಜೀವಿನಿಯನ್ನು ಎಲ್ಲರೂ ತಿಳಿದದ್ದಾಗಿದ್ದರೆ ಈ ವಿಚಾರವು ಇಷ್ಟು ಕಠಿಣತರವಾದದ್ದಾಗಿರುತ್ತಿದ್ದಿಲ್ಲ. ಈ ಸಂಜೀವಿನಿಯಂತಿರುವ ಔಷಧವನ್ನು ಹೆಚ್ಚು ಸಫಲತೆಯಿಂದ ಅನೇಕರು ಭಾರತದ ಉದ್ದಗಲಕ್ಕೂ ಕಳೆದ 50 ವರ್ಷಗಳಿಂದ ಉಪಯೋಸುತ್ತಲಿರುವರು ಮಗುವು ಹೆಚ್ಚು ಕೃಶವಾಗಿ, ನಿರ್ಬಲತೆಯಿಂದ ಕೂಡಿ ಹಾಲನ್ನು ಸಹ ಜೀರ್ಣಿಸಿಕೊಳ್ಳಲಶಕ್ಯವಾಗಿ, ಆಗಿಂದಾಗ್ಗೆ ಶೀತ, ಕೆಮ್ಮು ಮೊದಲಾದ ರೋಗಗಳಿಗೀಡಾಗಿರುದಾದರೆ ಒಡನೆ ಪ್ರಸಿದ್ಧಿ ಹೊಂದಿರುವ

ಡೋಂಗರೆ ಬಾಲಾಮೃತವನ್ನು

ಕೊಡಬೇಕು. ಡೋಂಗರೆ ಬಾಲಾಮೃತವು ಒಂದು ಟಾನಿಕ್. ಎಲ್ಲೆಡೆಗಳಲ್ಲೂ ದೊರೆಯುವುದು.

ಪ್ರೊಪ್ರೈಯಟರ್ಸ್—

ಕ. ಟಿ. ಡೋಂಗರೆ ಕಂಪೆನಿ,

(52—48) ಗಿರಿಗಾಂವ್, ಬೊಂಬಾಯಿ.

ಷಿಕಾರಿಗೆ ಬೇಕಾಗುವ ನಾನಾ ವಿಧದ



ಗೂವಿ, ರೈಫಲು, ರಿವಾಲ್ವರು, ತೋಟಾಗಳು, ಬೇಟೆಯಾಡಲು ಮತ್ತು ವಿೂನು ಹಿಡಿಯಲು ಅವಶ್ಯಕವಾದ ಎಲ್ಲಾ ಸಲಕರಣಗಳ ವಿಶೇಷ ಅನುಭವವುಳ್ಳವರು.

ಕೆಟಲಾಗು ಉಚಿತ.] [CURRENT CATALOGUE FREE.

The Bombay Armoury,

329—331, Abdul Rehman Street,

BOMBAY, 3.

26—23

ಪಂಡಿತ ಜವಾಹೀರಲಾಲ್ ನೆಹರೂ ಬಂದಾಗ್ಗೆ ಹುಬ್ಬಳ್ಳಿ ಪ್ರದರ್ಶನದಲ್ಲಿ ಸುವರ್ಣ ಪದಕವನ್ನು ಪಡೆದ,

ಒಂದೇ ಸಮನಾಗಿ ಮೂವತ್ತೈದು ವರ್ಷದ ಅನುಭವದಿಂದ ಹಿಂದುಸ್ಥಾನದ ಸಾವಿರಾರು ಜನರಿಂದ ವರ್ಣಿಸಲ್ಪಟ್ಟ ಆಯುರ್ವೇದೋಕ್ತ ತಾಜಾ ಮತ್ತು ಪೌಷ್ಟಿಕ ವನಸ್ಪತಿಗಳಿಂದ ತಯಾರಿಸಿರುವ ಮತ್ತು ಇದರ ಗುಣಕ್ಕಾಗಿ ಅನೇಕ ಸರ್ಟಿಫಿಕೇಟುಗಳು ಮತ್ತು ಭಂಗಾರದ ಮೆಡಲುಗಳನ್ನು ಪಡೆದು ಪರದೇಶದಲ್ಲಿ ಧಾರಾಳವಾಗಿ ಖರ್ಚಾಗುವ

ಶಕ್ತಿವರ್ಧಕ ಉತ್ತಮ ತರಗತಿಯ ಟಾನಿಕ್

ದ್ರಾಕ್ಷಾಮೃತ

ಅನೇಕ ವನಸ್ಪತಿ ರಸಾರ್ಕಗಳಿಂದ ಶಾಸ್ತ್ರೋಕ್ತವಾಗಿ ಸ್ವದೇಶೀ ಯಂತ್ರೋಪಕರಣದಿಂದ ತಯಾರಿಸಿದ ಮಧುರಾಮೃತ.

ಇದರ ಸೇವನೆಯಿಂದ ಉಷ್ಣ (ಗರಮಿ), ಧಾತುಸ್ರಾವ, ಸ್ವಪ್ನಾವಸ್ಥೆ, ಕೈಕಾಲು, ಕಣ್ಣೊಳಗೆ ಉರಿ, ಮಂಡೆಬೆದ್ದತೆ ಮುಂತಾದವು ಗುಣವಾಗುವದಲ್ಲದೆ ಜೀರ್ಣಶಕ್ತಿಯು ಹೆಚ್ಚಿ ದೇಹದಾರ್ಢ್ಯವುಂಟಾಗುವುದು. ಇದರಿಂದ ನಪುಂಸಕತ್ವವಿದ್ದಲ್ಲಿ ಅದು ಹೋಗಿ ವೀರ್ಯ ವೃದ್ಧಿಯೂಗುವದು. ಹೆಂಗಸರಿಗೂ. ಗಂಡಸರಿಗೂ ಇದು ಗುಣಕಾರಿ ಇದೆ. ಮುಟ್ಟಾಗದಿದ್ದರೆ ಮತ್ತು ಉಷ್ಣ (ಗರಮಿ) ರೋಗಗಳಿದ್ದರೆ ಅವೆಲ್ಲವೂ ಗುಣವಾಗಿ ಹೆಂಗಸರಿಗೆ ಸಂತತಿ ವೃದ್ಧಿಯೂಗುವದು. ಈ ಔಷಧದ 3 ಬಾಟ್ಲಿಗಳ ಸೇವನೆಯಿಂದ ಪೂರ್ಣ ಗುಣ ಆಗುತ್ತದೆ. 1 ಬಾಟ್ಲಿಯನ್ನು ಸೇವಿಸುವದರಲ್ಲೇ ಇದರ ಗುಣ ಕಂಡು ಬರುವದು. ಪ್ರಮಾಣ:—ಬೆಳಿಗಿನಲ್ಲಿ ಒಂದು ತೊಲೆ ಮತ್ತು ಸಂಜೆಗೆ ಒಂದು ತೊಲೆ ತಕ್ಕೊಳ್ಳಬೇಕು.

ಬೆಲೆ—1 ಬಾಟ್ಲಿಗೆ ರೂ. 1—4-0, 3 ಬಾಟ್ಲಿಗೆ ರೂ. 3—8—0, 1 ಡಜನ್ ಬಾಟ್ಲಿಗಳಿಗೆ ರೂ. 12—0—0;

ಮ್ಯಾನೇಜರ್:—ದ್ರಾಕ್ಷಾವೃತ ಡಿಪೊ ಪೋಸ್ಟ್ ನಿಪ್ಪಾಣಿ ಜಿಲ್ಲಾ (ಬೆಳಗಾವ್.)

52—21 ಕೊಡಗಿನ ಏಜಂಟರು—ನಾವೆಲ್ಲ ಸ್ಟೋರ್ಸ್, ಮಡಿಕೇರಿ

ಬಿ ಪುಟ್ಟಯ್ಯ ಶೆಟ್ಟಿ & ಸನ್ಸ್, ಸೋಮವಾರಪೇಟೆ.

ಭಕ್ತಾ ಬ್ರದರ್ಸ್, ಕಾಸರಗೋಡು.] ಎ. ಎನ್. ಹುಚ್ಚಯ್ಯ, ಮರ್ಚೆಂಟ್, ಗೋಣಿಕೊಪ್ಪಲು.

ಓರಿಯಂಟಲ್ ಗವರ್ನಮೆಂಟ್ ಸೆಕ್ಯೂರಿಟಿ ಜೀವ ವಿಮೆ ಕಂಪೆನಿ ಲಿಮಿಟೆಡ್.

(೧೮೭೪ರಲ್ಲಿ ಇಂಡಿಯಾದಲ್ಲಿ ಸ್ಥಾಪನೆಯಾದದ್ದು) (ಹೆಡ್ ಆಫೀಸು—ಬೊಂಬಾಯಿ.

1934ನೇ ಇಸವಿಯ ಕಂಪೆನಿಯ ಕೆಲಸದ ಫಲಿತಾಂಶ—

ಹೊಸ ಪಾಲಿಸಿಗಳ ಪ್ರೀಮಿಯಂ	....	....	ರೂ.	7,62,42,761
ವಾರ್ಷಿಕ ಉತ್ಪತ್ತಿ	....	....	ರೂ.	3,14,01,970
ಚಾಲ್ತಿಯಲ್ಲಿರುವ ಒಟ್ಟು ಪಾಲಿಸಿಗಳು		....	ರೂ.	54,20,38,518
ಕ್ಲೇಯಿಮ್ಸ್‌ಗಳಿಗೆ ಕೊಟ್ಟ ಒಟ್ಟು ಹಣ		....	ರೂ.	16,29,88,814
ಫಂಡ್ಸ್ ಹೆಚ್ಚಿದ್ದು	....	....	ರೂ.	15,53,88,843

ಈ ಮೇಲಿನ ಫಲಿತಾಂಶಗಳು 'ಓರಿಯಂಟಲ್' ಕಂಪೆನಿಯ ಸುಸಂಘಟನೆಯನ್ನೂ ಮತ್ತು ಪ್ರಸಿದ್ಧಿಯನ್ನೂ ವಿಷದಗೊಳಿಸುತ್ತವೆ.

ಈ ಪ್ರಸಿದ್ಧಿಗೊಂಡಿರುವ ಮತ್ತು ಅಭಿವೃದ್ಧಿಯಲ್ಲಿರುವ ಇಂಡಿಯನ್ ಜೀವ ವಿಮೆ ಕಂಪೆನಿಯಲ್ಲಿ ವಿಮೆ ಇಳಿಸಲು ಸಾವಕಾಶ ಮಾಡಬೇಡಿ.

ಹೆಚ್ಚಿನ ಮಾಹಿತಿಗೆ ಕೆಳಗಿನ ವಿಳಾಸಕ್ಕೆ ಬರೆದುಕೊಳ್ಳತಕ್ಕದ್ದು:—

ಮೇನೇಜರ್, ಓರಿಯಂಟಲ್ ಬಿಲ್ಡಿಂಗ್ಸ್, ಬೊಂಬಾಯಿ.

(ಅಥವಾ ಕಂಪೆನಿಯ ಈ ಕೆಳಗಿನ ಯಾವ ಆಫೀಸಿಗಾದರೂ ಬರೆಯಬಹುದು.

ಆಗ್ರ	ಕಲ್ಲಿಕೋಟೆ	ಕರಾಚಿ	ಮೊಂಬಾಸ	ರಂಗೂನು
ಅಹ್ಮದಾಬಾದು	ಕಲ್ಕತ್ತಾ	ಕಾಲಾಲಂಪೂರು	ನಾಗಪುರ	ರಾವಲ್‌ಪಿಂಡಿ
ಅಜ್ಮೀರ್	ಕೊಲಂಬೊ	ಲಾಹೋರ್	ಪಾಟ್ನಾ	ಸಿಂಗಪುರ
ಅಲ್ಲಾಹಾಬಾದು	ಡಕ್ಕಾ	ಲಕ್ನೊ	ಪೂನ	ಸುಕ್ಕೂರು
ಅಂಬಾಲಾ	ಡೆಲ್ಲಿ	ಮದ್ರಾಸು	ರಾಯಿಪುರ	ತಿರುಚಿನಾಪಳ್ಳಿ
ಒಳ್ಳಾರಿ	ಗೌಹತಿ	ಮಂಡಲೆ	ರಾಜಶಾಹಿ	ತಿರುವೆಂಡ್ರಮ್
ಬರೇಲಿ	ಜಲಗಾಂ	ಮಡಿಕೇರಿ	ರಾಂಚಿ	ವಿಶಾಖಪಟ್ಟಣ
ಕೊಯಂಬುತ್ತೂರು	ಗುಂಟೂರು	ಜಲ್‌ಪೇಗುರಿ	ಜಬ್ಬಲ್‌ಪುರ	ಮಧುರೆ & ಮೈಸೂರು

ಓರಿಯಂಟಲ್ ಬಿಲ್ಡಿಂಗ್ಸ್, ಸೌತ್ ಪೇರೇಡ್, ಬೆಂಗಳೂರು, } 52—3

ಯಂ. ವಿ. ಮುತ್ತುಕೃಷ್ಣ ನಾಯುಡು,

(ಬ್ರಾಂಚ್ ಸೆಕ್ರೆಟರಿ.)

Printed & Published by P. I. Belliappa, at 'Kodagu" Press, Mercara for "Kodagu" Ltd.